ಗುರುವಾರ, ಮೇ 6, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 126 | ಪುಟ 10

www.prajavani.net


/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಓದಿರುವುದನ್ನು ಒರೆಗೆ ಹಚ್ಚಲು ಸ್ವಮೌಲ್ಯಮಾಪನ ಅಗತ್ಯ. ಇದರಿಂದ ಸಾಮರ್ಥ್ಯ ಮತ್ತು ಕೌಶಲಗಳನ್ನು ಹೆಚ್ಚಿಸಿಕೊಳ್ಳಬಹುದು.



ಆಳ-ಅಗಲ: ಒಡೆದ ಬಯೊಬಬಲ್ ಮುಂದೇನು?

ಬೇಕು 1.66 ಕೋಟಿ ಡೋಸ್ ಲಸಿಕೆ 2

ಮೂರನೇ ಅಲೆ ಖಚಿತ: ಸಿದ್ಧತೆಗೆ ಕರೆ 8

ಸೆನ್ಸೆಕ್ಸ್	ನಿಫ್ಟಿ	₹/$
48,667 ▲	14,617 ▲	73.91 ▼

ಪೂರೈಕೆ ವಿಳಂಬ: ಕೋವಿಡ್ ಲಸಿಕೆ 'ನೋ ಸ್ಟಾಕ್'!

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಬೆನ್ನಲ್ಲೇ, ಲಸಿಕೆ ಹಾಕಿಸಿಕೊಳ್ಳಲು ಜನರು ವಿವಿಧ ಸರ್ಕಾರಿ– ಖಾಸಗಿ ಆಸ್ಪತ್ರೆಗಳಲ್ಲಿರುವ ಲಸಿಕಾ ಕೇಂದ್ರಗಳತ್ತ ದೌಡಾಯಿಸುತ್ತಿದ್ದಾರೆ. 45 ವರ್ಷ ದಾಟಿದವರಿಗೆ ಕೇಂದ್ರ ಸರ್ಕಾರ ಉಚಿತವಾಗಿ ಲಸಿಕೆ ನೀಡುತ್ತಿದ್ದರೂ, ಸಾಕಷ್ಟು ಪ್ರಮಾಣದಲ್ಲಿ ಪೂರೈಕೆ ಆಗದಿರುವುದರಿಂದ ಹಲವೆಡೆ 'ನೋ ಸ್ಟಾಕ್' ಫಲಕ ತೂಗು ಹಾಕಲಾಗಿದೆ.

ರಾಜ್ಯದಲ್ಲಿ 60 ವರ್ಷ ದಾಟಿದವರು 35.64 ಲಕ್ಷ ಜನರು ಮೊದಲ ಡೋಸ್ ಹಾಕಿಸಿಕೊಂಡಿದ್ದರೆ, ಈ ಪೈಕಿ 8.23 ಲಕ್ಷ ಜನ ಮಾತ್ರ ಎರಡನೇ ಡೋಸ್ ಹಾಕಿಸಿಕೊಂಡಿದ್ದಾರೆ. 44ರಿಂದ 59ರ ವಯೋಮಾನದ 36.38 ಲಕ್ಷ ಜನರು ಈಗಾಗಲೇ ಮೊದಲ ಡೋಸ್ ಹಾಕಿಸಿಕೊಂಡಿದ್ದು, ಅವರಲ್ಲಿ ಕೇವಲ 3.16 ಲಕ್ಷ ಜನ ಮಾತ್ರ ಎರಡನೇ ಡೋಸ್ ಹಾಕಿಸಿಕೊಂಡಿದ್ದಾರೆ. ಬುಧವಾರದ ವೇಳೆಗೆ ಲಸಿಕೆ ತೆಗೆದುಕೊಂಡವರ ಒಟ್ಟು ಸಂಖ್ಯೆ ರಾಜ್ಯದಲ್ಲಿ 1 ಕೋಟಿ ದಾಟಿದೆ.

'ಕೋವಿಡ್ ಎರಡನೇ ಅಲೆ ತೀವ್ರಗೊಂಡ ಬಳಿಕ 44 ವರ್ಷ ದಾಟಿದವರು ಹೆಚ್ಚಿನ ಸಂಖ್ಯೆಯಲ್ಲಿ ಲಸಿಕೆ ಹಾಕಿಸಿಕೊಳ್ಳಲು ಕೇಂದ್ರಗಳಿಗೆ ಬರುತ್ತಿದ್ದಾರೆ. ಅಲ್ಲದೆ, ಅದರಲ್ಲೂ ಮೊದಲ ಡೋಸ್ ಪಡೆದುಕೊಂಡವರು ಎರಡನೇ ಡೋಸ್ ಹಾಕಿಸಿಕೊಳ್ಳಲು ಮುಗಿ ಬೀಳುತ್ತಿದ್ದಾರೆ. ಹೀಗಾಗಿ ಲಸಿಕಾ ಕೇಂದ್ರಗಳಲ್ಲಿ ಜನಸಂದಣಿ ಉಂಟಾಗುತ್ತಿದೆ. ಆದರೆ, ಸಾಕಷ್ಟು ಪ್ರಮಾಣದಲ್ಲಿ ಲಸಿಕೆ ಪೂರೈಕೆ ಆಗುತ್ತಿಲ್ಲ' ಎಂದು ಲಸಿಕಾ ಕೇಂದ್ರದ ಸಿಬ್ಬಂದಿಯೊಬ್ಬರು ಹೇಳಿದರು.

ಮೊದಲ ಡೋಸ್ ಕೋವಿಶೀಲ್ಡ್ ಲಸಿಕೆ ಹಾಕಿಸಿಕೊಂಡವರ ಪೈಕಿ, ಬಹುತೇಕರಿಗೆ ಎರಡನೇ ಡೋಸ್ ಸಿಕ್ಕಿದೆ. ಆದರೆ, ಕೋವ್ಯಾಕ್ಸಿನ್ ನಿರೀಕ್ಷಿತ ಪ್ರಮಾಣದಲ್ಲಿ ಸರಬರಾಜು ಆಗಿಲ್ಲ. ಹೀಗಾಗಿ, ಹಲವು ಜಿಲ್ಲೆಗಳಲ್ಲಿ ಈ ಲಸಿಕೆಯನ್ನು ಮೊದಲ ಡೋಸ್ ಹಾಕಿಸಿಕೊಂಡವರು ಲಸಿಕಾ ಕೇಂದ್ರಗಳಿಗೆ ಬಂದು ವಾಪಸ್ ಆಗುತ್ತಿದ್ದಾರೆ. ಈ ಪೈಕಿ, ಮೊದಲ ಡೋಸ್ ತೆಗೆದುಕೊಂಡು 50 ದಿನ ದಾಟಿದವರೂ ಇದ್ದಾರೆ.

18ರಿಂದ 44 ವರ್ಷ ವಯೋಮಾನದ ವರೆಗಿನವರಿಗೆ ರಾಜ್ಯ ಸರ್ಕಾರ ಲಸಿಕೆ ಖರೀದಿಸಿ ಉಚಿತವಾಗಿ ನೀಡಲು ನಿರ್ಧರಿಸಿದ್ದು, ಈ ಅಭಿಯಾನಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮೇ 1ರಂದು ನಗರದ ಬೌರಿಂಗ್ ಆಸ್ಪತ್ರೆಯಲ್ಲಿ ಚಾಲನೆ ನೀಡಿದ್ದರು. ಆದರೆ, ಸಾಕಷ್ಟು ಪ್ರಮಾಣದಲ್ಲಿ ಲಸಿಕೆ ಪೂರೈಕೆಗೂ ಮೊದಲೇ ತರಾತುರಿಯಲ್ಲಿ ಚಾಲನೆ ನೀಡಿರುವುದು ಗೊಂದಲಕ್ಕೆ ಕಾರಣವಾಗಿದೆ.

8ನೇ ಪುಟ ನೋಡಿ

ರಾಜ್ಯದಲ್ಲಿ ಕೋವಿಡ್ ಲಸಿಕೆ
(ಫೆ. 16ರಿಂದ ಮೇ 5ರವರೆಗೆ)

ವಯೋಮಾನ	ಮೊದಲ ಡೋಸ್	2ನೇ ಡೋಸ್
60 ದಾಟಿದವರು	35,64,167	8,23,432
44ರಿಂದ 59	36,38,269	3,16,687
18ರಿಂದ 44*	5,136	-


(*ಮೇ 1ರಿಂದ)



ಲಸಿಕೆ ಅಭಾವದಿಂದ 18ರಿಂದ 44 ವಯೋಮಾನದವರಿಗೆ ಲಸಿಕೆ ನೀಡುವ ಕೆಲಸ ಮಂದಗತಿಯಲ್ಲಿ ಸಾಗುತ್ತಿದೆ. ಮೇ 2ನೇ ವಾರದಲ್ಲಿ 15 ಲಕ್ಷ ಡೋಸ್ ಲಸಿಕೆ ಬರುವ ನಿರೀಕ್ಷೆಯಿದೆ

ಡಾ.ಸಿ.ಎನ್. ಅಶ್ವತ್ಥನಾರಾಯಣ
ಕೋವಿಡ್ ಕಾರ್ಯಪಡೆ ಅಧ್ಯಕ್ಷ

ಪ್ರಜಾವಾಣಿ



ಕೋವಿಡ್ ದೃಢಪಟ್ಟಾಗ ಏನು ಮಾಡಬೇಕು? ಪ್ರತ್ಯೇಕ ವಾಸದಲ್ಲಿ ಯಾವೆಲ್ಲಾ ಎಚ್ಚರಿಕೆ ವಹಿಸಬೇಕು? ಯಾವ್ಯಾವ ಪರೀಕ್ಷೆಗಳನ್ನು ಮಾಡಿಸಬೇಕು? ರಕ್ತದ ಆಮ್ಲಜನಕ ಮಟ್ಟವನ್ನು ಪರೀಕ್ಷಿಸುವುದು ಹೇಗೆ? ಇಂಥ ಪ್ರಶ್ನೆಗಳು ನಿಮ್ಮಲೂ ಮೂಡಿವೆಯೇ? 'ಪ್ರಜಾವಾಣಿ'ಯು ಆನ್‌ಲೈನ್‌ನಲ್ಲಿ ಪ್ರಕಟಿಸಿರುವ ಕೋವಿಡ್–19 ಕೈಪಿಡಿಯಲ್ಲಿ, ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವಿದೆ. ಸಹಾಯವಾಣಿ ಸಂಖ್ಯೆಗಳಿಂದ ಆರಂಭಿಸಿ ಮಾರ್ಗಸೂಚಿಗಳು ಹಾಗೂ ಸಲಹೆ ಸೂಚನೆಗಳವರೆಗೆ ಸಮಗ್ರ ಮಾಹಿತಿಯು ಈ ಕೈಪಿಡಿಯಲ್ಲಿದೆ. ಈ ಇ–ಪುಸ್ತಕವನ್ನು ಡೌನ್‌ಲೋಡ್ ಮಾಡಲು ಕ್ಯುಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.

ಆಮ್ಲಜನಕ: ಕೇಂದ್ರ ಸರ್ಕಾರಕ್ಕೆ ಹೈಕೋರ್ಟ್ ಆದೇಶ

ದಿನವೂ 1200 ಟನ್ ಕೊಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಆಮ್ಲಜನಕ ಹಂಚಿಕೆಯ ಪಾಲನ್ನು (ಕೋಟಾ) ತಕ್ಷಣದಿಂದಲೇ ಅನ್ವಯವಾಗುವಂತೆ ಪ್ರತಿ ದಿನಕ್ಕೆ 1,200 ಟನ್‌ಗೆ ಹೆಚ್ಚಿಸುವಂತೆ ಕೇಂದ್ರ ಸರ್ಕಾರಕ್ಕೆ ಹೈಕೋರ್ಟ್ ಬುಧವಾರ ಆದೇಶಿಸಿದೆ.

ಕೋವಿಡ್‌ಗೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕಾ ನೇತೃತ್ವದ ವಿಭಾಗೀಯ ಪೀಠ, 'ಆಮ್ಲಜನಕ ಹಂಚಿಕೆಯ ಕೋಟಾ ಹೆಚ್ಚಿಸುವಂತೆ ರಾಜ್ಯ ಸರ್ಕಾರ ಏಪ್ರಿಲ್ 30ರಂದು ಸಲ್ಲಿಸಿರುವ ಮನವಿಯನ್ನು ಕೇಂದ್ರ ಸರ್ಕಾರ ಪುರಸ್ಕರಿಸುವವರೆಗೂ ಪ್ರತಿನಿತ್ಯ 1,200 ಟನ್ ಕೋಟಾ ಮುಂದುವರಿಸಬೇಕು' ಎಂದು ಹೇಳಿತು.

'ಎಲ್ಲ ರಾಜ್ಯಗಳಲ್ಲೂ ಆಮ್ಲಜನಕದ ಕಾಯ್ದಿರಿಸಿದ ದಾಸ್ತಾನು (ಬಫರ್ ಸ್ಟಾಕ್) ವ್ಯವಸ್ಥೆ ಮಾಡುವಂತೆ ಸುಪ್ರೀಂಕೋರ್ಟ್ ಏಪ್ರಿಲ್ 30ರಂದು ಕೇಂದ್ರ ಸರ್ಕಾರಕ್ಕೆ ಆದೇಶ ನೀಡಿತ್ತು. ಆದರೆ, ಈವರೆಗೂ ಕೇಂದ್ರ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ವಿಭಾಗೀಯ ಪೀಠ ಅಸಮಾಧಾನ ವ್ಯಕ್ತಪಡಿಸಿತು.

ಕರ್ನಾಟಕಕ್ಕೆ ಪ್ರತಿ ದಿನದ ಆಮ್ಲಜನಕ ಹಂಚಿಕೆಯ ಪಾಲನ್ನು 865 ಟನ್‌ಗಳಿಂದ 965 ಟನ್‌ಗಳಿಗೆ ಹೆಚ್ಚಿಸಲು ನಿರ್ಧಾರ ಕೈಗೊಂಡಿರುವುದಾಗಿ ಕೇಂದ್ರ ಸರ್ಕಾರ ವಿಚಾರಣೆಯ ಆರಂಭದಲ್ಲೇ ನ್ಯಾಯಾಲಯಕ್ಕೆ ಮಾಹಿತಿ ನೀಡಿತು. ಕೋವಿಡ್ ಪ್ರಕರಣಗಳ ಏರಿಕೆಯ ಆಧಾರದಲ್ಲಿ ಹೆಚ್ಚುವರಿ ಬೇಡಿಕೆಯನ್ನು ಪರಿಶೀಲಿಸಿ, ನಾಲ್ಕು ದಿನಗಳೊಳಗೆ ಹೊಸದಾಗಿ ಆಮ್ಲಜನಕದ ಪರಿಷ್ಕೃತ ಬೇಡಿಕೆ ಪತ್ರ ಸಲ್ಲಿಸುವಂತೆ ನ್ಯಾಯಪೀಠ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತು.

ಬುಧವಾರದ (ಮೇ 5) ವೇಳೆಗೆ ರಾಜ್ಯದಲ್ಲಿ ಸಕ್ರಿಯ ಕೋವಿಡ್ ಪ್ರಕರಣಗಳ ಸಂಖ್ಯೆ 3.95 ಲಕ್ಷ ತಲುಪುವ ಅಂದಾಜಿದೆ. ಆ ವೇಳೆಗೆ ರಾಜ್ಯಕ್ಕೆ ಪ್ರತಿದಿನ 1,792 ಟನ್ ಆಮ್ಲಜನಕದ ಅಗತ್ಯ ಇದೆ. ಕನಿಷ್ಠ 1,162 ಟನ್ ನಷ್ಟಾದರೂ ಆಮ್ಲಜನಕ ಪೂರೈಕೆ ಆಗಲೇಬೇಕು ಎಂದು ರಾಜ್ಯ ಸರ್ಕಾರ ಏಪ್ರಿಲ್ 3ರಂದು ಕೇಂದ್ರ ವಾಣಿಜ್ಯ ಸಚಿವಾಲಯಕ್ಕೆ ಬರೆದ ಪತ್ರದಲ್ಲಿ ಬೇಡಿಕೆ ಮಂಡಿಸಿತ್ತು.

8ನೇ ಪುಟ ನೋಡಿ



ಬಹರೇನ್‌ನಿಂದ ಮಂಗಳೂರಿಗೆ ಬಂದ ಆಮ್ಲಜನಕದ ಟ್ಯಾಂಕ್‌ಗಳನ್ನು ಹಡಗಿನಿಂದ ಬುಧವಾರ ಇಳಿಸಲಾಯಿತು

ಸುದ್ದಿ 04

ಕೇಂದ್ರದ ಅನುಮತಿ ನಿರೀಕ್ಷೆ: ಶೆಟ್ಟರ್

'ರಾಜ್ಯದಲ್ಲಿ ಉತ್ಪಾದಿಸುತ್ತಿರುವ ಆಮ್ಲಜನಕವನ್ನು ಇಲ್ಲಿಯೇ ಬಳಸಿಕೊಳ್ಳಲು ಅನುಮತಿ ನೀಡುವಂತೆ ಕೇಂದ್ರ ಸಚಿವರ ಜೊತೆ ದೂರವಾಣಿಯಲ್ಲಿ ಚರ್ಚಿಸಿದ್ದೇನೆ. ಶೀಘ್ರದಲ್ಲೇ ಅನುಮತಿ ಸಿಗಲಿದೆ' ಎಂದು ಕೈಗಾರಿಕೆ ಸಚಿವ ಜಗದೀಶ ಶೆಟ್ಟರ್ ವಿಶ್ವಾಸ ವ್ಯಕ್ತಪಡಿಸಿದರು.

ಆಕ್ಸಿಜನ್ ಪೂರೈಕೆ ಮತ್ತು ಸರಬರಾಜು ಕುರಿತಂತೆ ಹಿರಿಯ ಅಧಿಕಾರಿಗಳ ಜೊತೆ ಬುಧವಾರ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, 'ರಾಜ್ಯದಲ್ಲಿ ಆಮ್ಲಜನಕ ಉತ್ಪಾದನೆ ಪ್ರಮಾಣ ಹೆಚ್ಚಿಸಲಾಗಿದ್ದು, ಬಳ್ಳಾರಿಯ ಜಿಂದಾಲ್‌ನಲ್ಲಿ ಈಗಾಗಲೇ ಉತ್ಪಾದನೆ ಹೆಚ್ಚಾಗಿದೆ. ಅಲ್ಲದೆ, ಕೇಂದ್ರ ಸರ್ಕಾರ ಹೊರ ರಾಜ್ಯಗಳಿಂದಲೂ ಆಮ್ಲಜನಕ ಹಂಚಿಕೆ ಮಾಡಿದೆ' ಎಂದರು.

'ಸ್ಟೀಲ್ ಉತ್ಪಾದನೆ ಕಡಿಮೆಗೊಳಿಸಿ ಆಮ್ಲಜನಕ ಉತ್ಪಾದನೆ ಹೆಚ್ಚಿಸುವಂತೆ ಜಿಂದಾಲ್ ಮುಖ್ಯಸ್ಥರಿಗೆ ಸೂಚನೆ ನೀಡಲಾಗಿದೆ' ಎಂದೂ ಹೇಳಿದರು.

ಮೀಸಲು ಮಿತಿ ತೀರ್ಪು ಮರುಪರಿಶೀಲನೆ ಇಲ್ಲ

ಮಹಾರಾಷ್ಟ್ರದ ಮರಾಠಾ ಮೀಸಲಾತಿ ಕಾಯ್ದೆ ರದ್ದು

ನವದೆಹಲಿ (ಪಿಟಿಐ): ಮೀಸಲಾತಿಯ ಒಟ್ಟು ಪ್ರಮಾಣವು ಶೇ 50ರಷ್ಟನ್ನು ಮೀರಬಾರದು ಎಂದು ಹೇಳಿದ್ದ 1992ರ ಇಂದಿರಾ ಸಾಹ್ನಿ ಪ್ರಕರಣದ ತೀರ್ಪನ್ನು (ಇದನ್ನು ಮಂಡಲ್ ತೀರ್ಪು ಎಂದೂ ಹೇಳಲಾಗುತ್ತದೆ) ಮರುಪರಿಶೀಲನೆಗೆ ಒಳಪಡಿಸುವ ಅಗತ್ಯ ಇಲ್ಲ. ವಿವಿಧ ತೀರ್ಪುಗಳ ಸಂದರ್ಭದಲ್ಲಿ ಪದೇ ಪದೇ ಈ ತೀರ್ಪನ್ನು ಎತ್ತಿ ಹಿಡಿಯಲಾಗಿದೆ ಎಂದು ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಪೀಠವು ಬುಧವಾರ ಹೇಳಿದೆ.

ಮರಾಠಾ ಸಮುದಾಯಕ್ಕೆ ಸರ್ಕಾರಿ ಉದ್ಯೋಗ ಮತ್ತು ಶಿಕ್ಷಣ ಸಂಸ್ಥೆಗಳ ಪ್ರವೇಶದಲ್ಲಿ ಮೀಸಲು ನೀಡುವುದಕ್ಕಾಗಿ ಮಹಾರಾಷ್ಟ್ರ ಸರ್ಕಾರ ರೂಪಿಸಿದ್ದ ಕಾಯ್ದೆಯನ್ನು ಪೀಠವು ರದ್ದುಪಡಿಸಿದೆ. ಶೇ 50ರ ಮೀಸಲು ಮಿತಿಯನ್ನು ಮೀರಿ ಮರಾಠಾ ಸಮುದಾಯಕ್ಕೆ ಮೀಸಲಾತಿ ನೀಡಲು ಅಸಾಧಾರಣ ಎನ್ನುವಂತಹ ಪರಿಸ್ಥಿತಿ ಏನೂ ಸೃಷ್ಟಿಯಾಗಿಲ್ಲ ಎಂದು ನ್ಯಾಯಮೂರ್ತಿ ಅಶೋಕ್ ಭೂಷಣ್ ನೇತೃತ್ವದ ಪೀಠವು ಹೇಳಿದೆ.

ಮರಾಠಾ ಸಮುದಾಯಕ್ಕೆ ಮೀಸಲಾತಿ ನೀಡಲು ಆಧಾರವಾಗಿರುವ ಎಂ.ಸಿ. ಗಾಯಕವಾಡ್ ಸಮಿತಿಯು ಅಸಾಧಾರಣ ಎನ್ನಬಹುದಾದ ಸನ್ನಿವೇಶವನ್ನು ವರದಿಯಲ್ಲಿ ಉಲ್ಲೇಖಿಸಿಲ್ಲ ಎಂದು ನ್ಯಾಯಮೂರ್ತಿಗಳಾದ ಎಲ್. ಎನ್. ರಾವ್, ಹೇಮಂತ್ ಗುಪ್ತಾ, ಎಸ್. ರವೀಂದ್ರ ಭಟ್ ಮತ್ತು ಎಸ್. ಅಬ್ದುಲ್ ನಜೀರ್ ಅವರು ಸದಸ್ಯರಾಗಿರುವ ಪೀಠ ಹೇಳಿದೆ.

ಸಂವಿಧಾನ ಪೀಠವು ಒಟ್ಟು ನಾಲ್ಕು ತೀರ್ಪುಗಳನ್ನು ನೀಡಿದೆ. ಅದರ ಪೈಕಿ ಮೂರರ ಬಗ್ಗೆ ಎಲ್ಲ ನ್ಯಾಯಮೂರ್ತಿಗಳಲ್ಲಿ ಒಮ್ಮತ ಇತ್ತು. ಇದರಲ್ಲಿ ಮರಾಠಾ ಮೀಸಲು ರದ್ದತಿಯೂ ಸೇರಿದೆ.

ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳನ್ನು (ಎಸ್‌ಇಬಿಸಿ) ಗುರುತಿಸಲು ರಾಜ್ಯಗಳಿಗೆ ಅಧಿಕಾರ ಇಲ್ಲ ಎಂದು ಹೇಳುವ ಸಂವಿಧಾನದ 102ನೇ ತಿದ್ದುಪಡಿ ವಿಚಾರದಲ್ಲಿ ಪೀಠವು ಭಿನ್ನಮತದ ತೀರ್ಪು ನೀಡಿದೆ. ಮೂವರು ನ್ಯಾಯಮೂರ್ತಿಗಳು ಇದರ ಪರವಾಗಿ ತೀರ್ಪು ನೀಡಿದ್ದಾರೆ. ಅಶೋಕ್ ಭೂಷಣ್ ಮತ್ತು ನಜೀರ್ ಅವರು ಕೇಂದ್ರ ಮತ್ತು ರಾಜ್ಯಗಳೆರಡಕ್ಕೂ ಅಧಿಕಾರ ಇರಬೇಕು ಎಂದು ಹೇಳಿದ್ದಾರೆ.


ಎಸ್‌ಇಬಿಸಿಯ ಹೊಸ ಪಟ್ಟಿಯನ್ನು ಕೇಂದ್ರವು ಸಿದ್ಧಪಡಿಸಬೇಕು ಮತ್ತು ಅಲ್ಲಿಯವರೆಗೆ ಈಗ ಇರುವ ಪಟ್ಟಿಗೆ ಅನುಗುಣವಾಗಿ ನಡೆದುಕೊಳ್ಳಬೇಕು ಎಂಬ ವಿಚಾರದಲ್ಲಿಯೂ ಪೀಠವು ಒಮ್ಮತದ ತೀರ್ಪು ಕೊಟ್ಟಿದೆ.

ಮರಾಠರಿಗೆ ಮೀಸಲಾತಿ ನೀಡುವ ಕಾಯ್ದೆಯನ್ನು ಬಾಂಬೆ ಹೈಕೋರ್ಟ್ 2019ರಲ್ಲಿ ಎತ್ತಿ ಹಿಡಿದಿತ್ತು.

9ನೇ ಪುಟ ನೋಡಿ

102ನೇ ತಿದ್ದುಪಡಿ ಏನು?

ಸಂವಿಧಾನಕ್ಕೆ 2018ರಲ್ಲಿ 102ನೇ ತಿದ್ದುಪಡಿ ಮಾಡಿ 338ಬಿ ಮತ್ತು 342ಎ ವಿಧಿಗಳನ್ನು ಸೇರಿಸಲಾಗಿದೆ. 338ಬಿ ವಿಧಿಯು ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗದ ರಚನೆ, ಕರ್ತವ್ಯಗಳು ಮತ್ತು ಅಧಿಕಾರಕ್ಕೆ ಸಂಬಂಧಿಸಿದ್ದಾಗಿದೆ. 342ಎ ವಿಧಿಯು ನಿರ್ದಿಷ್ಟ ಜಾತಿಯು ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಕ್ಕೆ ಸೇರುತ್ತದೆಯೇ ಎಂಬುದನ್ನು ನಿರ್ಧರಿಸುವ ಅಧಿಕಾರವನ್ನು ರಾಷ್ಟ್ರಪತಿಗೆ ನೀಡುತ್ತದೆ; ಪಟ್ಟಿಯನ್ನು ಬದಲಾಯಿಸುವ ಅಧಿಕಾರವನ್ನು ಸಂಸತ್ತಿಗೆ ನೀಡುತ್ತದೆ.



ಆಸ್ತಿ ತೆರಿಗೆ ರಿಯಾಯ್ತಿ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಹೊರತುಪಡಿಸಿ ರಾಜ್ಯದ ಇತರ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಪಾವತಿಸುವವರಿಗೆ ಶೇಕಡ 5ರಷ್ಟು ರಿಯಾಯ್ತಿ ನೀಡುವ ಕಾಲಾವಧಿಯನ್ನು ಜೂನ್ 30ರವರೆಗೂ ವಿಸ್ತರಿಸಲಾಗಿದೆ.

ಈ ಹಿಂದಿನ ಆದೇಶದ ಪ್ರಕಾರ, ಏಪ್ರಿಲ್ 30ರೊಳಗೆ ಆಸ್ತಿ ತೆರಿಗೆ ಪಾವತಿಸುವವರಿಗೆ ಶೇ 5ರಷ್ಟು ರಿಯಾಯ್ತಿ ನೀಡಲಾಗುತ್ತಿತ್ತು. ಕೋವಿಡ್ ಕಾರಣದಿಂದ ರಿಯಾಯ್ತಿ ಅವಧಿಯನ್ನು ಜೂನ್ 30ರವರೆಗೂ ವಿಸ್ತರಿಸಿ ನಗರಾಭಿವೃದ್ಧಿ ಇಲಾಖೆ ಬುಧವಾರ ಆದೇಶ ಹೊರಡಿಸಿದೆ.

ಕೋವಿಡ್: ದೇಶದಲ್ಲಿ 4.06 ಲಕ್ಷ ಪ್ರಕರಣ

ನವದೆಹಲಿ: ದೇಶದಲ್ಲಿ ಕಳೆದ 24 ಗಂಟೆಗಳಲ್ಲಿ (ಮಧ್ಯರಾತ್ರಿ 12ರವರೆಗೆ) ಕೋವಿಡ್ ದೃಢಪಟ್ಟವರ ಸಂಖ್ಯೆ 4,06,383 ಆಗಿದ್ದು, 3838 ಮಂದಿ ಮೃತಪಟ್ಟಿದ್ದಾರೆ.

ದೇಶದಲ್ಲಿ ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆ 35.62 ಲಕ್ಷ ಮತ್ತು ಒಟ್ಟು ಪ್ರಕರಣಗಳ ಸಂಖ್ಯೆ 2.10 ಕೋಟಿ ಆಗಿದೆ.

17 ಮುಸ್ಲಿಮರನ್ನು ಮಾತ್ರ ಗುರಿಪಡಿಸಿದ್ದೇಕೆ– ಜಾಲತಾಣಗಳಲ್ಲಿ ಪ್ರಶ್ನೆ

ಹಾಸಿಗೆ ಬ್ಲಾಕ್ ದಂಧೆಗೆ ಕೋಮು ಬಣ್ಣ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ದಕ್ಷಿಣ ವಲಯದ ಕೋವಿಡ್ ವಾರ್ ರೂಂ ಸಿಬ್ಬಂದಿ ಬಿಬಿಎಂಪಿ ಮೂಲಕ ಹಂಚಿಕೆ ವೇಳೆ ಅವ್ಯವಹಾರ ನಡೆಸುತ್ತಿದ್ದಾರೆ ಎಂದು ಸಂಸದ ತೇಜಸ್ವಿ ಸೂರ್ಯ ಮತ್ತು ಮೂವರು ಶಾಸಕರು ಆರೋಪ ಮಾಡಿದ ಬೆನ್ನಲ್ಲೇ ಈ ವಿವಾದ ಕೋಮು ಬಣ್ಣ ಪಡೆದುಕೊಂಡಿದೆ.

ಬಿಬಿಎಂಪಿ ದಕ್ಷಿಣ ವಲಯದ ವಾರ್ ರೂಮ್‌ಗೆ ಮಂಗಳವಾರ ಭೇಟಿ ನೀಡಿದ್ದ ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ಸತೀಶ್ ರೆಡ್ಡಿ, ಎಲ್.ಎ.ರವಿ ಸುಬ್ರಹ್ಮಣ್ಯ ಹಾಗೂ ಉದಯ್ ಗರುಡಾಚಾರ್ ಅವರ ತಂಡವು ವಾರ್ ರೂಂನಲ್ಲಿ ಮುಸ್ಲಿಂ ಸಿಬ್ಬಂದಿಯನ್ನು ನೇಮಿಸಿಕೊಂಡ ಬಗ್ಗೆ ಪ್ರಶ್ನೆ ಮಾಡಿತ್ತು. ಮುಸ್ಲಿಂ ಸಿಬ್ಬಂದಿಯ ಹೆಸರುಗಳನ್ನು ಓದಿದ್ದ ತೇಜಸ್ವಿ ಸೂರ್ಯ, 'ಇವರನ್ನೆಲ್ಲ ಹೇಗೆ ನೇಮಿಸಿಕೊಂಡಿರಿ' ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದರು. ರವಿಸುಬ್ರಹ್ಮಣ್ಯ ಅವರಂತೂ 'ನೀವೇನು ಮದರಸಾ ನಡೆಸುತ್ತಿದ್ದೀರಾ, ಕಾರ್ಪೊರೇಷನ್ ನಡೆಸುತ್ತಿದ್ದೀರಾ' ಎಂದೂ ಪ್ರಶ್ನಿಸಿದ್ದರು.

ಇದಾದ ಕೆಲವೇ ಕ್ಷಣಗಳಲ್ಲಿ, ಅನೇಕರು 'ಇದು ಬೆಂಗಳೂರಿನ ಸಾವಿರಾರು ಮಂದಿಯನ್ನು ಕೊಂದ ಬಿಬಿಎಂಪಿ ವಾರ್ ರೂಂನಲ್ಲಿ ಕಾರ್ಯನಿರ್ವಹಿಸುತ್ತಿರುವ ಉಗ್ರರ ಪಟ್ಟಿ' ಎಂಬ ಸಂದೇಶವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದರು. 16 ಮಂದಿ ಮುಸ್ಲಿಂ ಸಿಬ್ಬಂದಿ ಹಾಗೂ ಈ ವಾರ್ ರೂಂ ನಿರ್ವಹಣೆಗೆ ಸಂಬಂಧವೇ ಇಲ್ಲದ ಬಿಬಿಎಂಪಿ ಜಂಟಿ ಆಯುಕ್ತ (ಕಸ ನಿರ್ವಹಣೆ) ಸರ್ಫರಾಜ್ ಖಾನ್ ಹೆಸರನ್ನು ಸೇರಿಸಿದ ಪಟ್ಟಿಯನ್ನೂ ಇದರ ಜೊತೆ ಹಂಚಿಕೊಂಡಿದ್ದರು. 16 ಮಂದಿ ಮುಸ್ಲಿಂ ಸಿಬ್ಬಂದಿಯನ್ನು ಮಂಗಳವಾರವೇ ಕೆಲಸದಿಂದ ತೆಗೆಯಲಾಗಿದೆ.

'ನಮ್ಮ ವಾರ್ ರೂಂ ನಲ್ಲಿ ಬೆಳಗ್ಗಿನ ಪಾಳಿಯಲ್ಲಿ 87, ಎರಡನೇ ಪಾಳಿಯಲ್ಲಿ 87 ಹಾಗೂ ರಾತ್ರಿ ಪಾಳಿಯಲ್ಲಿ 33 ಮಂದಿ ಕಾರ್ಯ ನಿರ್ವಹಿಸುತ್ತಾರೆ. ಇದರಲ್ಲಿ ಬೇರೆ ಬೇರೆ ಧರ್ಮದವರಿದ್ದಾರೆ. ಅರ್ಜಿ ಕರೆದೇ ಅವರನ್ನೆಲ್ಲ ನಿಯುಕ್ತಿ ಮಾಡಲಾಗಿತ್ತು' ಎಂದು ಬಿಬಿಎಂಪಿ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

'ಬೆಂಗಳೂರಿನಲ್ಲಿ ಬಯಲಾದ ಬೆಡ್ ಬುಕ್ಕಿಂಗ್ ಮಾಫಿಯಾ ಜಾಗತಿಕ ಭಯೋತ್ಪಾದನೆಯ ಹೊಸರೂಪ. ಸೇವೆ ಹಾಗೂ ಉದ್ಯಮದ ಹೆಸರಿನಲ್ಲಿ ವ್ಯವಸ್ಥೆಯ ಒಳನುಸುಳುವ ಈ ಉಗ್ರರು ಬಾಂಬ್ ಸ್ಫೋಟಿಸದೇ ಜನರ ಪ್ರಾಣ ತೆಗೆದಿದ್ದಾರೆ. ಬಿಜೆಪಿ ಸರ್ಕಾರಕ್ಕೆ ಕಳಂಕ ತರಲು ರೂಪಿಸಿದ ದಂಧೆಯ ಹಿಂದಿರುವ ಕೈಗಳಿಗೆ ಧಿಕ್ಕಾರವಿರಲಿ' ಎಂದು ಬಿಜೆಪಿ ಟ್ವೀಟ್ ಮಾಡಿತ್ತು.

ಕರೆ ಸ್ವೀಕರಿಸದ ಸಂಸದ, ಶಾಸಕರು

ವಾರ್ ರೂಂ ಪರಿಶೀಲನೆ ಸಂದರ್ಭದಲ್ಲಿ 17 ಮಂದಿ ಮುಸ್ಲಿಂ ಸಿಬ್ಬಂದಿಯನ್ನು ಮಾತ್ರ ಗುರಿಯಾಗಿಸಿ ಪ್ರಶ್ನೆ ಮಾಡಿದ ಬಗ್ಗೆ ಪ್ರತಿಕ್ರಿಯೆ ಪಡೆಯಲು ಸಂಸದ ತೇಜಸ್ವಿ ಸೂರ್ಯ, ಶಾಸಕ ಸತೀಶ ರೆಡ್ಡಿ ಹಾಗೂ ರವಿ ಸುಬ್ರಹ್ಮಣ್ಯ ಅವರಿಗೆ 'ಪ್ರಜಾವಾಣಿ' ಕರೆ ಮಾಡಿತು. 10ಕ್ಕೂ ಅಧಿಕ ಬಾರಿ ಕರೆ ಮಾಡಿದರೂ ಅವರು ಸ್ವೀಕರಿಸಲೇ ಇಲ್ಲ.

ಇನ್ನಷ್ಟು ಸುದ್ದಿಗಳು 3

ಬಿಜೆಪಿಯಲ್ಲಿ 'ಅಂತರ್ಯುದ್ಧ'

• ಅಕ್ರಮ್ ಮೊಹಮ್ಮದ್

ಬೆಂಗಳೂರು: ಕೋವಿಡ್ ಎರಡನೇ ಅಲೆ ಸಮಯದಲ್ಲೇ ಬಿಜೆಪಿಯಲ್ಲಿ ಅಂತರ್ಯುದ್ಧ ಆರಂಭವಾಗಿದ್ದು, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಆಡಳಿತದ ವಿರುದ್ಧ ಸ್ವಪಕ್ಷೀಯರೇ ಕಿಡಿಕಾರಲಾರಂಭಿಸಿದ್ದಾರೆ.

ಚಾಮರಾಜನಗರದ ದುರ್ಘಟನೆ ಬೆನ್ನಲ್ಲೇ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, 'ದುರಂತಕ್ಕೆ ಸರ್ಕಾರವೇ ಹೊಣೆ ಹೊರಬೇಕಾಗುತ್ತದೆ. ತಪ್ಪಿತಸ್ಥರಾದರೆ ಆರೋಗ್ಯ ಸಚಿವರ ವಿರುದ್ಧವೇ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ' ಎಂದು ಹೇಳಿದ್ದರು.

ಮತ್ತೊಂದೆಡೆ, ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಅವರು ಬಿಬಿಎಂಪಿ ವ್ಯಾಪ್ತಿಯಲ್ಲಿ ನಡೆದಿರುವ ದುಡ್ಡಿಗಾಗಿ ಹಾಸಿಗೆ ಕಾಯ್ದಿರಿಸುವ ಹಗರಣವನ್ನು ಬಯಲಿಗೆಳೆದು ಸರ್ಕಾರವನ್ನು ಮುಜುಗರಕ್ಕೆ ಸಿಲುಕಿಸಿದ್ದಾರೆ. ಈ ಮೂಲಕ ಆಡಳಿತ ಎಷ್ಟು ಹದಗೆಟ್ಟಿದೆ ಎಂಬುದನ್ನು ಬಯಲಿಗೆಳೆದಿದ್ದಾರೆ.

ಯಡಿಯೂರಪ್ಪ ರಕ್ಷಣೆಗೆ ಧಾವಿಸಿರುವ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್, 'ದುಡ್ಡಿಗಾಗಿ ಹಾಸಿಗೆ ಹಗರಣಕ್ಕೆ ಸರ್ಕಾರವನ್ನು ಹೊಣೆ ಮಾಡಲು ಸಾಧ್ಯವಿಲ್ಲ. ಬಿಬಿಎಂಪಿ ಕಾರ್ಯದಲ್ಲಿ ರಾಜಕೀಯ ಹಸ್ತಕ್ಷೇಪ ಆಗಿಲ್ಲ. ಯಾವುದೇ ಹಗರಣ ನಡೆಯದಂತೆ ನೋಡಿಕೊಳ್ಳುವ ಜವಾಬ್ದಾರಿ ಅಧಿಕಾರಿಗಳದ್ದು. ಯಡಿಯೂರಪ್ಪ ಅವರನ್ನು ಅಭದ್ರಗೊಳಿಸುವ ಉದ್ದೇಶದಿಂದ ಹಗರಣ ಬಯಲಿಗೆಳೆಯಲಾಗಿದೆ ಎಂಬುದರಲ್ಲಿ ಸತ್ಯಾಂಶವಿಲ್ಲ' ಎಂದರು.

'ಆಡಳಿತವನ್ನು ಟೀಕಿಸುತ್ತಿರುವವರೆಲ್ಲ ಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರಿಗೆ ನಿಷ್ಠರಾದವರು. ಇವರೇ ಆಡಳಿತದ ವಿರುದ್ಧ ಧ್ವನಿ ಎತ್ತುತ್ತಿರುವ ಕಾರಣ ಯಡಿಯೂರಪ್ಪ ಅವರನ್ನು ಅಭದ್ರಗೊಳಿಸುವ ಪ್ರಯತ್ನವೂ ಸದ್ದಿಲ್ಲದೇ ನಡೆದಿದೆ' ಎಂಬ ಚರ್ಚೆ ನಡೆದಿದೆ.

ಬೆಂಗಳೂರು ಅಭಿವೃದ್ಧಿ ಖಾತೆ ಯಡಿಯೂರಪ್ಪ ಬಳಿ ಇದೆ. ಸಿ.ಟಿ.ರವಿ ವಾಗ್ದಾಳಿ ಮತ್ತು ತೇಜಸ್ವಿ ಸೂರ್ಯ ಅವರ ದಿಢೀರ್ ದಾಳಿಯು ಮುಖ್ಯಮಂತ್ರಿಯವರನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಕೋವಿಡ್ ಮೊದಲ ಅಲೆಯ ಸಂದರ್ಭದಲ್ಲೂ ಯಡಿಯೂರಪ್ಪ ಆಡಳಿತದ ಬಗ್ಗೆ ಪಕ್ಷದ ಒಂದು ವರ್ಗದಿಂದ ಟೀಕೆ ವ್ಯಕ್ತವಾಗಿತ್ತು ಎಂದು ಪಕ್ಷದ ಮೂಲಗಳು ತಿಳಿಸಿವೆ.

'ತೇಜಸ್ವಿ ಸೂರ್ಯ ಮತ್ತು ಬಿಜೆಪಿಯ ಇತರ ಶಾಸಕರು ಹಗರಣವನ್ನು ಬಯಲಿಗೆಳೆಯುವ ಮೂಲಕ ವಿರೋಧ ಪಕ್ಷ ಮಾಡಬೇಕಾದ ಕೆಲಸ ಮಾಡಿದ್ದಾರೆ. ಇದು ಸರ್ಕಾರಕ್ಕೆ ಮುಜುಗರ ಉಂಟು ಮಾಡಿದ್ದರೂ ಇದರ ಹಿಂದೆ ಗುಪ್ತ ಕಾರ್ಯಸೂಚಿಗಳಿವೆ ಎಂದು ಹೇಳುವುದು ಸರಿಯಲ್ಲ. ವ್ಯವಸ್ಥೆ ಹೇಗಿದೆ ಎಂಬುದನ್ನು ಬಯಲಿಗೆಳೆದಿದ್ದಾರೆ' ಎಂದು ರಾಜಕೀಯ ವಿಶ್ಲೇಷಕ ಚಂಬಿ ಪುರಾಣಿಕ್ ಅಭಿಪ್ರಾಯಪಟ್ಟಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಪ್ರೌಢ ಶಾಲೆಗಳಿಗೆ ಮೇ 31ರವರೆಗೆ ರಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಕಾರಣ ಶಾಲೆಗಳನ್ನು ಈಗಾಗಲೇ ಮುಚ್ಚಿದ್ದು, 2020-21ನೇ ಸಾಲಿನ ಬೇಸಿಗೆ ರಜಾ ಅವಧಿಯನ್ನು ಪರಿಷ್ಕರಿಸಲಾಗಿದೆ.

ಪ್ರಾಥಮಿಕ ಶಾಲೆಗಳಿಗೆ ಈ ಹಿಂದೆಯೇ ಪ್ರಕಟಿಸಿದಂತೆ ಜೂನ್ 14ರವರೆಗೆ ರಜೆ ನೀಡಲಾಗಿದೆ. ಈ ತರಗತಿಗಳಿಗೆ ಜೂನ್ 15 ರಿಂದ ಹೊಸ ಶೈಕ್ಷಣಿಕ ವರ್ಷ ಆರಂಭವಾಗಲಿದೆ. ಪ್ರೌಢ ಶಾಲೆಗಳಿಗೆ ಮೇ 31ರವರೆಗೆ ಮಾತ್ರ ರಜೆ ನೀಡಲಾಗಿದೆ. ಈ ಶಾಲೆಗಳಲ್ಲಿ 8 ರಿಂದ 10ರವರೆಗಿನ ತರಗತಿಗಳು ಜೂನ್ 15 ರಿಂದ ಆರಂಭವಾಗಲಿದೆ.

ಜೂನ್ 1 ರಿಂದ 14ರವರೆಗೆ 2020–21ನೇ ಸಾಲಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಪುನರ್ ಮನನ ತರಗತಿಗಳನ್ನು ನಡೆಸಲು ಶಿಕ್ಷಣ ಇಲಾಖೆ ತೀರ್ಮಾನಿಸಿದೆ. ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಗಳು ಜೂನ್ 21ರಿಂದ ಜುಲೈ 5ರವರೆಗೆ ನಿಗದಿಯಾಗಿವೆ.

'ಬೇಸಿಗೆ ರಜೆ ಅವಧಿಯಲ್ಲಿ ಪ್ರೌಢ ಶಾಲೆಗಳ ಶಿಕ್ಷಕರು ಎಸ್ಸೆಸ್ಸೆಲ್ಸಿ ಮಕ್ಕಳ ಪರೀಕ್ಷಾ ಸಿದ್ಧತೆಯ ಬಗ್ಗೆ ಗಮನ ಹರಿಸಬೇಕು. ದೂರವಾಣಿ ಮೂಲಕ ಸಂಪರ್ಕದಲ್ಲಿದ್ದು ಅವರ ಕಲಿಕೆಗೆ ಪ್ರೇರೇಪಿಸಬೇಕು' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ತಿಳಿಸಿದ್ದಾರೆ.

ಎಸ್ಸೆಸ್ಸೆಲ್ಸಿ- ಪಿಯುಸಿ

ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ,
ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ–5

ಚಾಮರಾಜನಗರ ಪ್ರಕರಣ: ಪ್ರತ್ಯೇಕ ತನಿಖೆಗೂ ಆದೇಶ

ಸರ್ಕಾರದ ನಿರ್ಧಾರಕ್ಕೆ ಹೈಕೋರ್ಟ್ ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜನಗರ ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆಯಿಂದ 24 ರೋಗಿಗಳು ಮೃತಪಟ್ಟಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ತರಾತುರಿಯಲ್ಲಿ ವಿಚಾರಣಾ ಆಯೋಗ ನೇಮಕ ಮಾಡಿರುವ ರಾಜ್ಯ ಸರ್ಕಾರದ ಕ್ರಮಕ್ಕೆ ಹೈಕೋರ್ಟ್ ಬುಧವಾರ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಇದರ ಬೆನ್ನಲ್ಲೇ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಉಸ್ತುವಾರಿಯಲ್ಲಿ ನಿವೃತ್ತ ನ್ಯಾಯಮೂರ್ತಿ ಎ.ಎನ್. ವೇಣುಗೋಪಾಲ ಗೌಡ ನೇತೃತ್ವದಲ್ಲಿ ಪ್ರತ್ಯೇಕ ತನಿಖೆಗೆ ಹೈಕೋರ್ಟ್ ಆದೇಶಿಸಿದೆ.

ದುರ್ಘಟನೆಯ ಕುರಿತು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಲು ಒಲವು ಹೊಂದಿರುವುದಾಗಿ ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕಾ ನೇತೃತ್ವದ ಪೀಠ ಮಂಗಳವಾರ ಹೇಳಿತ್ತು. ನಿವೃತ್ತ ನ್ಯಾಯಮೂರ್ತಿ ಎ.ಬಿ. ಪಾಟೀಲ ನೇತೃತ್ವದ ಆಯೋಗ ನೇಮಿಸಿ ರಾಜ್ಯ ಸರ್ಕಾರ ಬುಧವಾರ ಆದೇಶ ಹೊರಡಿಸಿತ್ತು. 'ಸರ್ಕಾರದ ತೀರ್ಮಾನವು ನ್ಯಾಯಾಲಯದ ಆದೇಶದ ವ್ಯಾಪ್ತಿ ಮೀರಿದ ನಡೆ' ಎಂದು ಬುಧವಾರದ ವಿಚಾರಣೆ ವೇಳೆ ನ್ಯಾಯಾಲಯ ಆಕ್ಷೇಪ ವ್ಯಕ್ತಪಡಿಸಿತು.

ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ಕಡತಗಳು ಮತ್ತು ದಾಖಲೆಗಳನ್ನು ವಶಕ್ಕೆ ಪಡೆಯುವಂತೆ ವಿಭಾಗೀಯ ಪೀಠ, ಮುಖ್ಯ ಕಾರ್ಯದರ್ಶಿಗೆ ನಿರ್ದೇಶಿಸಿತು. ತನಿಖೆ ನಡೆಸಲು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅಡಿಯಲ್ಲಿ ನಿವೃತ್ತ ನ್ಯಾಯಮೂರ್ತಿ ಎ.ಎನ್. ವೇಣುಗೋಪಾಲ ಗೌಡ ನೇತೃತ್ವದ ಸಮಿತಿ ರಚನೆಗೂ ಆದೇಶಿಸಿತು.

4ನೇ ಪುಟ ನೋಡಿ

ನ್ಯಾ. ಬಿ.ಎ. ಪಾಟೀಲ ನೇತೃತ್ವದ ಆಯೋಗ ನೇಮಕ

ಚಾಮರಾಜನಗರ ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಸೋಮವಾರ ಆಮ್ಲಜನಕದ ಕೊರತೆಯಿಂದ ಕೋವಿಡ್ ರೋಗಿಗಳು ಮೃತಪಟ್ಟಿದ್ದಾರೆ ಎಂಬ ವರದಿಗಳ ಕುರಿತು ತನಿಖೆ ನಡೆಸಲು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿ.ಎ. ಪಾಟೀಲ ನೇತೃತ್ವದ ಆಯೋಗ ನೇಮಿಸಿ ಗೃಹ ಇಲಾಖೆ ಬುಧವಾರ ಆದೇಶ ಹೊರಡಿಸಿದೆ.

ವಿಚಾರಣಾ ಆಯೋಗದ ಕಾಯ್ದೆಯ ಅಡಿಯಲ್ಲಿ ಈ ಆಯೋಗವನ್ನು ನೇಮಿಸಿದ್ದು, ಚಾಮರಾಜನಗರ ಪ್ರಕರಣ ಹಾಗೂ ಮುಂದೆ ಒಪ್ಪಿಸಬಹುದಾದ ಇದೇ ರೀತಿಯ ಪ್ರಕರಣಗಳ ತನಿಖೆಯ ಅಧಿಕಾರವನ್ನೂ ನೀಡಲಾಗಿದೆ. ವರದಿ ಸಲ್ಲಿಸಲು ಒಂದು ತಿಂಗಳ ಕಾಲಾವಕಾಶ ನೀಡಲಾಗಿದೆ.

ಮೈಸೂರಿನಲ್ಲಿ ಆಯೋಗದ ಕೇಂದ್ರ ಸ್ಥಾನ ಇರಲಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಚಾಮರಾಜನಗರ ಮತ್ತು ಮೈಸೂರು ಜಿಲ್ಲಾಧಿಕಾರಿಗಳ ಬಳಿ ಇರುವ ಎಲ್ಲ ಕಡತ, ಮಾಹಿತಿಗಳನ್ನು ವಿಚಾರಣಾ ಆಯೋಗದ ಮುಂದೆ ಮಂಡಿಸುವುದಕ್ಕಾಗಿ ಆರೋಗ್ಯ ಇಲಾಖೆ ಆಯುಕ್ತರಿಗೆ ಹಸ್ತಾಂತರಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕವಿ ಸಿದ್ದಲಿಂಗಯ್ಯಗೆ ಚಿಕಿತ್ಸೆ ಮುಂದುವರಿಕೆ


ಸಿದ್ದಲಿಂಗಯ್ಯ

ಬೆಂಗಳೂರು: ಕೊರೊನಾ ಸೋಂಕಿತರಾಗಿರುವ ಕವಿ ಸಿದ್ದಲಿಂಗಯ್ಯ ಅವರಿಗೆ ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ (ಐಸಿಸಿ) ಚಿಕಿತ್ಸೆ ಮುಂದುವರೆದಿದೆ.

ನಾಲ್ಕು ದಿನಗಳ ಹಿಂದೆ ಸೋಂಕಿತರಾಗಿದ್ದ ಅವರಿಗೆ ಕೆಮ್ಮು ಮತ್ತು ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿತ್ತು. ಅವರ ಪತ್ನಿ ಹಾಗೂ ಕಾರು ಚಾಲಕ ಕೂಡ ಕೋವಿಡ್ ಪೀಡಿತರಾಗಿದ್ದಾರೆ. ಪತ್ನಿಗೆ ಚಾಮರಾಜಪೇಟೆಯಲ್ಲಿರುವ ರಂಗದೊರೈ ಆಸ್ಪತ್ರೆಯಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿದೆ. ಕಾರು ಚಾಲಕ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

'ಕೋವಿಡ್ ನ್ಯೂಮೋನಿಯಾದಿಂದ ಬಳಲುತ್ತಿರುವ ಸಿದ್ದಲಿಂಗಯ್ಯ ಅವರಿಗೆ ಕೃತಕ ಉಸಿರಾಟದ ಸಂಪರ್ಕ ಒದಗಿಸಲಾಗಿದೆ. ಅವರು ತೀವ್ರವಾಗಿ ಅಸ್ವಸ್ಥರಾಗಿದ್ದು, ತಜ್ಞ ವೈದ್ಯರ ತಂಡವು ಅವರ ಆರೋಗ್ಯದ ಬಗ್ಗೆ ನಿರಂತರ ಮೇಲ್ವಿಚಾರಣೆ ಮಾಡುತ್ತಿದೆ' ಎಂದು ಮಣಿಪಾಲ್ ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

ನಗರದಲ್ಲಿ 18 ವರ್ಷ ಮೇಲ್ಪಟ್ಟವರಿಗೂ ಲಸಿಕೆ ಅಭಿಯಾನ– ಸಾಲುತ್ತದೆಯೇ ಸಿದ್ಧತೆ?

ಬೇಕು 1.66 ಕೋಟಿ ಡೋಸ್ ಲಸಿಕೆ

• ಪ್ರವೀಣ್ ಕುಮಾರ್ ಪಿ.ವಿ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಎರಡು ಡೋಸ್ ಕೋವಿಡ್ ಲಸಿಕೆ ನೀಡಲು ಒಟ್ಟು 1.82 ಕೋಟಿ ಲಸಿಕೆಗಳು ಬೇಕು. ಇವುಗಳಲ್ಲಿ ಈಗಾಗಲೇ ಲಸಿಕೆ ಪಡೆದವರನ್ನು ಹೊರತಾಗಿ ಇನ್ನುಳಿದವರಿಗೆ ಲಸಿಕೆ ನೀಡುವುದಾದರೆ ಇನ್ನೂ 1.66 ಕೋಟಿ ಲಸಿಕೆಗಳು ಬಿಬಿಎಂಪಿಗೆ ಬೇಕು.

ಸರ್ಕಾರದಿಂದ ಇನ್ನೂ ಲಸಿಕೆ ಪೂರೈಕೆ ಬಗ್ಗೆ ಖಚಿತ ಮಾಹಿತಿ ಬಂದಿಲ್ಲ. ಆದರೆ, ಬಿಬಿಎಂಪಿ ಕೋವಿಡ್ ಪ್ರಕರಣಗಳ ನಿಯಂತ್ರಣದ ನಡುವೆಯೂ ಲಸಿಕೆ ಅಭಿಯಾನಕ್ಕೆ ಕೈಗೊಳ್ಳಬೇಕಾದ ಸಿದ್ಧತೆಗಳನ್ನು ಆರಂಭಿಸಿದೆ. ಆದರೆ, ಈ ಸಿದ್ಧತೆಗಳು ಸಾಲುತ್ತವೆಯೇ ಎಂಬ ಪ್ರಶ್ನೆ ಮೂಡಿದೆ.

ನಗರದಲ್ಲಿ ಆರೋಗ್ಯ ಕಾರ್ಯಕರ್ತರು, ಕೋವಿಡ್ ನಿಯಂತ್ರಣ ಕಾರ್ಯದಲ್ಲಿ ಭಾಗವಹಿಸಿದ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಲಸಿಕೆಗಳನ್ನು ನೀಡಲಾಗಿದೆ. ಇವರಲ್ಲಿ 18 ವರ್ಷ ಮೇಲ್ಪಟ್ಟ ಎಲ್ಲ ವಯೋವ-

ಆಮ್ಲಜನಕ ಸಾಂದ್ರೀಕರಣ ಸಾಧನ: ಯಾವ ವಲಯಕ್ಕೆ ಎಷ್ಟು?

ವಲಯ	ಸಾಧನಗಳು
ಪೂರ್ವ	25
ದಕ್ಷಿಣ	10
ಪಶ್ಚಿಮ	15
ಮಹದೇವಪುರ	13
ಆರ್.ಆರ್.ನಗರ	25
ಬೊಮ್ಮನಹಳ್ಳಿ	12
ಕೇಂದ್ರ ಕಚೇರಿ	05

ಗದವರೂ ಇದ್ದಾರೆ. ಪ್ರಸ್ತುತ 45 ಮೇಲ್ಪಟ್ಟವರಿಗೆ ಲಸಿಕೆ ನೀಡುವ ಕಾರ್ಯಕ್ರಮ ಜಾರಿಯಲ್ಲಿದೆ. ಇವರೆಲ್ಲರಿಗೂ ಇದುವರೆಗೆ 15.5 ಲಕ್ಷ ಲಸಿಕೆಗಳನ್ನು (ಮೊದಲ ಹಾಗೂ ಎರಡನೇ ಡೋಸ್ ಸೇರಿ) ನೀಡಲಾಗಿದೆ.

ನಗರದಲ್ಲಿ ಪ್ರಸ್ತುತ ಎರಡು ಕಾರ್ಪೊರೇಟ್ ಆಸ್ಪತ್ರೆಗಳು (ಮಣಿಪಾಲ್ ಹಾಗೂ ಅಪೋಲೊ) ಮಾತ್ರ 18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನಿಡಲಾರಂಭಿಸಿವೆ. ಲಸಿಕೆ ಪಡೆಯಲು ಕೋವಿಡ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡಿರುವ 18 ವರ್ಷ ಮೇಲ್ಪಟ್ಟವರು ಲಸಿಕೆ ಯಾವಾಗ ಬರುತ್ತದೆ ಎಂದು ವಿಚಾರಿಸುತ್ತಿದ್ದಾರೆ.

'ಈ ಹಿಂದೆ ಖಾಸಗಿ ಆಸ್ಪತ್ರೆಗಳಿಗೂ ಬೇಡಿಕೆಗೆ ಅನುಗುಣವಾಗಿ ಸರ್ಕಾರದಿಂದಲೇ ಲಸಿಕೆ ಪೂರೈಸಲಾಗುತ್ತಿತ್ತು. ಆದರೆ, ಈ ಬಾರಿ ಲಸಿಕೆ ಅಭಿಯಾನದಲ್ಲಿ ಕೈಜೋಡಿಸುವ ಆಸ್ಪತ್ರೆಗಳು ಕೋವಿನ್ ಪೋರ್ಟಲ್‌ನಲ್ಲಿ ನೋಂದಾಯಿಸಿ ನೇರವಾಗಿ ಲಸಿಕೆ ಖರೀದಿಸಿ ನೀಡಬೇಕು' ಎಂದು ಬಿಬಿಎಂಪಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಬಿಬಿಎಂಪಿ ಈ ಹಿಂದೆ ಲಸಿಕಾ ಅಭಿಯಾನ ಜಾರಿಗೊಳಿಸಿದಾಗ 141 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು, 33 ರೆಫರಲ್ ಆಸ್ಪತ್ರೆಗಳು, ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕಾ ಕೇಂದ್ರಗಳನ್ನು ತೆರೆದಿತ್ತು. 500 ಲಸಿಕಾ ಕೇಂದ್ರಗಳನ್ನು ಆರಂಭಿಸುವ ಉದ್ದೇಶವಿತ್ತಾದರೂ ನಿತ್ಯ ಸರಾಸರಿ 470 ಲಸಿಕಾ ಕೇಂದ್ರಗಳು ಕಾರ್ಯನಿರ್ವಹಿಸಿದ್ದವು. ಲಸಿಕೆ ಪಡೆಯಲು ಜನ ಆಗ ಅಷ್ಟು ಉತ್ಸಾಹ ತೋರದ ಕಾರಣ ಲಸಿಕಾ ಕೇಂದ್ರಗಳಲ್ಲಿ ಜನದಟ್ಟಣೆ ಸೃಷ್ಟಿಯಾಗಿರಲಿಲ್ಲ. ಆದರೆ, ಈ ಬಾರಿಯೂ ಅಷ್ಟೇ ಲಸಿಕಾ ಕೇಂದ್ರಗಳನ್ನು ಹೊಂದುವ ಬಗ್ಗೆ ಬಿಬಿಎಂಪಿ ಚಿಂತನೆ ಹೊಂದಿದೆ. ಈ ಸಲ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಲಸಿಕೆ ನೀಡಬೇಕಾಗಿದೆ. ಕೋವಿಡ್ ಎರಡನೇ ಅಲೆ ಬಳಿಕ ಲಸಿಕೆ ಪಡೆಯಲು ಜನರು ತುದಿಗಾಲಲ್ಲಿ ಕಾಯುತ್ತಿದ್ದಾರೆ. ಹಾಗಾಗಿ ಹಿಂದೆ ಸ್ಥಾಪಿಸಿದ ಲಸಿಕಾ ಕೇಂದ್ರಗಳು ಸಾಕಾಗುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಈ ಬಾರಿ ಎಲ್ಲ ಖಾಸಗಿ ಆಸ್ಪತ್ರೆಗಳು ಕೋವಿಡ್ ರೋಗಿಗಳಿಂದ ತುಂಬಿ ಹೋಗಿವೆ. ಈ ಹಿಂದೆ ಲಸಿಕಾ ಅಭಿಯಾನ ನಡೆಸಿದ್ದ ಅನೇಕ ಖಾಸಗಿ ಆಸ್ಪತ್ರೆಗಳು ಸಿಬ್ಬಂದಿ ಕೊರತೆ ಎದುರಿಸುತ್ತಿವೆ. ಲಸಿಕೆ ಖರೀದಿಸುವುದಕ್ಕೆ ಹರಸಾಹಸ ಪಡಬೇಕಾದ ವಾತಾವರಣ ಇದೆ. ಈ ಹಿಂದೆ ಲಸಿಕೆ ಅಭಿಯಾನಕ್ಕೆ ಕೈಜೋಡಿಸಿದ ಎಲ್ಲ ಆಸ್ಪತ್ರೆಗಳು ಈ ಬಾರಿ ಲಸಿಕಾ ಕೇಂದ್ರ ಹೊಂದಲು ಆಸಕ್ತಿ ತೋರುವ ಸ್ಥಿತಿಯಲ್ಲಿಲ್ಲ.

'ಬಿಬಿಎಂಪಿಯೂ 33 ರೆಫರಲ್ ಆಸ್ಪತ್ರೆಗಳಲ್ಲಿ 10 ಆಸ್ಪತ್ರೆಗಳನ್ನು ಕೋವಿಡ್ ಆಸ್ಪತ್ರೆಗಳನ್ನಾಗಿ ಮಾರ್ಪಾಡು ಮಾಡಿದೆ. ಅಗತ್ಯ ಬಿದ್ದರೆ ಇನ್ನಷ್ಟು ರೆಫರಲ್ ಆಸ್ಪತ್ರೆಗಳಲ್ಲೂ ಕೋವಿಡ್ ಚಿಕಿತ್ಸೆಗೆ ಆರಂಭಿಸಬೇಕಾಗುತ್ತದೆ. ಆ ಆಸ್ಪತ್ರೆಗಳಲ್ಲಿ ಲಸಿಕಾ ಕೇಂದ್ರ ಹೊಂದಲು ಸಾಧ್ಯವಾಗುವುದಿಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ಲಸಿಕಾ ಕೇಂದ್ರ ತೆರೆಯಲು ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳದಿದ್ದರೆ ಸಮಸ್ಯೆ ಎದುರಿಸಬೇಕಾದೀತು' ಎಂಬುದು ಬಿಬಿಎಂಪಿ ಅಧಿಕಾರಿಯೊಬ್ಬರ ಅನಿಸಿಕೆ.

'ಸದ್ಯಕ್ಕೆ ಬಿಬಿಎಂಪಿಗೆ ಎಷ್ಟು ಲಸಿಕೆ ಪೂರೈಕೆ ಆಗಲಿದೆ ಎಂಬ ಖಚಿತ ಮಾಹಿತಿ ಇಲ್ಲ. ಆದರೂ ಸಿದ್ಧತೆ ಆರಂಭಿಸಿದ್ದೇವೆ. ಬಿಬಿಎಂಪಿ ಈ ಹಿಂದೆ ಸ್ಥಾಪಿಸಿದ್ದ ಲಸಿಕಾ ಕೇಂದ್ರಗಳು ಈ ಬಾರಿಯೂ ಮುಂದುವರಿಯುತ್ತವೆ. ಅಗತ್ಯ ಬಿದ್ದರೆ ಲಸಿಕಾ ಕೇಂದ್ರಗಳ ಸಂಖ್ಯೆ ಹೆಚ್ಚಿಸಲು ಕ್ರಮ ಕೈಗೊಳ್ಳಲಿದ್ದೇವೆ' ಎಂದು ಬಿಬಿಎಂಪಿಯ ಮುಖ್ಯ ಆರೋಗ್ಯಾಧಿಕಾರಿ ಡಾ.ಬಿ.ಕೆ.ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

ನಿತ್ಯ 20,000 ವಯಲ್ಸ್ ಪೂರೈಕೆಗೆ ಉತ್ಪಾದಕರ ಒಪ್ಪಿಗೆ

ಬೆಂಗಳೂರು: ರಾಜ್ಯಕ್ಕೆ ಈವರೆಗೆ ಪ್ರತಿದಿನ 10,000 ವಯಲ್ಸ್ ರೆಮ್‌ಡಿಸಿವಿರ್ ಚುಚ್ಚುಮದ್ದು ಪೂರೈಕೆಯಾಗುತ್ತಿತ್ತು. ಗುರುವಾರದಿಂದ ಪ್ರತಿದಿನ 20,000 ವಯಲ್ಸ್ ಪೂರೈಸಲು ಉತ್ಪಾದಕರು ಒಪ್ಪಿಕೊಂಡಿದ್ದಾರೆ ಎಂದು ಕೋವಿಡ್ ಕಾರ್ಯಪಡೆ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ರೆಮ್‌ಡಿಸಿವಿರ್ ಉತ್ಪಾದಿಸುತ್ತಿರುವ ಮೈಲಾನ್, ಸಿಪ್ಲಾ, ಜ್ಯುಬಿಲಿಯಂಟ್ ಮತ್ತು ಸಿಂಜಿನ್ ಔಷಧ ತಯಾರಿಕಾ ಕಂಪನಿಗಳ ಮುಖ್ಯಸ್ಥರ ಜತೆ ಬುಧವಾರ ದೂರವಾಣಿ ಮೂಲಕ ಚರ್ಚೆ ನಡೆಸಿದ ಬಳಿಕ ಮಾಧ್ಯಮ ಪ್ರತಿನಿಧಿಗಳಿಗೆ ಈ ಮಾಹಿತಿ ನೀಡಿದರು.

ಸಿಪ್ಲಾ ಕಂಪನಿಯ ಗ್ಲೋಬಲ್ ಹೆಡ್ ನಿಖಿಲ್ ಪಾಸ್ವಾನ್, ಮೈಲಾನ್ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ರಾಕೇಶ್, ಸಿಂಜಿನ್ ಕಂಪನಿಯ ಪ್ರಮುಖರಾದ ಕಿರಣ್ ಮಜುಂದಾರ್ ಷಾ ಮತ್ತು ಜ್ಯುಬಿಲಿಯಂಟ್ ಕಂಪನಿಯ ಹಿರಿಯ ಅಧಿಕಾರಿಗಳು ಮಾತುಕತೆಯಲ್ಲಿ ಭಾಗವಹಿಸಿದ್ದರು ಎಂದು ಹೇಳಿದರು.

ಮುಂದಿನ ಐದು ದಿನಗಳ ಬೇಡಿಕೆಯನ್ನು ಆಧರಿಸಿ ಚರ್ಚೆ ನಡೆಸಲಾಗಿದೆ. ರೆಮ್‌ಡಿಸಿವಿರ್ ಪೂರೈಕೆಗೆ ಜಾಗತಿಕ ಟೆಂಡರ್ ಕರೆಯಲಾಗಿದೆ. ಈ ವಾರ ಟೆಂಡರ್ ಪ್ರಕ್ರಿಯೆ ಅಂತಿಮಗೊಳ್ಳಲಿದೆ. ರೆಮ್‌ಡಿಸಿವಿರ್ ಚುಚ್ಚುಮದ್ದಿನ ಕೊರತೆಯನ್ನು ನೀಗಿಸುವ ಉದ್ದೇಶದಿಂದ ಔಷಧಿ ಬಳಕೆಯಲ್ಲಿ ಪಾರದರ್ಶಕ ವ್ಯವಸ್ಥೆ ತರಲಾಗುವುದು ಎಂದು ಹೇಳಿದರು.



ಕೊರೊನಾ ನಿಯಮ ಉಲ್ಲಂಘನೆ: ₹2.85 ಕೋಟಿ ದಂಡ ಸಂಗ್ರಹ

ಬೆಂಗಳೂರು: ಅಂತರ ಕಾಯ್ದುಕೊಳ್ಳದಿರುವುದು ಹಾಗೂ ಮಾಸ್ಕ್ ಧರಿಸದವರ ವಿರುದ್ಧ ಏ.1ರಿಂದ ಮೇ 4ರವರೆಗೆ ನಗರ ಪೊಲೀಸರು ನಡೆಸಿದ ಕಾರ್ಯಾಚರಣೆ ವೇಳೆ ಒಟ್ಟು ₹2.85 ಕೋಟಿ ದಂಡ ಸಂಗ್ರಹವಾಗಿದೆ.

ಈ ಅವಧಿಯಲ್ಲಿ ಮಾಸ್ಕ್ ಧರಿಸದವರ ವಿರುದ್ಧ ಒಟ್ಟು 1,07,272 ಪ್ರಕರಣಗಳು ಹಾಗೂ ಅಂತರ ಕಾಯ್ದುಕೊಳ್ಳುವ ನಿಯಮ ಉಲ್ಲಂಘಿಸಿದವರ ವಿರುದ್ಧ 11,107 ಪ್ರಕರಣ ಸೇರಿದಂತೆ ಒಟ್ಟು 1,18,379 ಪ್ರಕರಣಗಳು ದಾಖಲಾಗಿವೆ.

ಮಾಸ್ಕ್ ಧರಿಸದವರಿಂದ ₹2,59,50,013 ಹಾಗೂ ಅಂತರ ಕಾಯ್ದುಕೊಳ್ಳದವರಿಂದ ₹25,75,283 ಸೇರಿದಂತೆ ಒಟ್ಟು ₹2,85,25,297 ದಂಡ ಸಂಗ್ರಹಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

577 ವಾಹನ ಜಪ್ತಿ: ಕೊರೊನಾ ಕರ್ಫ್ಯೂ ವೇಳೆ ಅನಗತ್ಯವಾಗಿ ಸಂಚರಿಸುತ್ತಿದ್ದ 577 ವಾಹನಗಳನ್ನು ಪೊಲೀಸರು ಬುಧವಾರ ಜಪ್ತಿ ಮಾಡಿದ್ದಾರೆ. 546 ದ್ವಿಚಕ್ರ ವಾಹನ, 16 ತ್ರಿಚಕ್ರ ವಾಹನ, 15 ನಾಲ್ಕು ಚಕ್ರದ ವಾಹನಗಳನ್ನು ಜಪ್ತಿ ಮಾಡಲಾಗಿದೆ. ಎನ್‌ಡಿಎಂಎ ಕಾಯ್ದೆಯಡಿ ಏಳು ಪ್ರಕರಣಗಳು ದಾಖಲಾಗಿವೆ.

ಭಯ–ನಿರ್ಭಯಗಳ ನಡುವಣ ತೊಳಲಾಟ

ಕೋವಿಡ್ ಗೆದ್ದವರ ಕಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾವುದೇ ಲಸಿಕೆ, ನಿರ್ದಿಷ್ಟ ಚಿಕಿತ್ಸಾ ವಿಧಾನ ಇಲ್ಲದ ವೇಳೆ ಕೋವಿಡ್‌ಗೆ ತುತ್ತಾಗಿದ್ದ 50 ವರ್ಷದ ಡಾ. ರಾಜು ಶೇಟ್, ಈ ಸಂದರ್ಭದಲ್ಲಿ ತಾವು ಅನುಭವಿಸಿದ್ದ ತೊಳಲಾಟವನ್ನು ಹೇಳಿಕೊಂಡಿದ್ದಾರೆ. ಸರ್ಕಾರಿ ಆಯುಷ್ ವೈದ್ಯಾಧಿಕಾರಿಗಳ ಸಂಘದ ರಾಜ್ಯ ಗೌರವ ಅಧ್ಯಕ್ಷರಾಗಿದ್ದಾರೆ. ಅಲ್ಲದೆ, ಮಾರೇನಹಳ್ಳಿಯ ಸರ್ಕಾರಿ ಆಯುರ್ವೇದ ಆಸ್ಪತ್ರೆಯ ವೈದ್ಯಾಧಿಕಾರಿಯಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

'ನಾನು ಕೆ.ಆರ್. ಪುರ ಸರ್ಕಾರಿ ಆಸ್ಪತ್ರೆಯ ಫೀವರ್ ಕ್ಲಿನಿಕ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದೆ. 2020ರ ಜುಲೈ 15ರಂದು ಮೈ–ಕೈ ನೋವು, ಸುಸ್ತು ಕಾಣಿಸಿಕೊಂಡಿತು. ಅನುಮಾನ ಬಂದು ಪರೀಕ್ಷೆ ಮಾಡಿಸಿದಾಗ ಸೋಂಕು ತಗುಲಿರುವುದು ದೃಢಪಟ್ಟಿತ್ತು'

'ನನ್ನ ಪತ್ನಿ, ಮಗ ಮತ್ತು ಮಗಳು ಪರೀಕ್ಷೆಗೆ ಒಳಗಾದರು. ಅವರಿಗೂ ಸೋಂಕು ತಗುಲಿತ್ತು. ಆದರೆ, ಅವರಿಗೆ ಸೋಂಕಿನ ಯಾವುದೇ ಲಕ್ಷಣಗಳಿರಲಿಲ್ಲ. ಆದರೂ, ಎಲ್ಲರೂ ಖಾಸಗಿ ಆಸ್ಪತ್ರೆಗೆ ದಾಖಲಾದೆವು'



'ಪತ್ನಿ ಮತ್ತು ಮಕ್ಕಳು ಬೇಗ ಗುಣಮುಖರಾದರು. ನನಗೆ ಸುಸ್ತು ಮತ್ತು ಜ್ವರ ಹಾಗೇ ಇತ್ತು. ಆಗಿನ್ನೂ ಲಸಿಕೆ ಕಂಡುಹಿಡಿದಿರಲಿಲ್ಲ. ಯಾವ ರೀತಿ ಚಿಕಿತ್ಸೆ ನೀಡಬೇಕು ಎಂಬ ಬಗ್ಗೆ ವೈದ್ಯರಲ್ಲಿಯೂ ಮಾಹಿತಿ ಇರಲಿಲ್ಲ. ಸರ್ಕಾರ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಕೆಲವು ಮಾತ್ರೆಗಳನ್ನು ಮಾತ್ರ ನೀಡಲಾಗುತ್ತಿತ್ತು'

'ಹೀಗೆ ಚಿಕಿತ್ಸೆ ಮತ್ತು ಲಸಿಕೆ ಇರದಿರುವುದರಿಂದ ಆಗ ನನಗೆ ಭಯ ಆಗಿದ್ದು ನಿಜ. ಏನಾದರೂ ಹೆಚ್ಚು ಕಡಿಮೆಯಾದರೆ ಏನು ಎಂದೂ ಯೋಚನೆ ಮಾಡುತ್ತಿದ್ದೆ. ಆದರೆ, ಕಣ್ಮುಂದೆಯೇ ಪತ್ನಿ, ಮಕ್ಕಳು ಗುಣಮುಖರಾಗಿದ್ದು ಕಂಡು ಧೈರ್ಯ ಬಂದಿತು. 16 ದಿನ ನಾನು ಆಸ್ಪತ್ರೆಯಲ್ಲಿಯೇ ಇದ್ದರೂ ಇಂತಹ ಭಯ ಮತ್ತು ನಿರ್ಭಯಗಳ ತೊಳಲಾಟದಲ್ಲಿಯೇ ಇದ್ದೆ. ಪರಿಣಾಮ 13 ಕೆಜಿ ತೂಕವನ್ನೂ ಕಳೆದುಕೊಂಡೆ'

'ದೈಹಿಕವಾಗಿ ಎಷ್ಟು ಸಮರ್ಥರಾಗಿರಬೇಕಾಗುತ್ತಿದೆಯೋ, ಈ ಸಂದರ್ಭದಲ್ಲಿ ಮಾನಸಿಕವಾಗಿಯೂ ಅಷ್ಟೇ ಸದೃಢರಾಗಿರಬೇಕಾಗುತ್ತದೆ. ನಾನು ಸಕಾರಾತ್ಮಕವಾಗಿ ಯೋಚಿಸತೊಡಗಿದೆ. ಧೈರ್ಯದಿಂದ ಇದ್ದದ್ದು ಕೂಡ ನಾನು ಗುಣಮುಖನಾಗಲು ಕಾರಣವಾಯಿತು'

'ಈಗ ಲಸಿಕೆ ಬಂದಿದೆ. ಚಿಕಿತ್ಸಾ ವಿಧಾನಗಳ ಬಗ್ಗೆಯೂ ಒಂದು ಸ್ಪಷ್ಟತೆ ಇದೆ. ಶೇ 97ರಷ್ಟು ಮಂದಿ ಗುಣಮುಖರಾಗಿದ್ದಾರೆ. ಸಾವಿಗೀಡಾಗಿರುವುದನ್ನೇ ದೊಡ್ಡದಾಗಿ ತೋರಿಸುತ್ತಿರುವುದರಿಂದ ಕೋವಿಡ್ ಬಗ್ಗೆ ಜನರಲ್ಲಿ ಆತಂಕವಿದೆ. ಯಾರೂ ಧೈರ್ಯಗೆಡಬಾರದು. ಆದರೆ, ನಿರ್ಲಕ್ಷಿಸಲುಬಾರದು. ಲಕ್ಷಣಗಳು ಕಂಡು ಬಂದರೆ, ಉಸಿರಾಟದ ಸಮಸ್ಯೆ ಕಾಣಿಸಿದರೆ ಕೂಡಲೇ ಆಸ್ಪತ್ರೆಗೆ ದಾಖಲಾಗುವುದು ಉತ್ತಮ'.


ಮಕ್ಕಳ ಮುಖ ನೋಡದೆ ತಿಂಗಳು ಕಳೆಯಿತು

ಶುಶ್ರೂಷಕರ ಅಂತರಂಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಮೊದಲನೆ ಅಲೆಗೆ ಹೋಲಿಸಿದಲ್ಲಿ ಎರಡನೇ ಅಲೆಯಲ್ಲಿ ಕಾರ್ಯನಿರ್ವಹಿಸುವುದು ಸವಾಲಾಗಿದೆ. ದಿನದಲ್ಲಿ ಆರೂವರೆ ಗಂಟೆ ಪಿಪಿಇ ಕಿಟ್ ಧರಿಸಿ, ರೋಗಿಗಳಿಗೆ ಆರೈಕೆ ಮಾಡುತ್ತಿದ್ದೇವೆ. ಇತ್ತೀಚೆಗೆ ಆಸ್ಪತ್ರೆಗಳಿಗೆ ದಾಖಲಾಗುವ ರೋಗಿಗಳು ಗಂಭೀರವಾಗಿ ಅಸ್ವಸ್ಥಗೊಳ್ಳುತ್ತಿರುವ ಪರಿಣಾಮ ಅವರ ಮೇಲೆ ವಿಶೇಷ ಕಾಳಜಿ ವಹಿಸಬೇಕಾಗಿದೆ. ಇದರಿಂದಾಗಿ ಕುಟುಂಬದ ಸದಸ್ಯರಿಗೆ ಸಮಯ ನೀಡಲಾಗುತ್ತಿಲ್ಲ. ಮಕ್ಕಳ ಮುಖ ನೋಡದೆಯೇ ತಿಂಗಳು ಕಳೆಯಿತು.'

'ಅಕ್ಕಪಕ್ಕದ ಜಿಲ್ಲೆಗಳಿಂದ ಕೂಡ ರೋಗಿಗಳು ಚಿಕಿತ್ಸೆಗೆ ಬರುತ್ತಿದ್ದಾರೆ. ಎಷ್ಟೇ ಮುನ್ನೆಚ್ಚರಿಕೆ ವಹಿಸಿದರೂ ನಮಗೆ ಕೂಡ ಸೋಂಕು ತಗಲುವ ಸಾಧ್ಯತೆ ಇರುತ್ತದೆ. ಹಾಗಾಗಿ, ಮಕ್ಕಳನ್ನು ಅಜ್ಜಿ ಮನೆಗೆ ಕಳುಹಿಸಿದ್ದೇನೆ. ಸಹೋದರ ಸಂಬಂಧಿಗಳು ಊರಿಗೆ ಹೋಗಿದ್ದಾರೆ. ಗಂಭೀರವಾಗಿ ಅಸ್ವಸ್ಥರಾದ ಸೋಂಕಿತರನ್ನು ಹತ್ತಿರದಿಂದ ನೋಡಿದಾಗಲೇ ಕಾಯಿಲೆಯ ಗಂಭೀರತೆ ಕೂಡ ತಿಳಿಯುತ್ತದೆ.'



'ಕೊರೊನಾ ರೂಪಾಂತರ ವೈರಾಣು ಶ್ವಾಸಕೋಶಕ್ಕೆ ಹೆಚ್ಚಿನ ಹಾನಿ ಮಾಡುತ್ತಿದೆ. ಇದರಿಂದಾಗಿ ಆಸ್ಪತ್ರೆಗೆ ಬರುವಾಗಲೇ ರೋಗಿಗಳು ತೀವ್ರ ಅಸ್ವಸ್ಥಗೊಂಡಿರುತ್ತಾರೆ. ಹಾಸಿಗೆಯಿಂದ ಎದ್ದು ಓಡಾಡಲು ಕೂಡ ಕೆಲವರಿಗೆ ಸಾಧ್ಯವಾಗುವುದಿಲ್ಲ. ಗ್ರೂಪ್ ಡಿ ಸಿಬ್ಬಂದಿ ಕೊರತೆ ಇರುವುದರಿಂದ ರೋಗಿಗಳ ಬೇಕು ಬೇಡಗಳನ್ನು ನಾವೇ ನೋಡಬೇಕಾಗಿದೆ. ಬಹುತೇಕ ರೋಗಿಗಳು ಮಾನಸಿಕವಾಗಿ ಕುಗ್ಗಿರುತ್ತಾರೆ. ಅಂತಹವರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಬೇಕಾಗುತ್ತದೆ.'

ಪರಿಚಯ

ಹೆಸರು: ಕನ್ಯಾಕುಮಾರಿ ವಿ.
ಊರು: ಚಿತ್ರದುರ್ಗದ ಈಚಘಟ್ಟ
ವೃತ್ತಿ: ಶುಶ್ರೂಷಕಿ
ಸೇವೆ: 16 ವರ್ಷ
ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆ: ಬಿಎಂಸಿಆರ್‌ಐ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ (ಪಿಎಂಎಸ್‌ಎಸ್‌ವೈ), ಬೆಂಗಳೂರು

'ಮೊದಲನೇ ಅಲೆಯ ಅವಧಿಯಲ್ಲಿ ನಮಗೆ ಕ್ವಾರಂಟೈನ್ ನೀಡಲಾಗುತ್ತಿತ್ತು. ಆದರೆ, ಈಗ ಸರಿಯಾಗಿ ವ್ಯವಸ್ಥೆಯಿಲ್ಲ. ಪಿಪಿಇ ಕಿಟ್ ಧರಿಸಿದ ಬಳಿಕ ನೀರು ಕುಡಿಯಲು ಕೂಡ ಸಾಧ್ಯವಾಗುವುದಿಲ್ಲ. ಊಟ–ತಿಂಡಿ, ಮಾತ್ರೆ ಸೇವನೆ ಸಮಯಕ್ಕೆ ಸರಿಯಾಗಿ ಆಗುವುದಿಲ್ಲ. ಕಡಿಮೆ ನೀರು ಕುಡಿಯುವುದರಿಂದ ದೇಹದಲ್ಲಿ ನಿರ್ಜಲೀಕರಣ ಆಗುತ್ತದೆ. ಸಾರ್ವಜನಿಕರು ಶುಶ್ರೂಷಕರನ್ನು ಗೌರವದಿಂದ ಕಾಣಬೇಕು.'



ಕೋವಿಡ್ ತಪಾಸಣೆ ಹಾಗೂ ಲಸಿಕೆ ಪಡೆಯಲು ಚಾಮರಾಜಪೇಟೆಯ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಸಾರ್ವಜನಿಕರು ಬುಧವಾರ ಸರತಿ ಸಾಲಿನಲ್ಲಿ ನಿಂತಿರುವುದು –ಪ್ರಜಾವಾಣಿ ಚಿತ್ರ

300 ಸೋಂಕಿತರ ಜೀವ ಉಳಿಸಿದ ಜಿಲ್ಲಾಧಿಕಾರಿಯ ಸಮಯಪ್ರಜ್ಞೆ

ದೇವನಹಳ್ಳಿ/ವಿಜಯಪುರ: ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಯ ಸಮಯಪ್ರಜ್ಞೆಯಿಂದಾಗಿ ಆಮ್ಲಜನಕದ ಕೊರತೆಯಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದ 300 ಮಂದಿ ಕೋವಿಡ್ ಸೋಂಕಿತರ ಜೀವ ಉಳಿದಿದೆ.

ದೇವನಹಳ್ಳಿಯ ಆಕಾಶ್ ಆಸ್ಪತ್ರೆಯಲ್ಲಿ ದಾಖಲಾಗಿರುವ 300 ಮಂದಿ ಸೋಂಕಿತರಿಗೆ ಮಂಗಳವಾರ ಆಮ್ಲಜನಕದ ಅವಶ್ಯಕತೆ ಇತ್ತು. ಆಸ್ಪತ್ರೆಯವರು ಆಮ್ಲಜನಕ ಪೂರೈಕೆ ಮಾಡುವಂತೆ ಜಿಲ್ಲಾಡಳಿತಕ್ಕೆ ಮಾಹಿತಿ ರವಾನಿಸಿದ್ದಾರೆ. ತಕ್ಷಣ ಕಾರ್ಯಪ್ರವೃತ್ತರಾದ ಜಿಲ್ಲಾಧಿಕಾರಿ, ಹೊಸಕೋಟೆಯ ಪಿಲ್ಲಗುಂಪೆ ಕಾರ್ಖಾನೆ ಪ್ರದೇಶದ ಐನಾಕ್ಸ್ ಪ್ಲಾಂಟ್‌ಗೆ ಟ್ರಕ್ ಕಳುಹಿಸಿಕೊಟ್ಟಿದ್ದಾರೆ. ಆದರೆ, ಕೇರಳದಿಂದ ಆಮ್ಲಜನಕ ತುಂಬಿದ ಟ್ರಕ್ ಪ್ಲಾಂಟ್‌ಗೆ ಬರುವುದು ತಡವಾಗಿದೆ. ರಾತ್ರಿ 9.30ಕ್ಕೆ ಟ್ರಕ್ ಪ್ಲಾಂಟ್‌ಗೆ ಬಂದಿದೆ. ಆಸ್ಪತ್ರೆಯವರು ಕರೆ ಮಾಡಿದಾಗ ಐನಾಕ್ಸ್ ಪ್ಲಾಂಟ್‌ನಲ್ಲಿ ಸಿಬ್ಬಂದಿ ಸ್ಪಂದಿಸಿಲ್ಲ. ತಕ್ಷಣವೇ ಆಸ್ಪತ್ರೆಯವರು ಜಿಲ್ಲಾಡಳಿತದ ಗಮನಕ್ಕೆ ತಂದಿದ್ದಾರೆ. ಎಚ್ಚೆತ್ತುಕೊಂಡ ಜಿಲ್ಲಾಡಳಿತ, ಕೂಡಲೇ ಐನಾಕ್ಸ್ ಪ್ಲಾಂಟ್ ವ್ಯವಸ್ಥಾಪಕರಿಗೆ ಕರೆ ಮಾಡಿದಾಗ ಮೊಬೈಲ್ ಸ್ವಿಚ್‌ಆಫ್ ಬಂದಿದೆ. ಟ್ರಕ್ ಚಾಲಕನ ಮೊಬೈಲ್ ಕೂಡ ಸ್ವಿಚ್‌ಆಫ್ ಆಗಿದೆ. ಕೂಡಲೇ ಜಿಲ್ಲಾಧಿಕಾರಿ ಅವರು ಹೊಸಕೋಟೆ, ನಂದಗುಡಿ ಹಾಗೂ ತಿರುಮಶೆಟ್ಟಿಹಳ್ಳಿ ಠಾಣೆಗಳಿಗೆ ಮಾಹಿತಿ ನೀಡಿದ್ದಾರೆ.

ಡಿವೈಎಸ್‌ಪಿ, ಸರ್ಕಲ್ ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್ ಅವರು ತಕ್ಷಣ ಸ್ಥಳಕ್ಕೆ ಧಾವಿಸಿ ಆಮ್ಲಜನಕ ತುಂಬಿಸಲು ನೆರವಾದರು. ರಾತ್ರಿ 1.30ಕ್ಕೆ ಆಮ್ಲಜನಕ ತುಂಬಿದ ಟ್ರಕ್ ಆಸ್ಪತ್ರೆಗೆ ಬಂದಿದ್ದು, ದುರಂತ ತಪ್ಪಿದೆ.

'ಇಷ್ಟವಿಲ್ಲದಿದ್ದರೆ ಬಿಜೆಪಿ ಬಿಡಿ'

ಬೆಂಗಳೂರು: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ರಾಜ್ಯ ಸರ್ಕಾರದ ವಿರುದ್ಧ ಟೀಕೆ ಮಾಡುತ್ತಿರುವ ಎಚ್.ವಿಶ್ವನಾಥ್ ಅವರು ಪಕ್ಷ ವಿರೋಧಿ ಹೇಳಿಕೆ ನೀಡುವುದು ನಿಲ್ಲಿಸಲಿ, ಇಲ್ಲವಾದರೆ ಪಕ್ಷವನ್ನು ಬಿಡಲಿ ಎಂದು ಶಾಸಕ ಎಸ್.ಆರ್.ವಿಶ್ವನಾಥ್ ಹೇಳಿದ್ದಾರೆ.

'ನಮ್ಮ ಪಕ್ಷದಲ್ಲೇ ಇದ್ದುಕೊಂಡು ಮುಖ್ಯಮಂತ್ರಿ ಮತ್ತು ಸರ್ಕಾರವನ್ನು ಟೀಕಿಸುವುದು ಸರಿಯಲ್ಲ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ದ್ರವೀಕೃತ ಆಮ್ಲಜನಕ: ಇಸ್ರೊ ನೆರವು ಪಡೆಯಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಕೋವಿಡ್ ರೋಗಿಗಳು ಆಮ್ಲಜನಕ ಸಿಗದೆ ಬೀದಿಬೀದಿಯಲ್ಲಿ ಸಾಯುತ್ತಿರುವಾಗ ಸರ್ಕಾರ ಕಣ್ಣುಮುಚ್ಚಿ ಕುಳಿತಿದೆ. ರಾಜ್ಯದಲ್ಲಿರುವ ಆಮ್ಲಜನಕ ಉತ್ಪಾದಕ ಕಂಪನಿಗಳು ದ್ರವೀಕೃತ ಆಮ್ಲಜನಕ ಉತ್ಪಾದಿಸುವಂತೆ ಸರ್ಕಾರ ಒತ್ತಡ ಹೇರಬೇಕು' ಎಂದು ಕಾಂಗ್ರೆಸ್ ಶಾಸಕ ಎಚ್.ಕೆ. ಪಾಟೀಲ ಹೇಳಿದರು.

ಮುಖ್ಯಮಂತ್ರಿಯನ್ನು ಬುಧವಾರ ಭೇಟಿ ಮಾಡಿದ ಬಳಿಕ ಮಾತನಾಡಿದ ಅವರು, 'ಕೆಲವು ಕೈಗಾರಿಕೆಗಳು ದಿನಕ್ಕೆ 1,800 ಟನ್ ಆಮ್ಲಜನಕ ಉತ್ಪಾದಿಸುತ್ತವೆ. ಆದರೆ, ಅದರಲ್ಲಿ ದ್ರವೀಕೃತ ಆಕ್ಸಿಜನ್ ಪ್ರಮಾಣ ಶೇ 5ರಷ್ಟು ಮಾತ್ರ. ಈ ಕೈಗಾರಿಕೆಗಳಿಗೆ ತಕ್ಷಣ ಪ್ರಾಮಾಣಿಕ ವಿಜ್ಞಾನಿಗಳು, ತಂತ್ರಜ್ಞರ ತಂಡ ಕಳುಹಿಸಬೇಕು' ಎಂದೂ ಅವರು ಆಗ್ರಹಿಸಿದರು.

'ದ್ರವೀಕೃತ ಆಮ್ಲಜನಕ ಸಂಗ್ರಹಿಸಿ ಇಡಲು ಟ್ಯಾಂಕುಗಳಿಲ್ಲ ಎಂದು ಮುಖ್ಯಮಂತ್ರಿ ಹೇಳುತ್ತಿದ್ದಾರೆ. ಆಮ್ಲಜನಕ ಸಂಗ್ರಹಿಸಲು ಸಾಧ್ಯವಾಗುವಂತೆ ಕೆಲವು ರಚನಾತ್ಮಕ ಸಲಹೆಗಳನ್ನು ಅವರಿಗೆ ನೀಡಿದ್ದೇನೆ' ಎಂದರು.


ಎಚ್.ಕೆ.ಪಾಟೀಲ

'ಇಸ್ರೋ ಕ್ಯಾಂಪಸ್ಸಿನಲ್ಲಿ 10 ಲಕ್ಷ ಲೀಟರ್ ಸಾಮರ್ಥ್ಯದ ಟ್ಯಾಂಕುಗಳಿವೆ. ಅಲ್ಲದೆ, ಯು.ಆರ್. ರಾವ್ ಸೆಂಟರ್‌ನಲ್ಲಿ 1.25 ಲಕ್ಷ, 50 ಸಾವಿರ ಮತ್ತು 30 ಸಾವಿರ ಲೀಟರ್ ಸಾಮರ್ಥ್ಯದ ತಲಾ 3 ಟ್ಯಾಂಕುಗಳಿವೆ. ಈ ಟ್ಯಾಂಕುಗಳ ಒಟ್ಟು ಸಾಮರ್ಥ್ಯ 12.35 ಲಕ್ಷ ಲೀಟರ್. ಮಾರತ್ತಹಳ್ಳಿಯಲ್ಲಿರುವ ಇಸ್ರೋ ಕ್ಯಾಂಪಸ್‌ನಲ್ಲಿ 1.25 ಲಕ್ಷ ಸಾಮರ್ಥ್ಯದ 4 ಟ್ಯಾಂಕುಗಳಿವೆ. ಅವುಗಳ ಸಾಮರ್ಥ್ಯ 5 ಲಕ್ಷ ಲೀಟರ್. ಹೀಗೆ ಒಟ್ಟು 17 ಲಕ್ಷ ಲೀಟರ್ ಸಾಮರ್ಥ್ಯ ನೈಟ್ರೋಜನ್ ಟ್ಯಾಂಕುಗಳನ್ನು ದ್ರವೀಕೃತ ಆಮ್ಲಜನಕ ತುಂಬಿಸುವ ಟ್ಯಾಂಕುಗಳಾಗಿ ಪರಿವರ್ತಿಸಬಹುದು' ಎಂದು ಅವರು ಸಲಹೆ ನೀಡಿದರು.

'ನೈಟ್ರೋಜನ್ ಟ್ಯಾಂಕುಗಳನ್ನು ಆಮ್ಲಜನಕ ಟ್ಯಾಂಕುಗಳಾಗಿ ಬದಲಾಯಿಸುವುದು ಕಷ್ಟದ ಕೆಲಸವಲ್ಲ. ವಾಲ್ವ್‌ಗಳನ್ನು ಬದಲಿಸಬೇಕು ಅಷ್ಟೆ. ಕೇವಲ ಮೂರು ದಿನಗಳಲ್ಲಿ ಈ ಕೆಲಸ ಮಾಡಬಹುದು' ಎಂದೂ ಅವರು ಹೇಳಿದರು.

ನಿತ್ಯ ಮಾಹಿತಿ ನೀಡಲು ಸಚಿವರಿಗೆ ಸಿಎಂ ಸೂಚನೆ

ಬೆಂಗಳೂರು: 'ರಾಜ್ಯದಲ್ಲಿ ಕೋವಿಡ್ ನಿರ್ವಹಣೆಯ ಹೊಣೆ ಹೊತ್ತಿರುವ ಐವರು ಸಚಿವರು ಯಾವುದೇ ಲೋಪ ಆಗದಂತೆ ನೋಡಿಕೊಳ್ಳಬೇಕು. ಪ್ರತಿ ದಿನದ ಮಾಹಿತಿಯನ್ನು ನೀಡಬೇಕು' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೂಚನೆ ನೀಡಿದ್ದಾರೆ.

ತಮ್ಮ ನಿವಾಸ 'ಕಾವೇರಿ'ಯಲ್ಲಿ ಸಚಿವರು ಹಾಗೂ ಅಧಿಕಾರಿಗಳ ಜೊತೆ ಕೋವಿಡ್ ನಿಯಂತ್ರಣದ ಕುರಿತು ಬುಧವಾರ ಅವರು ಚರ್ಚೆ ನಡೆಸಿದರು.

ಪ್ರಮುಖವಾಗಿ ಆಮ್ಲಜನ ಕೊರತೆ ನೀಗಿಸಲು ಹೆಚ್ಚಿನ ಗಮನಹರಿಸಬೇಕು. ತುರ್ತು ಅಗತ್ಯವಿರುವ ರೋಗಿಗಳಿಗೆ ಹಾಸಿಗೆ ಹಂಚಿಕೆಗೆ ಕ್ರಮ ವಹಿಸಬೇಕು, ರೆಮ್‌ಡಿಸಿವಿರ್ ಚುಚ್ಚುಮದ್ದು ಪೂರೈಕೆಯನ್ನು ಅಗತ್ಯಕ್ಕೆ ತಕ್ಕಂತೆ ಪೂರೈಸಲು ಕ್ರಮ ತೆಗೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ್, ಸಚಿವರಾದ ಜಗದೀಶ ಶೆಟ್ಟರ್, ಅರವಿಂದ ಲಿಂಬಾವಳಿ, ಡಾ.ಕೆ. ಸುಧಾಕರ್, ಆರ್. ಅಶೋಕ ಮತ್ತು ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಸಭೆಯಲ್ಲಿದ್ದರು.

ಹಾಸಿಗೆ ನೀಡಲು ಲಕ್ಷಗಟ್ಟಲೆ ವಸೂಲಿ:ಮೂವರ ಬಂಧನ

ಪ್ರಜಾವಾಣಿ ವಾರ್ತೆ


ಪುನೀತ್


ಮಂಜುನಾಥ್

ಬೆಂಗಳೂರು: ಕೊರೊನಾ ರೋಗಿಗೆ ಆಸ್ಪತ್ರೆಯಲ್ಲಿ ಹಾಸಿಗೆ ಕೊಡಿಸಲು ₹1.20 ಲಕ್ಷ ಹಣ ಪಡೆದ ಮೂವರನ್ನು ಸದಾಶಿವನಗರ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಖಾಸಗಿ ಆಸ್ಪತ್ರೆಯ ಸಿಬ್ಬಂದಿ ವೆಂಕಟ ಸುಬ್ಬರಾವ್ (28), ಮಂಜುನಾಥ್ (31) ಹಾಗೂ ಮತ್ತೊಂದು ಆಸ್ಪತ್ರೆಯಲ್ಲಿ 'ಆರೋಗ್ಯ ಮಿತ್ರ'ನಾಗಿ ಕೆಲಸ ಮಾಡುತ್ತಿದ್ದ ಪುನೀತ್ (31) ಬಂಧಿತರು.

'ಕೊರೊನಾ ಸೋಂಕಿತ ಮಹಿಳೆಯೊಬ್ಬರು ಚಿಕಿತ್ಸೆಗಾಗಿ ನೆಲಮಂಗಲದಿಂದ ಇಲ್ಲಿನ ಖಾಸಗಿ ಆಸ್ಪತ್ರೆಗೆ ಬಂದಿದ್ದರು. ಅಲ್ಲಿ ಹಾಸಿಗೆ ಸಿಗದೆ ಪರದಾಡುತ್ತಿದ್ದರು. ಈ ವೇಳೆ ₹1.20 ಲಕ್ಷ ಹಣ ನೀಡಿದರೆ ಬೇರೆ ಆಸ್ಪತ್ರೆಯಲ್ಲಿ ಹಾಸಿಗೆ ಕೊಡಿಸುವುದಾಗಿ ಆರೋಪಿಗಳು ತಿಳಿಸಿದ್ದರು'.

'ತುರ್ತಾಗಿ ಹಾಸಿಗೆ ಅಗತ್ಯ ಇದ್ದಿದ್ದರಿಂದ ಸೋಂಕಿತೆಯ ಮಗ ಲಕ್ಷ್ಮೀಶ ಎಂಬುವರು ಆರೋಪಿಗಳಿಗೆ ಗೂಗಲ್ ಪೇ ಮೂಲಕ ₹50 ಸಾವಿರ ಹಾಗೂ ₹70 ಸಾವಿರ ನಗದು ನೀಡಿದ್ದರು. ಇದಾದ ನಂತರ ಬೇರೆ ಆಸ್ಪತ್ರೆಯಲ್ಲಿ ರೋಗಿಗೆ ಹಾಸಿಗೆ ವ್ಯವಸ್ಥೆಯೂ ಆಯಿತು. ಆದರೆ, ಕೆಲವೇ ಗಂಟೆಗಳಲ್ಲಿ ರೋಗಿ ಮೃತಪಟ್ಟಿದ್ದರು'.


ವೆಂಕಟ ಸುಬ್ಬರಾವ್

'ಇದರಿಂದ ಮನನೊಂದ ಮೃತರ ಮಗ ಲಕ್ಷ್ಮೀಶ ಹಾಸಿಗೆಗಾಗಿ ಆರೋಪಿಗಳು ಹಣಕ್ಕೆ ಬೇಡಿಕೆ ಇಟ್ಟಿರುವ ಕುರಿತು ಪೊಲೀಸರಿಗೆ ದೂರು ನೀಡಿದ್ದರು. ಇದರ ಅನ್ವಯ ಪೊಲೀಸರು ಮೂವರನ್ನೂ ಬಂಧಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬೆಡ್ ಕೊರತೆ: ಶಾಸಕಿ ಸೌಮ್ಯಾರೆಡ್ಡಿ ಧರಣಿ


ಬೆಂಗಳೂರು: ಕೋವಿಡ್ ರೋಗಿಗಳಿಗೆ ಸಮರ್ಪಕವಾಗಿ ಹಾಸಿಗೆ, ಐಸಿಯು, ವೆಂಟಿಲೇಟರ್ ವ್ಯವಸ್ಥೆ ಮಾಡುವಂತೆ ಆಗ್ರಹಿಸಿ ಶಾಸಕಿ ಸೌಮ್ಯಾರೆಡ್ಡಿ ಅವರು ಜಯನಗರ 2ನೇ ಬ್ಲಾಕ್‌ನಲ್ಲಿರುವ ಪಾಲಿಕೆ ಜಂಟಿ ಆಯುಕ್ತರ ಕಚೇರಿ ಎದುರು ಬುಧವಾರ ಧರಣಿ ನಡೆಸಿದರು.

ಜಯನಗರ ವ್ಯಾಪ್ತಿಯಲ್ಲಿ ಹಾಸಿಗೆ ಸಿಗದೆ, ಆಸ್ಪತ್ರೆಗಳಲ್ಲಿ ಚಿಕಿತ್ಸೆ ಸಿಗದೆ ಮೃತಪಟ್ಟ ಕೊರೊನಾ ರೋಗಿಗಳ ವಿವರಗಳನ್ನು ಪ್ರದರ್ಶಿಸಿ ಧರಣಿ ಕುಳಿತರು.

ಸ್ಥಳಕ್ಕೆ ಬಂದ ಪೊಲೀಸರು ಧರಣಿ ಕೈಬಿಡುವಂತೆ ವಿನಂತಿಸಿದರು. ಆದರೆ, ಅವರು ಧರಣಿ ಕೈಬಿಡಲಿಲ್ಲ. ಕೊನೆಗೆ ಸೌಮ್ಯಾ ಹಾಗೂ ಧರಣಿಯಲ್ಲಿ ಕುಳಿತಿದ್ದ ಹಲವರನ್ನು ವಶಕ್ಕೆ ಪಡೆದರು.

ನಿಧನ ವಾರ್ತೆ

ದೇಶಪಾಂಡೆ ಸುಬ್ಬರಾಯ



ಧಾರವಾಡ: ಹಿರಿಯ ಕವಿ, ವಿಮರ್ಶಕ ಹಾಗೂ ರಂಗಭೂಮಿ ಕಲಾವಿದ ದೇಶಪಾಂಡೆ ಸುಬ್ಬರಾಯ (76) ಅವರು ಕುಸುಮನಗರದ ತಮ್ಮ ನಿವಾಸದಲ್ಲಿ ಭಾನುವಾರ ನಿಧನರಾದರು.

ರೈಲ್ವೆ ಇಲಾಖೆಯ ನಿವೃತ್ತ ಅಧಿಕಾರಿಯಾಗಿದ್ದ ಅವರಿಗೆ ಪತ್ನಿ, ಮೂವರು ಪುತ್ರಿಯರು ಇದ್ದಾರೆ.

ಸುಮಾರು 22 ಕವನ ಸಂಕಲನಗಳನ್ನು ಹೊರತಂದಿರುವ ಇವರು ವಿಮರ್ಶೆ ಹಾಗೂ ಕಥೆಗಳನ್ನು ರಚಿಸಿದ್ದಾರೆ. ಮೊಳಗುತಿದೆ ಕಹಳೆ, ನಾಲ್ಕು ಹಿಡಿ ಬೆಂಕಿ, ನನ್ನಾಕೆ, ಬೊಗಸೆ ತುಂಬದ ಬದುಕು, ಕಣ್ಣೀರು ಕಳಕೊಂಡವನು, ಅಮೆರಿಕೆಯಲ್ಲಿ ಸಾಧನಕೆರೆ, ಶೇಕ್ಸ್‌ಪಿಯರ್ ಹೂಗಳು ಅವರ ಪ್ರಮುಖ ಕವನ ಸಂಕಲನಗಳು. ಮಾಸದ ವ್ಯಾಸಂಗ, ಕನ್ನಡ ಸಾಹಿತ್ಯದಲ್ಲಿ ನವ್ಯ ಪ್ರಜ್ಞೆ, ಅನ್ವೇಷಣದ ಅಡಿಗರು ಸೇರಿದಂತೆ ಕೆಲವು ವಿಮರ್ಶಾ ಕೃತಿಗಳನ್ನು ಬರೆದಿದ್ದಾರೆ. ಅವರಿಗೆ ಮುದ್ದಣ ಪ್ರಶಸ್ತಿ ಸೇರಿದಂತೆ ವಿವಿಧ ಪ್ರಶಸ್ತಿಗಳು ಲಭಿಸಿವೆ.

ನಾಗರಾಜ್

ಬೆಂಗಳೂರು: ಚಿಕ್ಕಲಸಂದ್ರ ನಿವಾಸಿ ನಾಗರಾಜ್ (57) ಅನಾರೋಗ್ಯ ಸಮಸ್ಯೆಯಿಂದ ಬುಧವಾರ ನಿಧನರಾದರು.

ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆ ಗುರುವಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಗುಣವತಿ



ಬೆಂಗಳೂರು: ಬೆಳ್ಳಂದೂರಿನಲ್ಲಿ ವಾಸವಿದ್ದ ಗುಣವತಿ (50) ಅನಾರೋಗ್ಯ ಸಮಸ್ಯೆಯಿಂದ ಮಂಗಳವಾರ ನಿಧನರಾದರು.

ಅವರಿಗೆ ಪತಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಮಂಗಳವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುಳ್ಳು ಮಾಹಿತಿ ಟ್ವೀಟ್ ಮಾಡಿದರೇ ಸಂಸದ ತೇಜಸ್ವಿ ಸೂರ್ಯ

ಬಿಬಿಎಂಪಿ ಹಾಸಿಗೆ ಲಭ್ಯತೆ ಶೂನ್ಯಕ್ಕಿಳಿದಿದ್ದು ನಿಜವೇ?

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: 'ಸರ್ಕಾರಿ ಕೋಟಾ ಮೂಲಕ ಹಂಚಿಕೆ ಮಾಡುವ ಹಾಸಿಗೆಗಳ ಲಭ್ಯತೆ ಸಂಖ್ಯೆ ಶೂನ್ಯ ಎಂದು ಬಿಬಿಎಂಪಿ ವೆಬ್‌ಸೈಟ್ ಇಂದು ಮಧ್ಯಾಹ್ನ ತೋರಿಸಿತ್ತು. ಈಗ ಅದು 1504 ಹಾಸಿಗೆಗಳು ಲಭ್ಯ ಎಂದು ತೋರಿಸುತ್ತಿದೆ. ವ್ಯವಸ್ಥೆ ಸುಧಾರಣೆ ಆಗುತ್ತಿದೆ...'

ಇದು ಸಂಸದ ತೇಜಸ್ವಿ ಸೂರ್ಯ ಅವರು ಮಂಗಳವಾರ ರಾತ್ರಿ 10 ಗಂಟೆ ಸುಮಾರಿಗೆ ಮಾಡಿದ್ದ ಟ್ವೀಟ್. ಕೋವಿಡ್ ರೋಗಿಗಳಿಗೆ ಬಿಬಿಎಂಪಿ ಮೂಲಕ ಹಂಚಿಕೆ ಮಾಡುವ ದಂಧೆ ಬಯಲಿಗೆ ಎಳೆದ ಬಳಿಕ ವ್ಯವಸ್ಥೆ ಸುಧಾರಣೆ ಆಗಿದೆ ಎಂದು ತೋರಿಸಲು ಅವರು ಟ್ವೀಟ್ ಮಾಡಿದ್ದರು. ಕೋವಿಡ್ ರೋಗಿಗಳಿಗೆ ಸರ್ಕಾರಿ ಕೋಟಾದಲ್ಲಿ ಹಂಚಿಕೆ ಮಾಡಲು ಸರ್ಕಾರಿ ವೈದ್ಯಕೀಯ ಕಾಲೇಜು, ಸರ್ಕಾರಿ ಆಸ್ಪತ್ರೆ, ಖಾಸಗಿ ವೈದ್ಯಕೀಯ ಕಾಲೇಜುಗಳು, ಖಾಸಗಿ ಆಸ್ಪತ್ರೆಗಳು, ಸರ್ಕಾರದ ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಹಂಚಿಕೆಗೆ ಲಭ್ಯ ಇರುವ ಹಾಸಿಗೆಗಳ ವಿವರವನ್ನೂ ಟ್ವೀಟ್‌ನಲ್ಲಿ ಹಂಚಿಕೊಂಡಿದ್ದರು.

ಅವರು ಬಿಬಿಎಂಪಿಯ ಹಾಸಿಗೆ ಹಂಚಿಕೆ ದಂಧೆ ಬಯಲಿಗೆಳೆದ ಬಳಿಕ ಬಿಬಿಎಂಪಿ ಪೋರ್ಟಲ್‌ನಲ್ಲಿ ಹಾಸಿಗೆ ಲಭ್ಯತೆ ಹೆಚ್ಚಳವಾಗುವ ಬದಲು ಕಡಿಮೆ ಆಗಿದೆ. ಮಂಗಳವಾರ ರಾತ್ರಿ 1,504 ಹಾಸಿಗೆಗಳು ಹಂಚಿಕೆಗೆ ಲಭ್ಯವಿದ್ದರೆ, ಮಧ್ಯಾಹ್ನದ ವೇಳೆ 2,015 ಹಾಸಿಗೆಗಳು ಹಂಚಿಕೆಗೆ ಲಭ್ಯ ಇದ್ದವು.

ವಾಸ್ತವದಲ್ಲಿ ಬಿಬಿಎಂಪಿಯು ಕೇಂದ್ರೀಕೃತ ಹಂಚಿಕೆ ವ್ಯವಸ್ಥೆಯ ತಂತ್ರಾಂಶದ ಮೂಲಕ ಹಂಚಿಕೆ ಮಾಡುವ ಹಾಸಿಗೆಗಳ ಸಂಖ್ಯೆ ಯಾವತ್ತೂ ಶೂನ್ಯಕ್ಕೆ ಇಳಿದಿಲ್ಲ. ಆದರೆ, ಐಸಿಯು, ವೆಂಟಿಲೇಟರ್ ಸೌಲಭ್ಯ ಇರುವ ಐಸಿಯು ಹಾಸಿಗೆಗಳ ಸಂಖ್ಯೆ ಶೂನ್ಯವ-ಲ್ಲದಿದ್ದರೂ 10ಕ್ಕಿಂತ ಕಡಿಮೆ ಸಂಖ್ಯೆಗೆ ಇಳಿದ ಉದಾಹರಣೆಗಳಿವೆ. ನಗರದಲ್ಲಿ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಲಭ್ಯತೆ ಇದೆ. ಆದರೆ, ತುರ್ತು ಅಗತ್ಯ ಇರುವುದು ಐಸಿಯು ಹಾಗೂ ವೆಂಟಿಲೇಟರ್ ಸೌಲಭ್ಯ ಇರುವ ಹಾಸಿಗೆಗಳದ್ದು. ಅವುಗಳ ಕೊರತೆ ಈಗಲೂ ತೀವ್ರವಾಗಿದೆ.

ಈ ಟ್ವೀಟ್ ಬಗ್ಗೆ ಪ್ರತಿಕ್ರಿಯೆ ಪಡೆಯಲು ತೇಜಸ್ವಿಸೂರ್ಯ ಅವರಿಗೆ (ಅವರು ಚುನಾವಣೆಯ ವೇಳೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ನಮೂದಿಸಿದ್ದ ಮೊಬೈಲ್ ಸಂಖ್ಯೆ) ಕರೆ ಮಾಡಿದರೂ ಸ್ವೀಕರಿಸಲಿಲ್ಲ. ಸಂದೇಶಕ್ಕೂ ಪ್ರತಿಕ್ರಿಯಿ-ಸಲಿಲ್ಲ.

ಸಂಸದರ ಟ್ವೀಟ್ ಬಗ್ಗೆ ಪ್ರತಿಕ್ರಿ-ಯಿಸಿದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, 'ಬಿಬಿಎಂಪಿಯ ಪೋರ್ಟಲ್‌ನಲ್ಲಿ ಯಾವತ್ತೂ ಒಟ್ಟು ಹಾಸಿಗೆಗಳ ಲಭ್ಯತೆ ಪ್ರಮಾಣ ಶೂನ್ಯ ಎಂದು ತೋರಿಸಿಲ್ಲ. ಆದರೆ, ಐಸಿಯು ಮತ್ತು ವೆಂಟಿಲೇಟರ್ ಸೌಲಭ್ಯ ಇರುವ ಹಾಸಿಗೆಗಳ ತೀವ್ರ ಕೊರತೆ ಇರುವುದು ನಿಜ' ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

'ಹಾಸಿಗೆ ಲಭ್ಯತೆ ಬಗ್ಗೆ ನಾನು ಆಗಾಗ ಟ್ವೀಟ್ ಮಾಡುತ್ತಿರುತ್ತೇನೆ. ಹಾಸಿಗೆ ಲಭ್ಯತೆ ಶೂನ್ಯಕ್ಕೆ ಇಳಿದಿತ್ತೇ ಎಂಬುದನ್ನು ಈ ಟ್ವೀಟ್‌ಗಳನ್ನು ನೋಡಿ ತಿಳಿಯಬಹುದು' ಎಂದರು.

ಹಾಸಿಗೆ ಲಭ್ಯತೆ ಕುರಿತು ಗೌರವ್ ಗುಪ್ತ ಅವರು ಮಂಗಳವಾರ ಮಧ್ಯಾಹ್ನ 11 ಗಂಟೆಗೆ ಮಾಡಿರುವ ಟ್ವೀಟ್‌ನಲ್ಲೂ ಒಟ್ಟು 2,015 ಹಾಸಿಗೆಗಳು ಹಂಚಿಕೆಗೆ ಲಭ್ಯ ಇವೆ ಎಂಬ ಮಾಹಿತಿ ಇತ್ತು.

ಹಾಸಿಗೆ ಹಂಚಿಕೆ: ಕಾಂಗ್ರೆಸ್ ವಾಗ್ದಾಳಿ

ಬೆಂಗಳೂರು: 'ಬಿಬಿಎಂಪಿಯಲ್ಲಿ ಹಾಸಿಗೆ ಹಂಚಿಕೆ ದಂಧೆ ನಡೆದಿದೆ ಎಂದರೆ ಅದಕ್ಕೆ ಪಕ್ಷದ ವಿರೋಧವಿದೆ. ಈ ಬಗ್ಗೆ ತನಿಖೆ ನಡೆಯಲಿ. ಸರ್ಕಾರದಲ್ಲಿ ಬಿಬಿಎಂಪಿಯ ಜವಾಬ್ದಾರಿ ಹೊತ್ತಿರುವವರು ರಾಜೀನಾಮೆ ನೀಡಲಿ' ಎಂದು ಕಾಂಗ್ರೆಸ್ ರಾಷ್ಟ್ರೀಯ ವಕ್ತಾರ ಬ್ರಿಜೇಶ್ ಕಾಳಪ್ಪ ಆಗ್ರಹಿಸಿದರು.

ಪಕ್ಷದ ರಾಜ್ಯಸಭಾ ಸದಸ್ಯ ನಜೀರ್ ಹುಸೇನ್ ಜೊತೆ ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಸಂವಿಧಾನ ಸಮಾನತೆ ಹಕ್ಕು ನೀಡಿರುವಾಗ ಒಂದು ಕೋಮಿನ 17 ಜನರ ಹೆಸರಿನ ಪಟ್ಟಿ ಓದಿ ಪ್ರಕರಣ ಬಯಲಿಗೆಳೆದ ಸಂಸದ ತೇಜಸ್ವಿಸೂರ್ಯ ಅವರದ್ದು ರಾಜಧರ್ಮ ಪಾಲನೆಯೇ' ಎಂದು ಪ್ರಶ್ನಿಸಿದರು.

'ಚಾಮರಾಜನಗರ ಪ್ರಕರಣದ ಹಾದಿ ತಪ್ಪಿಸಲು ತೇಜಸ್ವಿ ಸೂರ್ಯ ಈ ಪ್ರಹಸನ ಮಾಡಿದ್ದಾರೆ. ಬಿಜೆಪಿ ಸರ್ಕಾರದ ಮೇಲೆ ದಾಳಿ ಮಾಡುವ ಮೂಲಕ ಮುಖ್ಯಮಂತ್ರಿ ವಿರುದ್ಧ ಆರೋಪ ಮಾಡುತ್ತಿದ್ದಾರೆ. ಇಪ್ಪತ್ತು ಸಾವಿರ ತೆಗೆದುಕೊಂಡಿರುವವರ ಬಗ್ಗೆ ಅವರು ಮಾತನಾಡುತ್ತಾರೆ. ಆದರೆ, ಸರ್ಕಾರ ಕೋಟಿ ಕೋಟಿ ಅವ್ಯವಹಾರ ಮಾಡಿದೆ. ಅದರ ಬಗ್ಗೆ ಮಾತಾಡಿಲ್ಲ' ಎಂದು ಟೀಕಿಸಿದರು.

'ತೇಜಸ್ವಿ ಸೂರ್ಯ ಒಂದು ಟ್ರಸ್ಟ್ ನಡೆಸುತ್ತಿದ್ದಾರೆ. ತಮಗೆ ಬೇಕಾದವರಿಗೆ ಹಾಸಿಗೆ ಕೊಡಿಸುವುದು ಆ ಟ್ರಸ್ಟ್ ಕೆಲಸ. ಇದಕ್ಕಾಗಿ ಸರ್ಕಾರವನ್ನು ಬ್ಲ್ಯಾಕ್‌ಮೇಲ್ ಮಾಡಲಾಗುತ್ತಿದೆ. ಹಾಸಿಗೆಗಳನ್ನು ಒಂದೇ ಕೋಮಿನವರಿಗೆ ಕೊಡಿಸುವ ಕೆಲಸ ನಡೆಯುತ್ತಿದೆ' ಎಂದೂ ದೂರಿದರು.

ತೇಜಸ್ವಿ ಸೂರ್ಯ ವಿರುದ್ಧ ವಾಗ್ದಾಳಿ ನಡೆಸಿದ ನಜೀರ್‌ಹುಸೇನ್, 'ಕೊರೊನಾ ಅಷ್ಟೇ ಅಲ್ಲ. ಈ ತೇಜಸ್ವಿ ಸೂರ್ಯನಂಥವರ ಮನಸ್ಸಿನಲ್ಲಿರುವ ಕೋಮು ವೈರಸ್‌ಗೆ ಲಸಿಕೆ ಹುಡುಕಬೇಕಿದೆ' ಎಂದರು.

'ತಪ್ಪು ಯಾರೇ ಮಾಡಿದ್ದರೂ ಜಾತಿ, ಮತ, ಧರ್ಮ ಹಾಗೂ ವರ್ಣಗಳ ಭೇದವಿಲ್ಲದೇ ಶಿಕ್ಷೆ ಆಗಬೇಕು' ಎಂದೂ ಆಗ್ರಹಿಸಿದರು.

'ಹಾಸಿಗೆ ಒದಗಿಸಲು ನೆರವು ನೀಡುವುದಕ್ಕೂ ಭಯ'

'ಕೋವಿಡ್ ವಾರ್ ರೂಂ ಮೂಲಕ ಹಾಸಿಗೆ ಹಂಚಿಕೆಯಲ್ಲಿ ಅವ್ಯವಹಾರ ನಡೆಯುತ್ತಿದೆ' ಎಂದು ಆರೋಪಿಸಿದ್ದ ಸಂಸದ ತೇಜಸ್ವಿಸೂರ್ಯ, 'ವಾರ್ ರೂಂ ಎಲ್ಲ ಸಿಬ್ಬಂದಿಯ ಫೋನ್ ಕರೆಗಳ ವಿವರ ಸಂಗ್ರಹಿಸಿ ಪರಿಶೀಲಿಸಬೇಕು' ಎಂದು ಒತ್ತಾಯಿಸಿದ್ದರು.

ಈ ಬೆಳವಣಿಗೆ ಬಳಿಕ, ತುರ್ತು ಅವಶ್ಯಕತೆ ಇರುವವರಿಗೂ ಹಾಸಿಗೆ ಒದಗಿಸಲು ನೆರವಾಗುವುದಕ್ಕೆ ಬಿಬಿಎಂಪಿ ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆ. ಹಾಸಿಗೆ ಬೇಕಿದ್ದರೆ 1912 ಸಹಾಯವಾಣಿಗೆ ಕರೆ ಮಾಡಿ ಎಂದು ಸಲಹೆ ನೀಡುತ್ತಿದ್ದಾರೆ.

ತುರ್ತಾಗಿ ಐಸಿಯು ಹಾಸಿಗೆ ಅವಶ್ಯಕತೆ ಇರುವವರು ಬಿಬಿಎಂಪಿ ಸಹಾಯವಾಣಿ 1912ಗೆ ಕರೆ ಮಾಡಿದರೆ ಸಂಪರ್ಕವೇ ಸಿಗುತ್ತಿಲ್ಲ. ಐಸಿಯು ಹಾಸಿಗೆ ಒದಗಿಸಲು ಬಿಬಿಎಂಪಿ ಸಿಬ್ಬಂದಿಗೆ ಸಾಧ್ಯವಾಗುತ್ತಿಲ್ಲ.

'ಈಗಲೂ ಸಿಗುತ್ತಿಲ್ಲ ಐಸಿಯು ಹಾಸಿಗೆ'

ಬಿಬಿಎಂಪಿ ಹಂಚಿಕೆ ಮಾಡುವ ಐಸಿಯು ಹಾಗೂ ವೆಂಟಿಲೇಟರ್ ಹಾಸಿಗೆಗಳು ಲಭಿಸದ ಕಾರಣ ತೀವ್ರ ಉಸಿರಾಟದ ಸಮಸ್ಯೆ ಹೊಂದಿರುವ ಕೋವಿಡ್ ರೋಗಿಗಳು ಬುಧವಾರವೂ ಸಮಸ್ಯೆ ಎದುರಿಸಿದರು.

ಎಲ್ಲಾದರೂ ಒಂದು ಐಸಿಯು ಹಾಸಿಗೆ ಒದಗಿಸಿ ಎಂದು ಕೋವಿಡ್ ರೋಗಿಗಳ ಬಂಧುಗಳು ಸಾಮಾಜಿಕ ಜಾಲತಾಣಗಳ ಮೂಲಕ ಅಂಗಲಾಚಿದರು.

'ಪತಿ ಲಿಂಗರಾಜು ಅವರ ರಕ್ತದ ಆಮ್ಲಜನಕದ ಮಟ್ಟ 86ಕ್ಕೆ ಇಳಿದಿದೆ. ಐಸಿಯು ಹಾಸಿಗೆಗಾಗಿ ಎಷ್ಟು ಅಲೆದರೂ ಸಿಗುತ್ತಿಲ್ಲ. ಬಿಬಿಎಂಪಿ ಸಹಾಯವಾಣಿಗೆ ಕರೆ ಮಾಡಿದರೂ ಸ್ಪಂದನೆ ಸಿಗುತ್ತಿಲ್ಲ' ಎಂದು ಟಿ.ದಾ-ಸರಹಳ್ಳಿಯ ಶ್ರುತಿ ತಿಳಿಸಿದರು. 'ಎಲ್ಲಾದರೂ ಒಂದು ಐಸಿಯು ಹಾಸಿಗೆ ವ್ಯವಸ್ಥೆ ಮಾಡಿಕೊಡಿ' ಎಂದು ಮನವಿ ಮಾಡಿದರು.

ಹಲವರನ್ನು ವಶಕ್ಕೆ ಪಡೆದಿರುವ ಸಿಸಿಬಿ ಅಧಿಕಾರಿಗಳು

ಇಬ್ಬರು ವೈದ್ಯರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ರೋಗಿಗಳಿಗೆ ನೀಡುವ ಹಾಸಿಗೆ ಬ್ಲಾಕಿಂಗ್ ದಂಧೆಯಲ್ಲಿ ಭಾಗಿಯಾಗಿರುವ ಆರೋಪದಡಿ ಇಬ್ಬರು ವೈದ್ಯರನ್ನು ಸಿಸಿಬಿ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಬೆಂಗಳೂರುದಕ್ಷಿಣ ವಿಭಾಗದ ವಾರ್ ರೂಂ ಉಸ್ತುವಾರಿ ರಿಹಾನ್ ಹಾಗೂ ಬೊಮ್ಮನಹಳ್ಳಿ ವಲಯದ ವಾರ್‌ರೂಂ ಉಸ್ತುವಾರಿ ಶಶಿ ಬಂಧಿತ ವೈದ್ಯರು.

ಈ ದಂಧೆಯಲ್ಲಿ ತೊಡಗಿದ್ದ ನೇತ್ರಾವತಿ ಹಾಗೂ ರೋಹಿತ್‌ಕುಮಾರ್ ಎಂಬುವರನ್ನು ಜಯನಗರ ಪೊಲೀಸರು ಮಂಗಳವಾರ ಬಂಧಿಸಿದ್ದರು. ಇದರ ಬೆನ್ನಲ್ಲೇ ಈ ಪ್ರಕರಣವನ್ನು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಸಿಸಿಬಿಗೆ ವರ್ಗಾಯಿಸಿದ್ದರು.

'ಬಂಧನದಲ್ಲಿರುವ ನೇತ್ರಾವತಿ ಜಯನಗರದ ಖಾಸಗಿ ಆಸ್ಪತ್ರೆಗ-ಳಲ್ಲಿ ತಲಾ ₹50 ಸಾವಿರಕ್ಕೆ ಎರಡು ಹಾಸಿಗೆಗಳನ್ನು ಮಾರಾಟ ಮಾಡಿದ್ದಳು. ಈ ದಂಧೆಗೆ ತನ್ನ ನೆರೆಮನೆಯ ರೋಹಿತ್‌ನನ್ನು ಸೇರಿಸಿಕೊಂಡಿದ್ದ-ಳು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಸೋಂಕಿತರ ಸಂಬಂಧಿಕರ ವೇಷದಲ್ಲಿ ಪೊಲೀಸರು ಕಾರ್ಯಾಚರಣೆ ನಡೆಸಿ ಇಬ್ಬರನ್ನೂ ಬಂಧಿಸಿದ್ದರು.

'ಪ್ರಕರಣದಲ್ಲಿ ಇನ್ನೂ ಹಲವರು ಭಾಗಿಯಾಗಿರುವ ಕುರಿತು ಪೊಲೀಸರಿಗೆ ಮಾಹಿತಿ ಸಿಕ್ಕಿತ್ತು. ಅಲ್ಲದೇ ಬಂಧಿತರು ನೀಡಿದ ಮಾಹಿತಿ ಮೇರೆಗೆ ಈ ಇಬ್ಬರು ವೈದ್ಯರು ಸಿಕ್ಕಿಬಿದ್ದಿದ್ದಾರೆ. ವೈದ್ಯರು ಪ್ರತಿ ಹಾಸಿಗೆ ಬ್ಲಾಕ್ ಮಾಡಲು ನೇತ್ರಾವತಿ ಹಾಗೂ ರೋಹಿತ್‌ಕುಮಾರ್‌ಗೆ ಶೇ 10ರಷ್ಟು ಕಮಿಷನ್ ನೀಡುತ್ತಿದ್ದರು' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ಈ ಸಂಬಂಧ ಜಯನಗರ ಠಾಣೆಯಲ್ಲಿ ಎರಡು ಪ್ರತ್ಯೇಕ ಎಫ್‌ಐಆರ್‌ಗಳು ದಾಖಲಾಗಿವೆ. ಪ್ರಕ-ರಣದಲ್ಲಿ ಭಾಗಿಯಾಗಿರುವ ಶಂಕೆಯಡಿ ಹಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದೂ ಮಾಹಿತಿ ನೀಡಿದೆ.

8 ವಲಯ ವಾರ್‌ರೂಂಗಳ ಮೇಲೆ ದಾಳಿ: 'ಬ್ಲಾಕಿಂಗ್ ದಂಧೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಸಿಬಿ ಪೊಲೀಸರು, ಎಂಟು ವಲಯಗಳ ವಾರ್‌ರೂಂಗಳ ಮೇಲೆ ಬುಧವಾರ ದಾಳಿ ನಡೆಸಿದರು. ಇಬ್ಬರು ಎಸಿಪಿಗಳನ್ನು ಒಳಗೊಂಡ ಎಂಟು ತಂಡಗಳು ವಾರ್‌ರೂಂಗಳಲ್ಲಿ ಪರಿಶೀಲನೆ ನಡೆಸಿವೆ. ಈ ವೇಳೆ ವಲಯವಾರು ಹಾಸಿಗೆ ಭರ್ತಿ, ಹಾಸಿಗೆ ಹಂಚಿಕೆ ಸೇರಿದಂತೆ ಹಲವು ಮಾಹಿತಿ ಹಾಗೂ ದಾಖಲೆಗಳನ್ನು ಅಧಿಕಾರಿಗಳು ಸಂಗ್ರಹಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.



ಬೊಮ್ಮಸಂದ್ರ ಕೈಗಾರಿಕಾ ಸಂಘದ ವತಿಯಿಂದ ಆನೇಕಲ್ ತಾಲ್ಲೂಕಿನ ಬಡ ಕೋವಿಡ್ ರೋಗಿಗಳಿಗೆ 2 ಸಾವಿರ ಕೋವಿಡ್ ಔಷಧ ಕಿಟ್ ವಿತರಣಾ ಕಾರ್ಯಕ್ರಮಕ್ಕೆ ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ಸಾಂಕೇತಿಕವಾಗಿ ಬುಧವಾರ ಚಾಲನೆ ನೀಡಿದರು. ಸಂಘದ ಅಧ್ಯಕ್ಷ ಎ.ಪ್ರಸಾದ್, ಜಿಲ್ಲಾಧಿಕಾರಿ ಜೆ.ಮಂಜುನಾಥ್, ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಜಿ.ಮರಿಸ್ವಾಮಿ, ಸಂಘದ ಶ್ರೀನಿವಾಸ್, ಎಫ್.ಆರ್.ಸಿಂಗ್ವಿ, ವಿಲ್ಸನ್ ಥಾಮಸ್ ಹಾಗೂ ಇತರರು ಇದ್ದರು.

ಪಿಎಸಿ ತನಿಖೆಗೆ ಡಿಕೆಶಿ ಒತ್ತಾಯ

ಬೆಂಗಳೂರು: 'ಕೋವಿಡ್ ಸೋಂಕಿತರಿಗೆ ಹಾಸಿಗೆ ಹಂಚಿಕೆಯಲ್ಲಿ ಬಿಬಿಎಂಪಿ ಎಸಗಿರುವ ಅಕ್ರಮದ ಬಗ್ಗೆ ತನಿಖೆ ನಡೆಸಿ ಸರ್ಕಾರ ಜನರಿಗೆ ಮಾಹಿತಿ ನೀಡಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದ್ದಾರೆ.

ಸಾರ್ವಜನಿಕ ಲೆಕ್ಕಪತ್ರ (ಪಿಎಸಿ) ಸಮಿತಿ ಅಧ್ಯಕ್ಷರಾದ ಶಾಸಕ ರಾಮ-ಲಿಂಗಾರೆಡ್ಡಿಗೆ ಪತ್ರ ಬರೆದಿರುವ ಅವರು, 'ಕೋವಿಡ್ ನಿರ್ವಹಣೆಯ ಎಲ್ಲ ವಿಚಾರಗಳಲ್ಲೂ ಸರ್ಕಾರದ ನಿರ್ಲಕ್ಷ್ಯ ಮತ್ತು ವ್ಯಾಪಕ ಭ್ರಷ್ಟಾಚಾರ ಕಂಡುಬರುತ್ತಿದೆ' ಎಂದಿದ್ದಾರೆ.

'ಮುಖ್ಯಮಂತ್ರಿ ಹಾಗೂ ಸಚಿವರು ತಮ್ಮದೇ ಆದ ಕಾರ್ಯಬಾಹುಳ್ಯದಲ್ಲಿ ಮಗ್ನರಾಗಿರುವ ಕಾರಣ ನೀವು, ಮತ್ತು ಸಮಿತಿಯ ಸದಸ್ಯರು, ಬೆಂಗಳೂರಿನ ಶಾಸಕರು ಮತ್ತು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದ ವೆಂಟಿಲೇಟರ್, ಆಮ್ಲಜನಕ ಸಿಲಿಂಡರ್, ಹಾಸಿಗೆ ಮತ್ತಿತರ ಖರೀದಿಗಳ ಲೆಕ್ಕಪತ್ರ ಪರಿಶೀಲಿಸಬೇಕು' ಎಂದಿದ್ದಾರೆ.

'ಸರ್ಕಾರ ಎಲ್ಲೆಲ್ಲಿ, ಏನೇನು ವ್ಯವಸ್ಥೆ ಮಾಡಿದೆ ಎಂಬುದನ್ನೂ ನೀವು ಪರಾಮರ್ಶೆ ಮಾಡಬೇಕು. ಆಡಳಿತ ಪಕ್ಷದ ಬೆಂಗಳೂರಿನ ಸಂಸದರು ಮತ್ತು ಶಾಸಕರು, ಸರ್ಕಾರದ ವೈಫಲ್ಯದತ್ತ ಗಮನ ಸೆಳೆದಿದ್ದಾರೆ. ನಾನು ಮತ್ತು ನಮ್ಮ ಪಕ್ಷದ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಚಾಮರಾ-ಜನಗರದ ಆಸ್ಪತ್ರೆಯ ದುಸ್ಥಿತಿ ಮತ್ತು ಜನರ ಯಾತನೆ ನೋಡಿದ್ದೇವೆ' ಎಂದೂ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ನೀವು ತಕ್ಷಣ ಸಮಿತಿಯೊಂದಿಗೆ ದುರಂತ ಸ್ಥಳಗಳು ಹಾಗೂ ಆಸ್ಪತ್ರೆಗ-ಳಿಗೆ ಭೇಟಿ ನೀಡಿ ಮತ್ತು ಅಧಿಕಾರಿಗಳ ಜೊತೆ ಚರ್ಚಿಸಿ ಮಧ್ಯಂತರ ವರದಿ ಸಿದ್ಧಪಡಿಸಿ ವಿಧಾನಸಭಾ ಸಭಾಧ್ಯಕ್ಷರು ಮತ್ತು ವಿಧಾನ ಪರಿಷತ್ ಸಭಾಪತಿ ಮೂಲಕ ಸರ್ಕಾರಕ್ಕೆ ವರದಿ ತಲುಪಿಸಬೇಕು' ಎಂದೂ ಮನವಿ ಮಾಡಿದ್ದಾರೆ.

'ಕೇಂದ್ರದಿಂದ ಆಮ್ಲಜನಕ ತನ್ನಿ'

ಬೆಂಗಳೂರು: 'ಸಮಯಕ್ಕೆ ವೈದ್ಯಕೀಯ ಆಮ್ಲಜನಕ ಸಿಗದೆಯೇ ಕೋವಿಡ್ ಪೀಡಿತರು ಕೊನೆಯುಸಿರೆಳೆಯುತ್ತಿದ್ದಾರೆ. ಸಂಸದ ತೇಜಸ್ವಿ ಸೂರ್ಯ ಅವರಿಗೆ ತಾಕತ್ ಇದ್ದರೆ ಕೇಂದ್ರದಿಂದ ಆಮ್ಲಜನಕವನ್ನು ತರಿಸಿ' ಎಂದು ಆಮ್ ಆದ್ಮಿ ಪಕ್ಷದ ಬೆಂಗಳೂರು ನಗರ ಉಪಾಧ್ಯಕ್ಷ ಬಿ.ಟಿ. ನಾಗಣ್ಣ ಆಗ್ರಹಿಸಿದ್ದಾರೆ. ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು,

ಕೋಮು ರಾಜಕಾರಣ ಸಲೀಂ ಅಹ್ಮದ್ ಟೀಕೆ

ಬೆಂಗಳೂರು: 'ಬಿಬಿಎಂಪಿಯಲ್ಲಿ ಹಾಸಿಗೆ ಕಾಯ್ದಿರಿಸಿದ ಹಗರಣ ಗಂಭೀರ ಸ್ವರೂಪದ್ದು. ಆದರೆ, ಈ ಪ್ರಕರಣದಲ್ಲಿ 17 ಜನ ಒಂದೇ ಕೋಮಿಗೆ ಸೇರಿದವರ ಮೇಲೆ ಆರೋಪ ಹೊರಿಸಿ, ಕೊರೊನಾ ಸಂದರ್ಭದಲ್ಲಿಯೂ ಧರ್ಮವನ್ನು ಎಳೆದು ತಂದಿರುವುದು ಖಂಡನೀಯ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಹೇಳಿದ್ದಾರೆ.

ಮುಖ್ಯಮಂತ್ರಿಗೆ ಪತ್ರ ಬರೆದಿರುವ ಅವರು, 'ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಮತ್ತು ಶಾಸಕರು ಈ ಹಗರಣ ವಿಚಾರವಾಗಿ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು, ಕೋವಿಡ್ ವಾರ್ ರೂಂ ಮುಖ್ಯಸ್ಥರನ್ನು ಅಮಾನತು ಮಾಡಬೇಕು' ಎಂದಿದ್ದಾರೆ.

'ಕೋವಿಡ್ ವಾರ್ ರೂಂನಲ್ಲಿ 205 ಜನ ಕೆಲಸ ಮಾಡುತ್ತಿದ್ದರೂ, ಒಂದೇ ಕೋಮಿನ 17 ಮಂದಿಯ ವಿರುದ್ಧ ಆರೋಪ ಮಾಡುವ ಮೂಲಕ ಕೋಮು ರಾಜಕಾರಣ ಮಾಡುತ್ತಿರುವವರಿಗೆ ಛೀಮಾರಿ ಹಾಕಿ' ಎಂದು ಆಗ್ರಹಿಸಿದ್ದಾರೆ.

12 ನಿರ್ದಿಷ್ಟ ಪ್ರಕರಣಗಳ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವಾರ್ ರೂಂಗಳ ಸಿಬ್ಬಂದಿ ಹಾಸಿಗೆ ಹಂಚಿಕೆ ವೇಳೆ ಅವ್ಯವಹಾರ ನಡೆಸಿದ್ದಾರೆ ಎಂಬ ಆರೋಪದ ಬಗ್ಗೆ ವಿಚಾರಣೆ ನಡೆಸಲು ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಸಮಿತಿ ನೇಮಿಸಿದ್ದು, ಈ ಸಮಿತಿ 12 ನಿರ್ದಿಷ್ಟ ದೂರುಗಳನ್ನು ಪರಿಶೀಲಿಸುತ್ತಿದೆ.

'ಸಮಿತಿಯು ಪ್ರತಿಯೊಂದು ಪ್ರ-ಕರಣಗಳನ್ನು ಆಳವಾಗಿ ಪರಿಶೀಲನೆ ನಡೆಸುತ್ತಿದೆ. ಈ ಕುರಿತು ಇನ್ನಷ್ಟು ವಿವರ ಸಂಗ್ರಹಿಸುತ್ತಿದೆ. ಶೀಘ್ರವೇ ವರದಿ ಸಲ್ಲಿಸಲಿದೆ' ಎಂದು ಗೌರವ್ ಗುಪ್ತ 'ಪ್ರಜಾವಾಣಿ'ಗೆ ತಿಳಿಸಿದರು.

ಬಿಬಿಎಂಪಿಯ ದಕ್ಷಿಣ ವಾರ್ ರೂಂನ ಸಿಬ್ಬಂದಿಯನ್ನು ವಜಾ ಮಾಡಿದ ಬಗ್ಗೆ ಸುದ್ದಿಗಾರರಿಗೆ ಬುಧವಾರ ಪ್ರ-ತಿಕ್ರಿಯಿಸಿದ ಮುಖ್ಯ ಆಯುಕ್ತರು, 'ಕೋವಿಡ್ ವಾರ್ ರೂಂ ಸಿಬ್ಬಂದಿ ಎಲ್ಲ ತಾತ್ಕಾಲಿಕ ನೆಲೆಯಲ್ಲಿ ಕಂಪನಿಗಳಿಂದ ನಿಯುಕ್ತರಾದವರು. ಅವರನ್ನು ನೇಮಿಸುವುದು ಹಾಗೂ ಕೆಲಸದಿಂದ ತೆಗೆಯುವ ಬಗ್ಗೆ ವಲಯ ಮಟ್ಟದ ಅಧಿಕಾರಿಗಳೇ ನಿರ್ಧಾರ ಕೈಗೊಳ್ಳುತ್ತಾರೆ. 17 ಮಂದಿಯನ್ನು ಕೆಲವು ದಿನಗಳ ಹಿಂದೆಯೇ ಕೆಲಸದಿಂದ ತೆಗೆಯಲಾಗಿದೆ. ಅವರ ವಿರುದ್ಧ ಆಪಾದನೆಗಳ ಬಗ್ಗೆ ವಲಯ ಆಯುಕ್ತರಾದ ತುಳಸಿ ಮದ್ದಿನೇನಿ ಪರಿಶೀಲನೆ ನಡೆಸುತ್ತಿದ್ದಾರೆ' ಎಂದರು.

ಹಾಸಿಗೆ ಬ್ಲಾಕ್ ಮಾಡಿಯೂ ರೋಗಿಗಳನ್ನು ದಾಖಲಿಸದ ಆರೋಪದ ಬಗ್ಗೆ ಪ್ರತಿಕ್ರಿಯಿ-ಸಿದ ಅವರು, 'ವಾರ್ ರೂಮ್‌ಗಳ ಮೂಲಕ ನಿತ್ಯವೂ 800ರಿಂದ 1000 ಹಾಸಿಗೆಗಳು ಹಂಚಿಕೆ ಆಗುತ್ತಿವೆ. ನಾವು ಹಂಚಿಕೆ ಮಾಡಿದ ನಂತರ ಕೆಲವು ರೋಗಿಗಳು ಆಸ್ಪತ್ರೆಗೆ ದಾಖಲಾಗದೇ, ಬೇರಾವುದೋ ಆಸ್ಪತ್ರೆಗೆ ದಾಖಲಾಗುತ್ತಾರೆ. ಆಗ ಅಂತಹ ಹಾಸಿಗೆಗಳನ್ನು ಅನ್ ಬ್ಲಾಕ್ ಮಾಡಬೇಕಾಗುತ್ತದೆ' ಎಂದರು.

ರಾಜ್ಯ ಕೋವಿಡ್ ಅಂಕಿ–ಅಂಶ

17,41,046 ▲	ಒಟ್ಟು ಸೋಂಕಿತರು (16,46,303 ನಿನ್ನೆಯ ವಿವರ)
4,87,288 ▲	ಸಕ್ರಿಯ ಪ್ರಕರಣಗಳು
12,36,854 ▲	ಗುಣಮುಖರಾದವರು
16,884 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	50,112	▲
ಗುಣಮುಖ	26,841	▲
ಸಾವು	346	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ನಗರದ ಕೋವಿಡ್ ಅಂಕಿ–ಅಂಶ

8,63,380 ▲	ಒಟ್ಟು ಪ್ರಕರಣಗಳು (8,40,274 ನಿನ್ನೆಯ ವಿವರ)
3,13,314 ▲	ಸಕ್ರಿಯ ಪ್ರಕರಣಗಳು
5,43,059 ▲	ಗುಣಮುಖರಾದವರು
7,006 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	23,106	▲
ಗುಣಮುಖ	11,343	▼
ಸಾವು	161	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಲೋಕಾಯುಕ್ತರಿಂದ ಪ್ರಕರಣ ದಾಖಲು

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಸೋಂಕಿತರ ಹೆಸರಿನಲ್ಲಿ ಆಸ್ಪತ್ರೆಗಳ ಹಾಸಿಗೆಗಳನ್ನು ಕಾಯ್ದಿರಿಸಿ, ಹಣಕ್ಕೆ ಮಾರಾಟ ಮಾಡಲಾಗುತ್ತಿದೆ ಎಂಬ ಆರೋಪದ ಕುರಿತು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿ-ರುವ ಲೋಕಾಯುಕ್ತ ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ, ಲೋಕಾಯುಕ್ತ ಪೊಲೀಸರಿಂದ ತನಿಖೆಗೆ ಆದೇಶಿಸಿದ್ದಾರೆ.

ಸಂಸದ ತೇಜಸ್ವಿ ಸೂರ್ಯ ಮತ್ತು ಶಾಸಕರು ಮಂಗಳವಾರ ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವರದಿಗಳನ್ನು ಆಧರಿಸಿ ಲೋಕಾಯುಕ್ತರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ. ರಾಜ್ಯ ಸರ್ಕಾರ ಇದೇ ಪ್ರಕರಣದ ಕುರಿತು ಸಿಸಿಬಿ ಪೊಲೀಸರಿಂದ ತನಿಖೆಗೆ ಆದೇಶಿಸಿದ್ದು, ಲೋಕಾಯುಕ್ತ ಪೊಲೀಸರೂ ಪ್ರತ್ಯೇಕವಾಗಿ ತನಿಖೆ ನಡೆಸಲಿದ್ದಾರೆ ಎಂದು ಲೋಕಾಯುಕ್ತರು ಆದೇಶದಲ್ಲಿ ತಿಳಿಸಿದ್ದಾರೆ.

ರಾಜ್ಯ ಸರ್ಕಾರ ಮುಖ್ಯ ಕಾರ್ಯದರ್ಶಿ, ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಆರೋಗ್ಯ ಇಲಾಖೆ ಆಯುಕ್ತರು, ಬಿಬಿಎಂಪಿ ಆಡಳಿತಾಧಿಕಾರಿ, ಮುಖ್ಯ ಆಯುಕ್ತರು, ವಲಯ ಆಯುಕ್ತರು, ವಿಶೇಷ ಆಯುಕ್ತರು, ಹೆಚ್ಚುವರಿ ಆಯುಕ್ತರು, ಜಂಟಿ ಆಯುಕ್ತರು ಮತ್ತು ಆರೋಗ್ಯಾಧಿಕಾರಿಗಳು ಸೇರಿದಂತೆ 31 ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

'ಬಿಬಿಎಂಪಿ ವ್ಯಾಪ್ತಿಯಲ್ಲಿನ ಆಸ್ಪತ್ರೆಗಳಲ್ಲಿ ಲಭ್ಯವಿದ್ದ ಹಾಸಿಗೆಗಳು, ಚಿಕಿತ್ಸೆಗೆ ಬಳಸಿದ ಹಾಸಿಗೆಗಳು, ಚಿಕಿತ್ಸೆ ಪಡೆದವರು ಸೇರಿದಂತೆ ಎಲ್ಲ ಮಾಹಿತಿಗಳನ್ನೂ ಪ್ರತಿವಾದಿ ಅಧಿಕಾರಿಗಳು ಮೂರು ವಾರಗಳೊಳಗೆ ಲೋಕಾಯುಕ್ತದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಿಗೆ ಸಲ್ಲಿಸಬೇಕು' ಎಂದು ಸೂಚಿಸಿ 31 ಅಧಿಕಾರಿಗಳಿಗೆ ಲೋಕಾಯುಕ್ತರು ನೋಟಿಸ್ ಜಾರಿ ಮಾಡಿದ್ದಾರೆ.

ಲೋಕಾಯುಕ್ತವು, ಬಿಬಿಎಂಪಿಯಲ್ಲಿ ನಡೆದಿರಬ-ಹುದಾದ ದುರಾಡಳಿತದ ಕುರಿತು ತನಿಖೆಗೆ ಆದೇಶಿಸಿದೆ. ಸಿಸಿಬಿ ಪೊಲೀಸರು ಮತ್ತು ಲೋಕಾಯುಕ್ತ ಪೊಲೀಸರು ಪ್ರಕರಣದ ತನಿಖೆಯಲ್ಲಿ ಪರಸ್ಪರ ಸಹಕಾರದಿಂದ ಮುಂದುವರಿಯಬೇಕು. ಲೋಕಾಯುಕ್ತದ ಎಡಿಜಿಪಿ ಮೂರು ವಾರಗಳಲ್ಲಿ ತನಿಖಾ ವರದಿಯನ್ನು ಸಲ್ಲಿಸಬೇಕು ಎಂದು ಲೋಕಾಯುಕ್ತರು ಬುಧವಾರ ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ಬೇಸರ ತೋಡಿಕೊಂಡ ಜಂಟಿ ಆಯುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ದಕ್ಷಿಣ ವಲಯದ ಕೋವಿಡ್ ವಾರ್ ರೂಮ್‌ಗೂ ತಮಗೂ ಸಂಬಂಧವೇ ಇಲ್ಲದಿದ್ದರೂ ಹಾಸಿಗೆ ಬ್ಲಾಕ್ ಮಾಡುವ ಪ್ರಕರಣದಲ್ಲಿ ತಮ್ಮ ಹೆಸರನ್ನು ಸೇರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿ-ಕೊಳ್ಳುತ್ತಿರುವ ಬಗ್ಗೆ ಜಂಟಿ ಆಯುಕ್ತ (ಕಸ ನಿರ್ವಹಣೆ) ಸರ್ಫರಾಜ್ ಖಾನ್ ಬೇಸರ ತೋಡಿಕೊಂಡಿದ್ದಾರೆ.

ಈ ಪ್ರಕರಣಕ್ಕೆ ಕೋಮು ಬಣ್ಣ ಹಚ್ಚಿರುವುದು ಮತ್ತು ಅದರಲ್ಲಿ ನನ್ನ ಹೆಸರು ಎಳೆದುತಂದಿರುವುದು ನೋವು ತಂದಿದೆ. ಕಷ್ಟದ ಸಮಯದಲ್ಲೂ ವಿಷವನ್ನು ಹರಡುತ್ತಿರುವ ಬಗ್ಗೆ ತನಿಖೆಯಾಗಬೇಕು. ಅಂತಹವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

'ವಾರ್ ರೂಮ್ ನಿರ್ವಹಣೆಯಲ್ಲಿ ನನ್ನ ಯಾವುದೇ ಪಾತ್ರವಿಲ್ಲ. ಅಲ್ಲಿ ಕಾರ್ಯನಿರ್ವಹಿಸುವ ಯಾವ ವೈದ್ಯರೂ ನನಗೆ ಗೊತ್ತಿಲ್ಲ. ನನ್ನ ಕೆಲಸವೇನಿದ್ದರೂ ಕೋವಿಡ್ ಆರೈಕೆ ಕೇಂದ್ರಗಳ ನಿರ್ವಹಣೆ ಮತ್ತು ಕಸ ವಿಲೇವಾರಿ. ವಾರ್ ರೂಂಗಳ ವೈದ್ಯರನ್ನು, ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವುದು ಆರೋಗ್ಯ ವಿಭಾಗ ಮತ್ತು ಬಿಬಿಎಂಪಿಯ ಆಯಾ ವಲಯದ ಕೆಲಸ' ಎಂದು ಸ್ಪಷ್ಟಪಡಿಸಿದ್ದಾರೆ.

'ಕಷ್ಟದಲ್ಲಿರುವವರೆಲ್ಲ ನನ್ನ ಸೋದರ– ಸೋದರಿಯರು ಎಂದೇ ಭಾವಿಸುತ್ತೇನೆ. ಕಳೆದ ವರ್ಷ ಲಾಕ್‌ಡೌನ್ ಸಂದರ್ಭದಲ್ಲಿ ಬಡವರಿಗೆ ಅವರ ಧರ್ಮ ಯಾವುದು, ಯಾವ ಪ್ರದೇಶದವರು ಎಂದು ನೋಡದೇ ಆಹಾರದ ಕಿಟ್ ಒದಗಿಸಲು ಶ್ರಮಿಸಿದ್ದೆ. ಅವರು ಊರುಗಳಿಗೆ ತಲುಪುವಂತೆ ರೈಲು ವ್ಯವಸ್ಥೆ ಮಾಡಲು ನೆರವಾಗಿದ್ದೆ. ಈ ವೇಳೆ ನನ್ನಿಂದಾಗಿ ನನ್ನ ಕುಟುಂಬದವರಿಗೆಲ್ಲ ಕೋವಿಡ್ ತಗುಲಿತ್ತು. ನಾನೂ ನಿಮ್ಮಲ್ಲಿ ಒಬ್ಬನಾಗಿರುವುದಕ್ಕೆ ಇಷ್ಟು ಸಾಕ್ಷಿ ಸಾಲದೇ' ಎಂದು ಅವರು ಪ್ರಶ್ನಿಸಿದ್ದಾರೆ.

ಸಾಂತ್ವನ ಹೇಳಿದ ತೇಜಸ್ವಿಸೂರ್ಯ

ಸರ್ಫರಾಜ್ ಖಾನ್ ಅವರಿಗೆ ಬುಧವಾರ ಕರೆ ಮಾಡಿರುವ ತೇಜಸ್ವಿ ಸೂರ್ಯ, 'ನಾನು ಸುದ್ದಿಗೋಷ್ಠಿಯಲ್ಲಿ ಎಲ್ಲೂ ನಿಮ್ಮ ಹೆಸರನ್ನು ಉಲ್ಲೇಖಿಸಿಲ್ಲ. ನೀವೂ ಅದೇ (ಮುಸ್ಲಿಂ) ಸಮುದಾಯಕ್ಕೆ ಸೇರಿರುವುದರಿಂದ ಕೆಲವರು ನಿಮ್ಮನ್ನು ಗುರಿಯಾಗಿಸಿ ಸಂದೇಶ ಹರಡುತ್ತಿದ್ದಾರೆ. ನಿಮ್ಮ ಬಗ್ಗೆ ಬಹಳ ಗೌರವ ಇದೆ. ಉತ್ತಮ ಅಭಿಪ್ರಾಯವೂ ಇದೆ' ಎಂದು ಸಾಂತ್ವನ ಹೇಳಿದ್ದಾರೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಸರ್ಫರಾಜ್ ಖಾನ್, 'ಇಡೀ ಘಟನೆಯಿಂದ ನನಗೆ ಆಗಿರುವ ನೋವನ್ನು ಫೇಸ್‌ಬುಕ್‌ನಲ್ಲಿ ತೋಡಿಕೊಂಡಿದ್ದೆ. ಬಳಿಕ ಸಂಸದ ತೇಜಸ್ವಿ ಸೂರ್ಯ ಅವರು ಕರೆ ಮಾಡಿ ಸಾಂತ್ವನ ಹೇಳಿದ್ದು ನಿಜ' ಎಂದರು.

ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	15.56 ಕೋಟಿ ▲	2.10 ಕೋಟಿ ▲
ಸಕ್ರಿಯ ಪ್ರಕರಣ	1.93 ಕೋಟಿ ▲	35.62 ಲಕ್ಷ ▲
ಗುಣಮುಖ	13.29 ಕೋಟಿ ▲	1.72 ಕೋಟಿ ▲
ಸಾವು	32.49 ಲಕ್ಷ ▲	2.30 ಲಕ್ಷ ▲

ದಿನದ ಏರಿಕೆ

	ವಿಶ್ವ	ಭಾರತ
ಹೊಸ ಪ್ರಕರಣ	7.84 ಲಕ್ಷ ▲	4,06,383 ▲
ಗುಣಮುಖ	8.72 ಲಕ್ಷ ▲	3,24,645 ▲
ಸಾವು	13,659 ▲	3,838 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಬ್ರೆಜಿಲ್	ಅಮೆರಿಕ	ಟರ್ಕಿ
69,378 ▲	42,354 ▲	28,997 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರೆಜಿಲ್	ಫ್ರಾನ್ಸ್
67.15 ▼	10.05 ▼	8.57 ▼

(*ರಾತ್ರಿ 12 ಗಂಟೆವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

ಮಹಾರಾಷ್ಟ್ರ	72,662 ▲
ತಮಿಳುನಾಡು	14,779 ▲
ದೆಹಲಿ	18,063 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	48.80 ▲
ಕೇರಳ	17.43 ▲
ಉತ್ತರ ಪ್ರದೇಶ	13.99 ▲

ಪ್ರಜಾವಾಣಿ ಗ್ರಾಫಿಕ್ಸ್


ಪರಿಸ್ಥಿತಿ ಗಂಭೀರವಾಗಿದೆ ಆಮ್ಲಜನಕ ಕೊಡಿಸಿ

ಬಾಗಲಕೋಟೆ:'ಜಿಲ್ಲೆಯಲ್ಲಿ ಕೋವಿಡ್ ರೋಗಿಗಳಿಗೆ ನಿತ್ಯ ಸರಾಸರಿ 18 ಕಿಲೋ ಲೀಟರ್ ಆಮ್ಲಜನಕದ ಬೇಡಿಕೆ ಇದೆ. ಆದರೆ 8 ಕಿಲೋ ಲೀಟರ್ ಮಾತ್ರ ಪೂರೈಕೆ ಆಗುತ್ತಿದೆ. ಪರಿಸ್ಥಿತಿ ಗಂಭೀರವಾಗಿದೆ. ಕೈ ಮೀರುವ ಮುನ್ನ ಆಮ್ಲಜನಕ ಪೂರೈಕೆಗೆ ವ್ಯವಸ್ಥೆ ಮಾಡಿ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಉಮೇಶ ಕತ್ತಿ ಎದುರು ಡಿಎಚ್‌ಒ ಡಾ.ಅನಂತ ದೇಸಾಯಿ ಅಲವತ್ತುಕೊಂಡರು. ಜಿಲ್ಲೆಯ ಉಸ್ತುವಾರಿ ವಹಿಸಿಕೊಂಡ ನಂತರ ಬುಧವಾರ ಸಚಿವ ಉಮೇಶ ಕತ್ತಿ ಮೊದಲ ಬಾರಿಗೆ ಬಾಗಲಕೋಟೆಗೆ ಭೇಟಿ ನೀಡಿದರು.

ಚಾಮರಾಜನಗರ ಘಟನೆ ಮರೆಮಾಚಲು ಯತ್ನ ಆರೋಪ: ಬಿಜೆಪಿ ನಾಯಕರ ವಿರುದ್ಧ ಆಕ್ರೋಶ

ಬೆಡ್ ಬ್ಲಾಕಿಂಗ್ ದಂಧೆ ನಾಟಕ: ಆರೋಪ

ಪ್ರಜಾವಾಣಿ ವಾರ್ತೆ



ಮಂಡ್ಯ: 'ಚಾಮರಾಜನಗರದ ಘಟನೆಯನ್ನು ಮರೆಮಾಚಲು ಬಿಜೆಪಿ ನಾಯಕರು ಬೆಡ್ ಬ್ಲಾಕಿಂಗ್ ದಂಧೆಯ ನಾಟಕವಾಡುತ್ತಿದ್ದು, ವಾಸ್ತವಾಂಶ ಮುಚ್ಚಿಟ್ಟು ಒಂದು ಸಮುದಾಯದವರ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಬುಧವಾರ ಆಕ್ರೋಶ ವ್ಯಕ್ತಪಡಿಸಿದರು.

'ಬೆಂಗಳೂರಿನ ಸಂಸದ, ಶಾಸಕರು ಒಂದು ಕೋವಿಡ್ ವಾರ್ ರೂಂಗೆ ತೆರಳಿ ಬೆಡ್ ದಂಧೆ ಬಯಲಿಗೆಳೆದಿರುವುದಾಗಿ ಹೇಳಿಕೊಂಡಿದ್ದಾರೆ. ಅಮಾಯಕ ಜನರು ಸಾಯುತ್ತಿರುವಾಗ ಸಮುದಾಯವೊಂದಕ್ಕೆ ಸೇರಿದವರ ಹೆಸರು ಓದಿ ಮದರಸಾ ಮಾಡಲು ಹೊರಟಿದ್ದೀರಾ ಎಂದು ಪ್ರಶ್ನಿಸಿದ್ದಾರೆ. ಜನರಿಗೆ ಸತ್ಯ ಹೇಳುವುದನ್ನು ಬಿಟ್ಟು ಜಾತಿ ರಾಜಕಾರಣ ಮಾಡುತ್ತಿದ್ದಾರೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

'ಚಾಮರಾಜನಗರ ಘಟನೆಯಲ್ಲಿ ಸರ್ಕಾರದ ತಪ್ಪಿದೆ. ತಪ್ಪು ಮುಚ್ಚಿಕೊಳ್ಳಲು ಜನರ ದಿಕ್ಕು ತಪ್ಪಿಸುತ್ತಿದ್ದಾರೆ. 4 ಸಾವಿರ ಹಾಸಿಗೆಯನ್ನು ಅಕ್ರಮವಾಗಿ ಕಾಯ್ದಿರಿಸಲಾಗಿದೆ ಎಂದು ಹೇಳಿ ಜನರಲ್ಲಿ ಭಯ ಸೃಷ್ಟಿಸುತ್ತಿದ್ದಾರೆ. ಬೆಂಗಳೂರಿನಲ್ಲಿ ಇಂದಿಗೂ ಹಾಸಿಗೆ ಸಮಸ್ಯೆ ಇದೆ. ಹಾಗಾದರೆ ನೀವು ದಾಳಿ ಮಾಡಿ ಸಾಧಿಸಿದ್ದೇನು' ಎಂದು ಪ್ರಶ್ನಿಸಿದರು.

'ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿದೆ. ಆದರೆ, ತನಿಖೆಯ ಬಗ್ಗೆ ಯಾರಿಗೂ ನಂಬಿಕೆ ಇಲ್ಲ. ಡ್ರಗ್ಸ್ ಪ್ರಕರಣದ ತನಿಖೆ ಏನಾಯಿತು? ಒಂದಿಬ್ಬರು ಹೆಣ್ಣುಮಕ್ಕಳನ್ನು ಬಂಧಿಸಿದ್ದು ಬಿಟ್ಟರೆ ಇನ್ಯಾವ ಸಾಧನೆಯನ್ನೂ ಮಾಡಲಿಲ್ಲ. ಸಿ.ಡಿ ಪ್ರಕರಣವೂ ಮುಚ್ಚಿ ಹೋಯಿತು. ಈ ಪ್ರಕರಣವನ್ನೂ ಸಿಸಿಬಿಗೆ ಕೊಟ್ಟು ವಾರ್ ರೂಂ ಮೇಲೆ ದಾಳಿ ಮಾಡಿದರೆ ಮುಂದೆ ಕೆಲಸ ಮಾಡುವವರು ಯಾರು, ಹಾಸಿಗೆ ಹಂಚಿಕೆ ಮಾಡುವವರು ಯಾರು' ಎಂದರು.

ಕಾಂಗ್ರೆಸ್ ನಾಯಕರ ವಿರುದ್ಧ ಹರಿಹಾಯ್ದ ಅವರು, 10 ಕೆ.ಜಿ ಅಕ್ಕಿ ಕೊಡುವುದೇ ಮುಖ್ಯವಲ್ಲ. ಜನರ ಜೀವ ಉಳಿಸುವುದು ಮುಖ್ಯ. 70 ವರ್ಷದ ಆಡಳಿತದಲ್ಲಿ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 30 ಹಾಸಿಗೆಗಳ ಆಸ್ಪತ್ರೆ ಕಟ್ಟಿಸಿದ್ದರೆ ಈ ಸ್ಥಿತಿ ಬರುತ್ತಿತ್ತಾ? ಸುಟ್ಟ ಮನೆಯಲ್ಲಿ ಗಳ ಹಿರಿಯುವ ಕೆಲಸ ಮಾಡಬೇಡಿ ಎಂದು ಹರಿಹಾಯ್ದರು.

ಸುಧಾಕರನ ವಸ್ತ್ರಾಪಹರಣ: ವಿಶ್ವನಾಥ್ ಲೇವಡಿ

ಮೈಸೂರು: 'ದ್ರೌಪದಿಯ ವಸ್ತ್ರಾಪಹರಣದಂತೆ ಆರೋಗ್ಯ ಸಚಿವ ಸುಧಾಕರನ ವಸ್ತ್ರಾಪಹರಣವಾಗಿದೆ. ಇದೀಗ ಆತನ ಬಳಿ ಏನೂ ಉಳಿದಿಲ್ಲ' ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಬುಧವಾರ ಇಲ್ಲಿ ಲೇವಡಿ ಮಾಡಿದರು.

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ರಾಜ್ಯದ ಕೋವಿಡ್ ಕಾರ್ಯಪಡೆಯನ್ನು ಪುನರ್ ರಚಿಸಿರುವುದಕ್ಕೆ ಪ್ರತಿಕ್ರಿಯಿಸಿ, 'ಕೋವಿಡ್ ನಿಯಂತ್ರಣಕ್ಕೆ ಸುಧಾಕರ್ ಶ್ರಮಿಸುತ್ತಿದ್ದ, ಆತನಲ್ಲಿದ್ದ ಎಲ್ಲ ಅಧಿಕಾರವನ್ನು ಕಿತ್ತುಕೊಳ್ಳಲಾಗಿದೆ' ಎಂದರು. 'ನಿಮಗೆ ಕಣ್ಣು ಕಾಣಲ್ಲ, ಕಿವಿಯೂ ಕೇಳಿಸಲ್ಲ, ಮನಸ್ಸಿನಲ್ಲಿಯೂ ಸ್ಪಂದಿಸಲ್ಲ. ನಿಮ್ಮನ್ನು ಕಟ್ಟಿಕೊಂಡು ಸಾವೇನು ಮಾಡೋಣ. ಕೋವಿಡ್ ನಿರ್ವಹಣೆಯಲ್ಲಿ ಸಂಪೂರ್ಣ ವಿಫಲರಾಗಿದ್ದೀರಿ' ಎಂದು ಯಡಿಯೂರಪ್ಪ ವಿರುದ್ಧ ವಾಗ್ದಾಳಿ ನಡೆಸಿದರು.

ಹಾಸಿಗೆ ದಂಧೆ: ಮುಸ್ಲಿಂ ಸಂಘಟನೆಯ ಕೈವಾಡದ ಶಂಕೆ

ಶಿವಮೊಗ್ಗ: ಬೆಂಗಳೂರಿನಲ್ಲಿ ಹಣ ಕೊಟ್ಟರೆ ಹಾಸಿಗೆ ಕಾಯ್ದಿರಿಸುವ ದಂಧೆಯ ಹಿಂದೆ ಮುಸ್ಲಿಂ ಸಂಘಟನೆಯ ಕೈವಾಡ ಇರುವ ಶಂಕೆ ವ್ಯಕ್ತವಾಗಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದರು.

ನಗರದಲ್ಲಿ ಬುಧವಾರ ಅವರು ಸುದ್ದಿಗಾರರ ಜತೆ ಮಾತನಾಡಿದರು. ಸಂಸದ ತೇಜಸ್ವಿ ಸೂರ್ಯ, ಶಾಸಕ ಸತೀಶ್ ರೆಡ್ಡಿ, ರವಿ ಸುಬ್ರಹ್ಮಣ್ಯ ಅವರು ಹಗರಣ ಬಯಲಿಗೆ ಎಳೆದಿದ್ದಾರೆ. ರಾಜ್ಯದಲ್ಲಿ ಕೊರೊನಾ ಪರಿಸ್ಥಿತಿಯನ್ನು ಸರ್ಕಾರ ಸೂಕ್ತವಾಗಿ ನಿಭಾಯಿಸುತ್ತಿದೆ. ಆಮ್ಲಜನಕ ಪೂರೈಕೆ, ಲಸಿಕೆ ನೀಡುವಿಕೆಯಲ್ಲಿ ಸಮರ್ಪಕವಾಗಿ ಕೆಲಸ ಮಾಡುತ್ತಿದೆ. ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಇಂತಹ ಸಂಚು ಮಾಡಲಾಗುತ್ತಿದೆ. ಇಂತಹ ಕೃತ್ಯಗಳ ಹಿಂದೆ ಯಾರೇ ಇದ್ದರೂ ತನಿಖೆ ನಡೆಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

40 ಟನ್ ಆಮ್ಲಜನಕ ತಂದ 'ತಲ್ವಾರ್'

ಮಂಗಳೂರು: ಬಹರೇನ್‌ನಿಂದ 40 ಟನ್ ದ್ರವೀಕೃತ ಆಮ್ಲಜನಕ ಹೊತ್ತ ಭಾರತೀಯ ನೌಕಾಪಡೆಯ ಹಡಗು ಐಎನ್‌ಎಸ್ ತಲ್ವಾರ್ ಬುಧವಾರ ಮಧ್ಯಾಹ್ನ ಇಲ್ಲಿನ ನವಮಂಗಳೂರು ಬಂದರು ತಲುಪಿದೆ.

ಬಹರೇನ್‌ನ ಮನಾಮಾದಿಂದ ತಲಾ 20 ಟನ್ ಸಾಮರ್ಥ್ಯದ ಎರಡು ಕ್ರಯೋಜೆನಿಕ್ ಐಸೋಕಂಟೈನರ್‌ಗಳಲ್ಲಿ 40 ಟನ್ ಆಮ್ಲಜನಕ ಹಾಗೂ ವೈದ್ಯಕೀಯ ಉಪಕರಣಗಳನ್ನು ಹೊತ್ತು ತಂದಿದೆ.

ಬಹರೇನ್ ಸರ್ಕಾರ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆಗೆ ಉಚಿತವಾಗಿ ಈ ಆಮ್ಲಜನಕ ಪೂರೈಸಿದ್ದು, ರೆಡ್‌ಕ್ರಾಸ್ ಸಂಸ್ಥೆ ದಕ್ಷಿಣ ಕನ್ನಡ ಘಟಕದ ಗೌರವ ಕಾರ್ಯದರ್ಶಿ ಪ್ರಭಾಕರ್ ಶರ್ಮ ಸ್ವೀಕರಿಸಿದ್ದಾರೆ ಎಂದು ಎನ್‌ಎಂಪಿಟಿ ಅಧಿಕಾರಿಗಳು ತಿಳಿಸಿದ್ದಾರೆ.

ಕೋವಿಡ್-19 ಸಂದರ್ಭದಲ್ಲಿ ಭಾರತೀಯ ನೌಕಾಪಡೆಯು ಸಮುದ್ರ ಸೇತು-2 ಕಾರ್ಯಾಚರಣೆ ಆರಂಭಿಸಿದ್ದು, ವಿದೇಶಗಳಿಂದ ಹಡಗಿನ ಮೂಲಕ ಆಮ್ಲಜನಕ, ವೈದ್ಯಕೀಯ ಉಪಕರಣಗಳನ್ನು ತರಲಾಗುತ್ತಿದೆ. ಈಗಾಗಲೇ ಹಲವಾರು ಹಡಗುಗಳು ವಿದೇಶಗಳಿಂದ ಆಮ್ಲಜನಕವನ್ನು ಹೊತ್ತು ತರುತ್ತಿವೆ.

ಸರ್ಕಾರದ ನಿರ್ಧಾರಕ್ಕೆ ಹೈಕೋರ್ಟ್ ಬೇಸರ

ಒಂದನೇ ಪುಟದಿಂದ...

ಸಮಿತಿಯು ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಪರಿಶೀಲಿಸಿ, ಮುಂದಿನ ಸೋಮವಾರದ ಒಳಗೆ ವರದಿ ನೀಡುವಂತೆ ಸೂಚಿಸಿತು. ನ್ಯಾ. ಎ.ಎನ್. ವೇಣುಗೋಪಾಲ ಗೌಡ ಸಮಿತಿಯ ಅಧ್ಯಕ್ಷರಾಗಿದ್ದು, ನ್ಯಾ. ಕೆ.ಎನ್. ಕೇಶವನಾರಾಯಣ ಅವರು ಸದಸ್ಯರಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ಪೀಠ ತಿಳಿಸಿದೆ.

'ಚಾಮರಾಜನಗರ ಜಿಲ್ಲಾ ಕೋವಿಡ್ ಆಸ್ಪತ್ರೆಯ ಪ್ರಕರಣ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಲು ಯೋಗ್ಯವಾಗಿದೆ. ಈ ಕುರಿತು ಸರ್ಕಾರದ ನಿಲುವು ಏನು ಎಂಬುದನ್ನು ಬುಧವಾರವೇ ತಿಳಿಸಿ' ಎಂದು ನ್ಯಾಯಪೀಠ ಮಂಗಳವಾರ ಆದೇಶಿಸಿತ್ತು. 'ವಿಚಾರಣೆ ವೇಳೆ ನಡೆದ ಬೆಳವಣಿಗೆಗಳನ್ನು ಆಧರಿಸಿ ಮಂಗಳವಾರ ಸಂಜೆಯೇ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಬಿ. ಪಾಟೀಲ ನೇತೃತ್ವದಲ್ಲಿ ತನಿಖೆ ನಡೆಸಲು ನಿರ್ಧಾರ ಕೈಗೊಳ್ಳಲಾಗಿದೆ' ಎಂದು ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ ನ್ಯಾಯಪೀಠಕ್ಕೆ ತಿಳಿಸಿದರು.

'ನ್ಯಾಯಪೀಠ ಸಲಹೆ ನೀಡಿದ ಬಳಿಕ ಪಾರದರ್ಶಕತೆಯ ಕಾರಣದಿಂದ ತೀರ್ಮಾನ ತೆಗೆದುಕೊಳ್ಳುವುದನ್ನೂ ಸರ್ಕಾರ ನ್ಯಾಯಾಲಯಕ್ಕೆ ಬಿಡಬೇಕಿತ್ತು' ಎಂದು ನ್ಯಾಯಪೀಠ ಆಕ್ಷೇಪಿಸಿತು. ಚಾಮರಾಜನಗರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ವರದಿ ಸಲ್ಲಿಸಿರುವುದನ್ನು ವಿಚಾರಣೆ ವೇಳೆ ಪ್ರಸ್ತಾಪಿಸಿದ ಪೀಠ, ಚಾಮರಾಜನಗರ ಜಿಲ್ಲೆಗೆ ಆಮ್ಲಜನಕ ಪೂರೈಕೆಗೆ ಸಂಬಂಧಿಸಿದಂತೆ ಚಾಮರಾಜನಗರ ಹಾಗೂ ಮೈಸೂರು ಜಿಲ್ಲಾಧಿಕಾರಿಗಳ ಬಳಿ ಇರುವ ಎಲ್ಲ ದಾಖಲೆಗಳನ್ನು ತಕ್ಷಣ ವಶಕ್ಕೆ ಪಡೆಯುವಂತೆ ಮುಖ್ಯ ಕಾರ್ಯದರ್ಶಿಗೆ ಆದೇಶಿಸಿತು.

'ಘಟನೆಗೆ ಸಂಬಂಧಿಸಿದಂತೆ ಸತ್ಯವನ್ನು ತಿಳಿಯುವ ಉದ್ದೇಶದಿಂದ ಈ ಸಮಿತಿ ನೇಮಿಸಲಾಗಿದೆ. ರಾಜ್ಯ ಸರ್ಕಾರದ ಎಲ್ಲ ಅಧಿಕಾರಿಗಳು ಸಮಿತಿಗೆ ಸಂಪೂರ್ಣ ಸಹಕಾರ ನೀಡುತ್ತಾರೆ ಎಂದು ಭಾವಿಸಿದ್ದೇವೆ. ಮುಂದೆ ಇಂತಹ ದುರ್ಘಟನೆಗಳು ನಡೆಯದಂತೆ ತಡೆಯಲು ಸಮಿತಿಯ ವರದಿಯು ರಾಜ್ಯಕ್ಕೆ ಉಪಯುಕ್ತವಾಗಲಿದೆ' ಎಂದು ಪೀಠ ಹೇಳಿದೆ.

ಜಿಲ್ಲಾಡಳಿತದ ಆರೋಪ ತಳ್ಳಿಹಾಕಿದ ರೋಹಿಣಿ

'ನೋವಾಗಿದೆ: ಸರ್ಕಾರಕ್ಕೆ ವರದಿ ಸಲ್ಲಿಕೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ಪ್ರತಿ ಜೀವವೂ ಅಮೂಲ್ಯ. ಸಾವಿನಿಂದ ನಮಗೂ ನೋವಾಗಿದೆ. ಚಾಮರಾಜನಗರದಲ್ಲಿ ಆಮ್ಲಜನಕದ ಕೊರತೆಯಿದೆ ಎಂಬುದು ಗೊತ್ತಾಗುತ್ತಿದ್ದಂತೆ, ಮೈಸೂರಿನ ಜಿಲ್ಲಾ ಆಸ್ಪತ್ರೆಯಿಂದ 40 ಸಿಲಿಂಡರ್ ಕಳುಹಿಸಿಕೊಟ್ಟಿದ್ದೇವೆ' ಎಂದು ಮೈಸೂರು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಬುಧವಾರ ಇಲ್ಲಿ ತಿಳಿಸಿದರು.

'ನಮ್ಮಲ್ಲಿ ನಾಲ್ಕು ನಿಮಿಷ ಆಮ್ಲಜನಕ ಪೂರೈಕೆಯಲ್ಲಿ ವಿಳಂಬವಾದರೆ 400 ರೋಗಿಗಳು ಸಂಕಷ್ಟಕ್ಕೆ ಸಿಲುಕುತ್ತಾರೆ. ಈ ನಡುವೆಯೂ ಕೋರಿಕೆ ಬಂದೊಡನೆ ಒಟ್ಟು 250 ಸಿಲಿಂಡರ್ ಕಳುಹಿಸಿಕೊಡಲಾಗಿದೆ. ಆಸ್ಪತ್ರೆಯಿಂದ ಯಾರೂ ಕಳುಹಿಸಿಕೊಡಲ್ಲ. ಇದಕ್ಕೆ ದಾಖಲೆಗಳು ಇವೆ. ಇನ್ನೆಷ್ಟು ಸ್ಪಂದಿಸಬೇಕು?' ಎಂದು ಮಾಧ್ಯಮದವರ ಬಳಿ ಗದ್ಗದಿತರಾಗಿ ಪ್ರತಿಕ್ರಿಯಿಸಿದರು.

'ಊಹಾಪೋಹಕ್ಕೆ ಪ್ರತಿಕ್ರಿಯಿಸಬಾರದು ಎಂದು ಇದುವರೆಗೂ ಸುಮ್ಮನಿದ್ದೆ. ತಮ್ಮ ವೈಫಲ್ಯ ಮುಚ್ಚಿಕೊಳ್ಳಲಿಕ್ಕಾಗಿಯೇ, ಚಾಮರಾಜನಗರ ಜಿಲ್ಲಾಧಿಕಾರಿ ಪತ್ರಿಕಾಗೋಷ್ಠಿ ನಡೆಸಿ ಮೈಸೂರು ಜಿಲ್ಲಾಡಳಿತದ ವಿರುದ್ಧ ಆರೋಪಿಸಿದ್ದಾರೆ. ಜನರಿಗೆ ತಪ್ಪು ಮಾಹಿತಿ ಹೋಗಬಾರದು ಎಂಬ ಕಾರಣಕ್ಕೆ ಇದೀಗ ಮಾತನಾಡುತ್ತಿರುವೆ' ಎಂದು ಜಿಲ್ಲಾಧಿಕಾರಿ ಭಾವುಕರಾದರು.



'ಮೈಸೂರಿಗೆ ಆಮ್ಲಜನಕದ ಕೊರತೆಯಿದೆ ಎಂದು ಹತ್ತು ದಿನಗಳ ಹಿಂದೆಯೇ ಸರ್ಕಾರಕ್ಕೆ ಪತ್ರ ಬರೆದಿರುವೆ. ನಮ್ಮಲ್ಲಿ ಎಲ್ಲಿಯೂ ಆಮ್ಲಜನಕದ ಉತ್ಪಾದನೆಯಾಗಲ್ಲ. ಬಳ್ಳಾರಿಯಿಂದಲೇ ಬರಬೇಕು. ವೈದ್ಯಕೀಯ ಉದ್ದೇಶಕ್ಕೆ ಬಿಟ್ಟು ಬೇರೆ ಉದ್ದೇಶಕ್ಕೆ ನೀಡಬಾರದು ಎಂಬ ಸೂಚನೆ ನೀಡಿದ್ದೆ. ಆಮ್ಲಜನಕ ವಿತರಿಸುವ ಅಧಿಕಾರ ನನಗಿಲ್ಲ. ಆಯಾ ಜಿಲ್ಲಾಡಳಿತ ಹಾಗೂ ರೀಫಿಲ್ಲಿಂಗ್ ಘಟಕಗಳ ನಡುವಿನ ಒಪ್ಪಂದದಂತೆಯೇ ಸರಬರಾಜಾಗಲಿದೆ. ಇದರಲ್ಲಿ ನನ್ನ ಪಾತ್ರ ಏನೂ ಇಲ್ಲ' ಎಂದು ಸ್ಪಷ್ಟಪಡಿಸಿದರು.

'ಸಕಾಲಕ್ಕೆ ನಾವು ಆಮ್ಲಜನಕವನ್ನು ತರಿಸಿಕೊಳ್ಳಬೇಕು. ಉತ್ಪಾದಕರೊಂದಿಗೆ ನಿರಂತರ ಸಂಪರ್ಕದಲ್ಲಿರಬೇಕು. ನಾವು ಸಮನ್ವಯ ಸಾಧಿಸದೆ, ಬಳ್ಳಾರಿ ಜಿಲ್ಲಾಡಳಿತವನ್ನು ದೂಷಿಸುವುದು ನ್ಯಾಯವೇ? ನಮ್ಮಲ್ಲಿ ಕೊರತೆ ಎದುರಾಗುತ್ತಿದ್ದಂತೆ ಸಂಬಂಧಪಟ್ಟವರ ಜೊತೆ ಮಾತನಾಡಿ, ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತಿದ್ದೇವೆ. ಚಾಮರಾಜನಗರ ಜಿಲ್ಲಾಡಳಿತದ ವೈಫಲ್ಯದಿಂದ ಸಾವಿನ ಘಟನೆ ನಡೆದಿದೆ. ಇದಕ್ಕೆ ನಮ್ಮ ವಿರುದ್ಧ ಆರೋಪ ಮಾಡಿರುವುದು ತುಂಬಾ ನೋವಾಗಿದೆ' ಎಂದು ಹೇಳಿದರು.

'ತನಿಖೆ ನಡೆದಿದೆ. ಎಲ್ಲಿ ಲೋಪವಾಗಿದೆ ಎಂಬುದು ಗೊತ್ತಾಗಲಿದೆ. ಚಾಮರಾಜನಗರ ಜಿಲ್ಲಾಡಳಿತ ತಮ್ಮ ಜವಾಬ್ದಾರಿ ನಿಭಾಯಿಸದೆ, ಮಾಧ್ಯಮಗಳಿಗೆ ತಪ್ಪು ಮಾಹಿತಿ ನೀಡಿದೆ. ನನ್ನ ಸೇವಾವಧಿಯಲ್ಲಿ ಇಂತಹ ಆರೋಪ ಕೇಳಿಲ್ಲ. ಸರ್ಕಾರಕ್ಕೆ ವರದಿ ಸಲ್ಲಿಸುವೆ' ಎಂದು ತಿಳಿಸಿದರು.

ನಿಧನ ವಾರ್ತೆ

ಕವಿ ಜರಗನಹಳ್ಳಿ ಶಿವಶಂಕರ್



ಬೆಂಗಳೂರು: ಕವಿ ಜರಗನಹಳ್ಳಿ ಶಿವಶಂಕರ್ (72) ಅವರು ಬುಧವಾರ ಬೆಳಿಗ್ಗೆ 6.30ಕ್ಕೆ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ನಾಲ್ಕು ದಿನಗಳ ಹಿಂದೆ ಕೋವಿಡ್ ಪೀಡಿತರಾಗಿದ್ದ ಅವರು, ಬನ್ನೇರುಘಟ್ಟದಲ್ಲಿರುವ ಖಾಸಗಿ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. ಆದರೆ, ಚಿಕಿತ್ಸೆ ಫಲಿಸದೆಯೇ ಕೊನೆಯುಸಿರೆಳೆದರು. ಪತ್ನಿ ಹಾಗೂ ಪುತ್ರಿಯನ್ನು ಅವರು ಅಗಲಿದ್ದಾರೆ. ಅವರ ಪತ್ನಿ ಕೂಡ ಕೊರೊನಾ ಸೋಂಕಿತರಾಗಿದ್ದು, ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಅವರ ಪಾರ್ಥಿವ ಶರೀರವನ್ನು ಜರಗನಹಳ್ಳಿಗೆ ಕೊಂಡೊಯ್ದು, ಅಲ್ಲಿನ ತೋಟದಲ್ಲಿ ಮಧ್ಯಾಹ್ನ 3 ಗಂಟೆಗೆ ಅಂತ್ಯಸಂಸ್ಕಾರ ನೆರವೇರಿಸಲಾಯಿತು.

ಎಸ್. ಜಯಕುಮಾರ



ಬೆಂಗಳೂರು: ಸಾರ್ವಜನಿಕ ಶಿಕ್ಷಣ ಇಲಾಖೆಯ ನಿವೃತ್ತ ನಿರ್ದೇಶಕ ಎಸ್. ಜಯಕುಮಾರ (63) ಕೋವಿಡ್‌ನಿಂದ ಬುಧವಾರ ನಿಧನರಾದರು.

ಇಲಾಖೆಯ ಪ್ರಾಥಮಿಕ ಶಿಕ್ಷಣ ವಿಭಾಗದ ನಿರ್ದೇಶಕರಾಗಿ, ಇಂಗ್ಲಿಷ್ ಭಾಷೆಯ ಪ್ರಾದೇಶಿಕ ಕೇಂದ್ರದ ನಿರ್ದೇಶಕರಾಗಿ, ಧಾರವಾಡದ ಆಯುಕ್ತರ ಕಚೇರಿ ಹೆಚ್ಚುವರಿ ಆಯುಕ್ತರಾಗಿಯೂ ಕೆಲಸ ಮಾಡಿದ್ದರು. ಔದ್ಯೋಗಿಕ ಶಿಕ್ಷಣ ಕೇಂದ್ರ, ಪದವಿಪೂರ್ವ ಶಿಕ್ಷಣ ಮಂಡಳಿ, ಅಕ್ಷರ ದಾಸೋಹ ಯೋಜನೆಯ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದರು.

ತುಮಕೂರಿನವರಾದ ಅವರು ಬೆಳಗಾವಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಇಲಾಖೆಯ ಉಪನಿರ್ದೇಶಕರಾಗಿ, ಮಂಗಳೂರು, ಶೃಂಗೇರಿ, ಚನ್ನರಾಯಪಟ್ಟಣಗಳಲ್ಲಿ ಇಲಾಖೆಯ ವಿವಿಧ ಹುದ್ದೆಗಳನ್ನು ನಿಭಾಯಿಸಿದ್ದರು. ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.

ಡಿ.ಜಿ. ಸುನಂದಾ




ಹರಿಹರ: ಕನ್ನಡ ಚಿತ್ರರಂಗದ ಖ್ಯಾತ ನಟ, ದಿವಂಗತ ಧೀರೇಂದ್ರ ಗೋಪಾಲ್ ಅವರ ಪತ್ನಿ ಡಿ.ಜಿ. ಸುನಂದಾ (68) ಹೃದಯಾಘಾತದಿಂದ ಬುಧವಾರ ಇಲ್ಲಿನ ಜೆ.ಸಿ.ಬಡಾವಣೆಯ ತಮ್ಮ ನಿವಾಸದಲ್ಲಿ ನಿಧನರಾದರು. ಅವರಿಗೆ ಪುತ್ರಿ ಹಾಗೂ ಇಬ್ಬರು ಪುತ್ರರಿದ್ದಾರೆ. ನಗರದ ದಾಲ್ಮೀಯಾ ಘಾಟ್‌ನಲ್ಲಿ ಅಂತ್ಯಸಂಸ್ಕಾರ ನೆರವೇರಿತು.


ಕೋವಿಡ್: ಪಾಲಕರನ್ನು ಕಳೆದುಕೊಂಡ ಮಕ್ಕಳ ಪಾಲನೆ

ಭಾಲ್ಕಿ (ಬೀದರ್ ಜಿಲ್ಲೆ): 'ರಾಜ್ಯದ ಯಾವುದೇ ಜಿಲ್ಲೆಯಲ್ಲಿ ಕೋವಿಡ್‌ನಿಂದ ತಂದೆ-ತಾಯಿ ಕಳೆದುಕೊಂಡ ಮಕ್ಕಳನ್ನು ನೋಡಿಕೊಳ್ಳುವ ಸಂಪೂರ್ಣ ಜವಾಬ್ದಾರಿಯನ್ನು ನಮ್ಮ ಮಠ ತೆಗೆದುಕೊಳ್ಳಲಿದೆ' ಎಂದು ಇಲ್ಲಿಯ ಹಿರೇಮಠ ಸಂಸ್ಥಾನದ ಹಿರಿಯ ಸ್ವಾಮೀಜಿ ಡಾ.ಬಸವಲಿಂಗ ಪಟ್ಟದ್ದೇವರು ತಿಳಿಸಿದ್ದಾರೆ.

'ಮಕ್ಕಳ ಪಾಲನೆ, ಪೋಷಣೆ ಜತೆಗೆ ಅವರಿಷ್ಟದವರೆಗೆ ಶಿಕ್ಷಣ ಕೊಡಿಸಲಾಗುವುದು' ಎಂದಿದ್ದಾರೆ.

'ಈ ಬಗ್ಗೆ ಸಾರ್ವಜನಿಕರು ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು (ಮೊ.94489 47571), ಆಡಳಿತಾಧಿಕಾರಿ ಮೋಹನ್ ರೆಡ್ಡಿ (ಮೊ. 94489 47570) ಅವರಿಗೆ ಕರೆ ಮಾಡಿ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನೀವು ಓದಿರುವುದನ್ನು ಒರೆಗೆ ಹಚ್ಚಲು ಸ್ವಮೌಲ್ಯಮಾಪನ ಅಗತ್ಯ. ಇದರಿಂದ ನಿಮ್ಮ ಸಾಮರ್ಥ್ಯ ಮತ್ತು ಕೌಶಲಗಳನ್ನು ಹೆಚ್ಚಿಸಲು ಅನುಕೂಲವಾಗುತ್ತದೆ.

ಪರೀಕ್ಷಾ ಯಶಸ್ಸಿಗೆ ಸ್ವಮೌಲ್ಯಮಾಪನ

ಆರ್.ಬಿ. ಗುರುಬಸವರಾಜ

ಯಾವುದೇ ಓದು ಇರಲಿ, ಕಲಿಕೆಯಿರಲಿ, ಅದು ಪರಿಣಾಮಕಾರಿಯಾದಾಗ ಮಾತ್ರ ನಿರೀಕ್ಷಿತ ಫಲ ದೊರಕುತ್ತದೆ. ಈ ಓದಿನ ಫಲಶೃತಿಯನ್ನು ಅರಿಯಲು ಹಲವಾರು ವಿಧಾನಗಳಿವೆ. ಫಲಶೃತಿ ಅರಿಯುವ ಒಂದು ವಿಧಾನವೆಂದರೆ ಅದು ಮೌಲ್ಯಮಾಪನ. ಈ ಮೌಲ್ಯಮಾಪನವನ್ನು ಕಲಿಕಾರ್ಥಿಗಳು, ಸ್ಪರ್ಧಾತ್ಮಕ ಪರೀಕ್ಷೆಯಾದರೆ ಸ್ಪರ್ಧಾರ್ಥಿಗಳು ಮಾಡಿಕೊಳ್ಳುವ ವಿಧಾನವೂ ಜನಪ್ರಿಯ. ಅದೇ ಸ್ವಮೌಲ್ಯಮಾಪನ.

ಸಾಮಾನ್ಯವಾಗಿ ಮೌಲ್ಯಮಾಪನ ಎಂಬ ಪದವನ್ನು ಪರೀಕ್ಷೆ ಎಂಬ ಪದಕ್ಕೆ ಸಂವಾದಿಯಾಗಿ ಬಳಸುತ್ತಾರೆ. ಆದರೆ ಪರೀಕ್ಷೆಯು ಸೀಮಿತ ವ್ಯಾಪ್ತಿ ಹೊಂದಿದ್ದರೆ ಮೌಲ್ಯಮಾಪನವು ವಿಶಾಲವಾದ ವ್ಯಾಪ್ತಿ ಹೊಂದಿದೆ. ಸ್ಪರ್ಧಾರ್ಥಿಗಳ ಕ್ರಿಯಾತ್ಮಕ, ಭಾವನಾತ್ಮಕ ಹಾಗೂ ಜ್ಞಾನಾತ್ಮಕ ವಲಯಗಳನ್ನು ತಿಳಿಯುವುದೇ ಮೌಲ್ಯಮಾಪನದ ವ್ಯಾಪಕ ಅರ್ಥವಾಗಿದೆ.

ಸ್ವಮೌಲ್ಯಮಾಪನವು ಸ್ಪರ್ಧಾರ್ಥಿಗಳ ದೌರ್ಬಲ್ಯ ಮತ್ತು ಸಾಮರ್ಥ್ಯವನ್ನು ನಿರ್ಣಯಿಸುವ ಪ್ರಮುಖ ಅಂಶವಾಗಿದೆ. ಇದು ಅವರ ಕಲಿಕಾ ವಿಧಾನ ಹಾಗೂ ವೇಗಕ್ಕೆ ಅನುಗುಣವಾಗಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಇಲ್ಲಿ ಸ್ಪರ್ಧಾರ್ಥಿ ಮತ್ತು ಮೌಲ್ಯಮಾಪಕ ಇಬ್ಬರೂ ಒಬ್ಬರೇ ಆಗಿರುವುದರಿಂದ ಓದು ಹೆಚ್ಚು ಸಬಲಗೊಳ್ಳಲು ಅವಕಾಶ ದೊರೆಯುತ್ತದೆ.

ಸ್ವಮೌಲ್ಯಮಾಪನದ ಪ್ರಯೋಜನಗಳು

- ಅರಿವಿನ ಕೌಶಲಗಳನ್ನು ಹೆಚ್ಚಿಸುವ ಮೂಲಕ ಸಾಮರ್ಥ್ಯದ ಬೆಳವಣಿಗೆಗೆ ಸಹಾಯ ಮಾಡುತ್ತದೆ.
- ಅಭ್ಯಾಸದ ಪ್ರತಿಫಲನದ ಮಟ್ಟವನ್ನು ತಿಳಿಸುತ್ತದೆ ಮತ್ತು ಹೊಸ ಜ್ಞಾನಕ್ಕೆ ದಾರಿ ತೋರುತ್ತದೆ.
- ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿ, ಅಭ್ಯಾಸದ ಕಾರ್ಯಕ್ಷಮತೆಯನ್ನು ಸುಧಾರಿಸುತ್ತದೆ.
- ವಿಮರ್ಶಾತ್ಮಕ ಓದಿನ ಕೌಶಲವನ್ನು ವೃದ್ಧಿಸುತ್ತದೆ.
- ರಚನಾತ್ಮಕ ಕಲಿಕಾ ಅನುಭವಗಳನ್ನು ನೀಡುತ್ತದೆ.
- ಓದಿನ ಶೈಲಿಯ ಮೇಲೆ ಹಿಡಿತ ಸಾಧಿಸಲು ನೆರವಾಗುತ್ತದೆ.
- ಸ್ವತಂತ್ರ ಅಧ್ಯಯನಕ್ಕೆ ಮಾರ್ಗದರ್ಶಿಯಾಗಿದ್ದು, ಕಲಿಕೆಯನ್ನು ಉತ್ಕೃಷ್ಟಗೊಳಿಸುತ್ತದೆ.
- ಕಲಿಕಾ ಮಾಧ್ಯಮಗಳ ಆಯ್ಕೆಯಲ್ಲಿನ ಗೊಂದಲಗಳನ್ನು ನಿವಾರಿಸುತ್ತದೆ.
- ನಿಜವಾದ ಗ್ರಹಿಕೆಯ ಒಳನೋಟವನ್ನು ನೀಡುತ್ತದೆ ಮತ್ತು ಪರಸ್ಪರ ಜ್ಞಾನದಲ್ಲಿನ ಅಂತರ ಗುರುತಿಸಲು ಸಹಾಯ ಮಾಡುತ್ತದೆ.
- ಇದು ಸ್ಪರ್ಧಾರ್ಥಿಗಳ ಎಚ್ಚರಿಕೆ ಗಂಟೆಯಾಗಿದೆ. ಸುಧಾರಣೆ ಅಗತ್ಯವಿರುವ ಕ್ಷೇತ್ರಗಳ ಬಗ್ಗೆ ನಿಖರ ಮಾಹಿತಿ ನೀಡುತ್ತದೆ.
- ಸ್ಪರ್ಧಾರ್ಥಿ ಕೇಂದ್ರಿತ ಕಲಿಕೆಯನ್ನು ಉತ್ತೇಜಿಸುವ ಮೂಲಕ ಅವರ ಗುರಿಗಳನ್ನು ವೈಜ್ಞಾನಿಕ ರೀತಿಯಲ್ಲಿ ವಿಶ್ಲೇಷಿಸಲು ನೆರವಾಗುತ್ತದೆ.
- ನ್ಯಾಯಸಮ್ಮತವಾದ ಸ್ವಯಂ ತೀರ್ಮಾನ ಕೌಶಲವನ್ನು ಬೆಳೆಸುತ್ತದೆ.

ಸ್ವಮೌಲ್ಯಮಾಪನ ಹೇಗೆ?

ಸ್ವಮೌಲ್ಯಮಾಪನ ನಿಜಕ್ಕೂ ಅದ್ಭುತವಾದ ಮಾನದಂಡ. ಇದನ್ನು ಅಳವಡಿಸಿಕೊಳ್ಳುವುದು ಒಂದಿಷ್ಟು ಸಂಕೀರ್ಣ ಕಾರ್ಯ. ಆದರೂ ಕೆಲವು ತಂತ್ರಗಾರಿಕೆಯ ಮೂಲಕ ಇದನ್ನು ಅಳವಡಿಸಿಕೊಳ್ಳಬಹುದು.

ಪರಿಕಲ್ಪನೆ/ಸಾಮರ್ಥ್ಯ ಆಯ್ಕೆ: ಸ್ವಮೌಲ್ಯಮಾಪನಕ್ಕೆ ತೊಡಗುವ ಮೊದಲು ಮೌಲ್ಯಮಾಪನಕ್ಕೆ ಒಳಪಡುವ ಪರಿಕಲ್ಪನೆ/ ಸಾಮರ್ಥ್ಯವನ್ನು ನಿರ್ಧರಿಸಿಕೊಳ್ಳಬೇಕು. ನಂತರ ನಿಮ್ಮ ಮೌಲ್ಯಮಾಪನದ ಮಾಧ್ಯಮ ಆಯ್ಕೆ ಮಾಡಿಕೊಳ್ಳಿ. ಅದು ಡಿಜಿಟಲ್ ಅಥವಾ ಮ್ಯಾನುವಲ್ ಮಾಧ್ಯಮವಾಗಿರಬಹುದು.

ಕಠಿಣತೆಯ ಮಟ್ಟವನ್ನು ನಿರ್ಧರಿಸಿ: ನಿಮ್ಮ ಮೌಲ್ಯಮಾಪನದಲ್ಲಿನ ಪ್ರಶ್ನೆಗಳ ಕಠಿಣತೆಯ ಮಟ್ಟವನ್ನು ನಿರ್ಧರಿಸಿ. ಇದು ನಿಮ್ಮ ಓದಿನ ವೇಗ ಮತ್ತು ಕಲಿಕೆಯ ಆಯಾಮಗಳನ್ನು ಆಧರಿಸಿರಲಿ. ನಿಮ್ಮ ಓದಿನ ಮಟ್ಟ ಉನ್ನತವಾಗಿದ್ದರೆ ಮೌಲ್ಯಮಾಪನ ಕಠಿಣತೆಯಿಂದ ಕೂಡಿರಲಿ. ಪ್ರಶ್ನೆಗಳ ಕಠಿಣತೆಯ ಮಟ್ಟ ಆರೋಹಣ ಕ್ರಮದಲ್ಲಿರಲಿ.

ಮಾನದಂಡಗಳು ನಿರ್ದಿಷ್ಟವಾಗಿರಲಿ: ನಿಮ್ಮ ಮೌಲ್ಯಮಾಪನ ಮಾಡಿಕೊಳ್ಳುವ ಸಾಮರ್ಥ್ಯಕ್ಕೆ ಅನುಗುಣವಾಗಿ ಮಾನದಂಡಗಳನ್ನು ನೀವೇ ರೂಪಿಸಿಕೊಳ್ಳಿ. ಪ್ರತಿಯೊಂದು ಸಾಮರ್ಥ್ಯಕ್ಕೂ ಕನಿಷ್ಠ ಐದು ಡೊಮೇನ್‌ಗಳನ್ನು ನಿರ್ಧರಿಸಿಕೊಳ್ಳಿ.

ಪ್ರಶ್ನಾವಳಿ: ನೀವು ಮೌಲ್ಯಮಾಪನಕ್ಕೆ ಒಳಪಡಿಸಿಕೊಳ್ಳುವ ಸಾಮರ್ಥ್ಯ/ ಪರಿಕಲ್ಪನೆ ಆಧರಿಸಿ ಪ್ರಶ್ನಾವಳಿಗಳನ್ನು ರೂಪಿಸಿಕೊಳ್ಳಿ. ಎಲ್ಲಾ ಆಯಾಮಗಳಿಂದಲೂ ಪ್ರಶ್ನೆಗಳು ರೂಪಿತವಾಗಿರಲಿ.

ಸಮಯದ ನಿರ್ಧಾರ ಇರಲಿ

ನೀವು ಮೌಲ್ಯಮಾಪನಕ್ಕೆ ಒಳಪಡಿಸಿಕೊಳ್ಳುವ ಸಾಮರ್ಥ್ಯದ ಆಧಾರದ ಮೇಲೆ ಸಮಯ ನಿರ್ಧರಿಸಿ. ಮೌಲ್ಯಮಾಪನದ ಪ್ರತಿಯೊಂದು ಹಂತಕ್ಕೂ ಸಮಯ ಮೀಸಲಿರಲಿ.

ಪ್ರಾಮಾಣಿಕವಾಗಿ ಉತ್ತರಿಸಿ: ನೆನಪಿಡಿ. ಸ್ವಮೌಲ್ಯಮಾಪನ ಇರುವುದು ನಿಮ್ಮನ್ನು ನೀವು ಉತ್ತಮಪಡಿಸಿಕೊಳ್ಳಲು. ಪ್ರಶ್ನೆಗಳಿಗೆ ಉತ್ತರಿಸುವಾಗ ಪ್ರಾಮಾಣಿಕವಾಗಿರಿ. ಯಾವುದೇ ಪೂರ್ವಗ್ರಹಗಳಿಗೆ ಒಳಗಾಗದೇ ನಿರ್ದಿಷ್ಟವಾಗಿ ಉತ್ತರಿಸಿ. ನಿಮ್ಮ ಸಾಧನೆಯ ಅಳತೆ ಯಾವುದೇ ಪ್ರಚಾರಕ್ಕೆ ಅಥವಾ ಉತ್ಪ್ರೇಕ್ಷೆ ಮಾಡಲು ಅಲ್ಲ ಎಂಬುದು ನೆನಪಿರಲಿ. ನಿಗದಿತ ಸಮಯದಲ್ಲಿ ಪ್ರಾಮಾಣಿಕವಾಗಿ ಉತ್ತರಿಸಿ.

ಎದುರಿಸಿದ ನಿದರ್ಶನಗಳನ್ನು ಉಲ್ಲೇಖಿಸಿ: ಸ್ವಮೌಲ್ಯಮಾಪನದ ವೇಳೆ ನೀವು ಎದುರಿಸಿದ ಸಮಸ್ಯೆಗಳು ಹಾಗೂ ತೊಂದರೆಗಳ ಬಗ್ಗೆ ನಿದರ್ಶನಗಳೊಂದಿಗೆ ಉಲ್ಲೇಖ ಮಾಡಿಕೊಳ್ಳಿ. ಇದು ನಿಮ್ಮ ದೌರ್ಬಲ್ಯಗಳನ್ನು ತೊಡೆದು ಹಾಕಲು ಮತ್ತು ಹೊಸ ಅವಕಾಶಗಳನ್ನು ಗುರುತಿಸಲು ಸಹಾಯ ಮಾಡುತ್ತದೆ.

ವಿಶ್ಲೇಷಣೆ ಸಮರ್ಪಕವಾಗಿರಲಿ: ಮೌಲ್ಯಮಾಪನದ ನಂತರ ಫಲಿತಾಂಶ ವಿಶ್ಲೇಷಣೆಯು ನಿಖರವಾಗಿರಲಿ ಮತ್ತು ಸ್ಪಷ್ಟವಾಗಿರಲಿ. ನಿಮ್ಮ ಕಲಿಕೆಯ ಮಟ್ಟ ಯಾವ ಹಂತದಲ್ಲಿದೆ ಎಂಬುದನ್ನು ಮತ್ತು ಅದಕ್ಕೆ ಬೇಕಾದ ಸಹಾಯದ ಬಗ್ಗೆ ತಿಳಿಯಲು ವಿಶ್ಲೇಷಣೆ ತುಂಬಾ ಅಗತ್ಯ.

ನ್ಯೂನ್ಯತೆಗಳನ್ನು ಸರಿಪಡಿಸಿ: ಸ್ವಮೌಲ್ಯಮಾಪನದ ವೇಳೆ ನಿಮ್ಮ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಿ. ಅಂದರೆ ನಿಮ್ಮ ಗುರಿ ತಲುಪಲು ಇರುವ ಅಡೆತಡೆಗಳನ್ನು ನಿವಾರಿಸಿಕೊಳ್ಳಿ.

ಪ್ರಶ್ನೋತ್ತರ ಸಾಮಾನ್ಯ ಅಧ್ಯಯನ

ಇತಿಹಾಸ

(ಮುಂದುವರಿದ ಭಾಗ)

23) ಕೆಳಗಿನ ಯಾರ ಕಾಲದಲ್ಲಿ ಕವಿ ಪೊನ್ನನಿಗೆ ಆಶ್ರಯ ನೀಡಲಾಗಿತ್ತು?

ಎ) 1ನೇ ಕೃಷ್ಣ ಬಿ) 3ನೇ ಕೃಷ್ಣ
ಸಿ) 3ನೇ ಗೋವಿಂದ ಡಿ) ಧ್ರುವ

ಉತ್ತರ : (ಬಿ)

ವಿವರಣೆ: 3ನೇ ಕೃಷ್ಣನ ಕಾಲದಲ್ಲಿ ರಾಷ್ಟ್ರಕೂಟರ ಸಾಮ್ರಾಜ್ಯವು ಮತ್ತೊಮ್ಮೆ ಭಾರತದ ರಾಜಕೀಯದಲ್ಲಿ ಅಗ್ರಸ್ಥಾನ ಪಡೆಯಿತು. ಕವಿ ಪೊನ್ನನು 3ನೇ ಕೃಷ್ಣನ ಆಶ್ರಯ ಪಡೆದಿದ್ದನು.

24) 'ವಿಷ್ಣುಗೋಪ' ಎಂದು ಈ ಕೆಳಗಿನ ಯಾರನ್ನು ಕರೆಯಲಾಗುತ್ತಿತ್ತು?

ಎ) ಕೌಟಿಲ್ಯ ಬಿ) ವಿಶಾಖದತ್ತ
ಸಿ) ಬ್ರಹ್ಮಗುಪ್ತ ಡಿ) ವಾಗ್ಭಟ

ಉತ್ತರ : (ಎ)

ವಿವರಣೆ: ಕೌಟಿಲ್ಯನು ಮೌರ್ಯ ದೊರೆ ಚಂದ್ರಗುಪ್ತನ ಆಸ್ಥಾನದಲ್ಲಿ ಪ್ರಧಾನಮಂತ್ರಿಯಾಗಿದ್ದನು. ತಕ್ಷಶಿಲಾ ವಿಶ್ವವಿದ್ಯಾಲಯದಲ್ಲಿ ಪಾಂಡಿತ್ಯ ಪಡೆದ ಈತನ ಕೃತಿಯಾದ 'ಅರ್ಥಶಾಸ್ತ್ರ'ವು ಸಂಸ್ಕೃತ ಸಾಹಿತ್ಯದಲ್ಲೇ ಅದ್ವಿತೀಯವಾದುದು. ಕೌಟಿಲ್ಯನಿಗೆ ವಿಷ್ಣುಗೋಪ ಹಾಗೂ ಚಾಣಕ್ಯ ಎಂಬ ಇತರ ಹೆಸರುಗಳೂ ಇದ್ದವು.

25) ಭಾರತದ 'ಶಾಸನಗಳ ಪಿತಾಮಹ'ನೆಂದು ಕೆಳಗಿನ ಯಾರನ್ನು ಕರೆಯುತ್ತಾರೆ?

ಎ) ಅಶೋಕ ಬಿ) ಚಂದ್ರಗುಪ್ತ ಮೌರ್ಯ
ಸಿ) ಬಿಂದುಸಾರ ಡಿ) ಧನನಂದ

ಉತ್ತರ : (ಎ)

ವಿವರಣೆ: ಅಶೋಕನ ಶಾಸನಗಳು ಮೌರ್ಯರ ಬಗ್ಗೆ ಪ್ರಮುಖ ಮಾಹಿತಿ ನೀಡುತ್ತವೆ. ಭಾರತದಲ್ಲಿ ಶಾಸನಗಳನ್ನು ಹೊರಡಿಸಿದ ಮೊದಲ ದೊರೆ ಅಶೋಕ. ಅಶೋಕನನ್ನು ಭಾರತದ 'ಶಾಸನಗಳ ಪಿತಾಮಹ'ನೆಂದು ಕರೆಯುತ್ತಾರೆ.

26) ಈ ಕೆಳಗಿನ ಯಾವ ಕವಿಯನ್ನು 'ಭಾರತದ ಕಾರ್ನೆಲ್' ಎಂದು ಕರೆಯಲಾಗಿದೆ?

ಎ) ಶೂದ್ರಕ ಬಿ) ವಿಶಾಖದತ್ತ
ಸಿ) ಹರಿಸೇನ ಡಿ) ಅಮರಸಿಂಹ

ಉತ್ತರ : (ಬಿ)

ವಿವರಣೆ: ವಿಶಾಖದತ್ತನು ಗುಪ್ತಯುಗದ ಶ್ರೇಷ್ಠ ಕವಿ ಮತ್ತು ನಾಟಕಕಾರ. ಇವನ ರಾಜಕೀಯ ನಾಟಕವಾದ 'ಮುದ್ರಾರಾಕ್ಷಸ' ಚಂದ್ರಗುಪ್ತ ಮೌರ್ಯ ಮತ್ತು ಚಾಣಕ್ಯರಿಂದ ನಂದ ವಂಶ ಪತನವಾದ ಬಗ್ಗೆ ಮತ್ತು ಮೌರ್ಯ ಸಾಮ್ರಾಜ್ಯದ ಸ್ಥಾಪನೆಯ ಬಗ್ಗೆ ವಿವರಿಸುತ್ತದೆ. ವಿಶಾಖದತ್ತನನ್ನು 'ಭಾರತದ ಕಾರ್ನೆಲ್' ಎಂದು ಕರೆಯಲಾಗಿದೆ.

27) ಶಿವಪ್ಪನಾಯಕನು ಅಳವಡಿಸಿದ ಕಂದಾಯ ವ್ಯವಸ್ಥೆಯನ್ನು ________ ಎಂದು ಕರೆಯಲಾಗಿದೆ.

ಎ) ಮಾಂಡಳಿಕ ಬಿ) ಕರಣಿಕ
ಸಿ) ಸಿಸ್ತು ಡಿ) ಮನ್ಸ್ಬ

ಉತ್ತರ : (ಸಿ)

ವಿವರಣೆ: ಇದು ಒಂದು ಕ್ರಮಬದ್ಧ ಕಂದಾಯ ಪದ್ಧತಿಯಾಗಿದ್ದು, 'ಶಿವಪ್ಪ ನಾಯಕನ ಸಿಸ್ತು' ಎನ್ನುವರು. ಸಿಸ್ತು ಕಂದಾಯ ಪದ್ಧತಿ ಮಲೆನಾಡಿನ ಸಮೃದ್ಧಿಗೆ ಕಾರಣವಾಯಿತು.

28) 3ನೇ ಸಂಗಂ ಸಾಹಿತ್ಯ ಕೂಟ ಕೆಳಗಿನ ಯಾವ ಪ್ರದೇಶದಲ್ಲಿ ನಡೆದಿತ್ತು?

ಎ) ಪಾಟಲಿಪುತ್ರ ಬಿ) ಮಧುರೈ
ಸಿ) ಚೆನ್ನೈ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ : (ಬಿ)

ವಿವರಣೆ: 3ನೇ ಸಂಗಂ ಸಾಹಿತ್ಯ ಕೂಟವು ಮಧುರೈನಲ್ಲಿ ನಡೆದಿತ್ತು. ಈ ಕೂಟದ ಅಧ್ಯಕ್ಷ ನಕ್ಕಿರಾರ್ ಆಗಿರುತ್ತಾನೆ.

29) ಚೋಳರ 'ರಾಜ ಚಿಹ್ನೆ' ಯಾವುದು?

ಎ) ಹುಲಿ ಬಿ) ಸಿಂಹ
ಸಿ) ಆನೆ ಡಿ) ಬಾಣ

ಉತ್ತರ : (ಎ)



ವಿವರಣೆ: ಚೋಳರ ರಾಜ ಚಿಹ್ನೆ: ಹುಲಿ; ಇದರ ರಾಜಧಾನಿಗಳು: ಉರೈಯರ್ ಮತ್ತು ಕಾವೇರಿ ಪಟ್ಟಂ, ಚೋಳರ ಮೊದನೇ ರಾಜ: ವಿಜಯಾಲಯ ಚೋಳ

30) "ನವಕೋಟಿ ನಾರಾಯಣ" ಎಂಬ ಬಿರುದನ್ನು ಪಡೆದ ಒಡೆಯರ್ ಯಾರು?

ಎ) ನಾಲ್ವಡಿ ಕೃಷ್ಣರಾಜ ಒಡೆಯರ್ ಬಿ) ಮುಮ್ಮಡಿ ಕೃಷ್ಣರಾಜ ಒಡೆಯರ್
ಸಿ) ಕೃಷ್ಣರಾಜ ಒಡೆಯರ್ ಡಿ) ಚಿಕ್ಕ ದೇವರಾಜ ಒಡೆಯರ್

ಉತ್ತರ : (ಡಿ)

ವಿವರಣೆ: ಚಿಕ್ಕ ದೇವರಾಜ ಒಡೆಯರ್‌ರವರು ಶ್ರೀರಂಗಪಟ್ಟಣದ ಬಳಿ ಪಶ್ಚಿಮದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸಿ ಕೃಷಿಗೆ ನೀರು ಒದಗಿಸಿದರು. ಆಡಳಿತದಲ್ಲೂ ಮಿತವ್ಯಯ ಸಾಧಿಸಿ, ಭಾರಿ ನಿಧಿಯನ್ನು ಕೂಡಿಟ್ಟು 'ನವಕೋಟಿ ನಾರಾಯಣ' ಎಂಬ ಬಿರುದನ್ನು ಪಡೆದನು.

(ಪ್ರಶ್ನೋತ್ತರ ಸಂಯೋಜನೆ: www.iasjnana.com ಸಂಪರ್ಕಕ್ಕೆ: 9916399276)

ಪ್ರಜಾವಾಣಿ ಉದ್ಯೋಗ ವಾರ್ತೆ

ಕರ್ನಾಟಕ ಹೈಕೋರ್ಟ್‌ನಲ್ಲಿ 19 ಹುದ್ದೆಗಳು

ಕರ್ನಾಟಕ ಹೈಕೋರ್ಟ್‌ನಲ್ಲಿ ಕಾನೂನು ಗುಮಾಸ್ತ ಹಾಗೂ ಸಂಶೋಧಕ ಸಹಾಯಕ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

- ಹುದ್ದೆಗಳು: ಕಾನೂನು ಗುಮಾಸ್ತ ಹಾಗೂ ಸಂಶೋಧನಾ ಸಹಾಯಕ
- ವಿದ್ಯಾರ್ಹತೆ: ಮಾನ್ಯತೆ ಪಡೆದ ವಿದ್ಯಾಸಂಸ್ಥೆಯಿಂದ ಶೇ 50 ಅಂಕಗಳೊಂದಿಗೆ ಕಾನೂನು ಪದವಿ ಪಡೆದಿರಬೇಕು.
- ವಯೋಮಿತಿ: ಗರಿಷ್ಠ 30 ವರ್ಷ.
- ನೇಮಕಾತಿ ಪ್ರತಿಕ್ರಿಯೆ: ಅಭ್ಯರ್ಥಿಗಳನ್ನು ಶೈಕ್ಷಣಿಕ ಅರ್ಹತೆ, ಬೋಧಕೇತರ ವಿಷಯಗಳಲ್ಲಿನ ಜ್ಞಾನದ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ. ವೈಯಕ್ತಿಕ ಸಂದರ್ಶನವಿರುತ್ತದೆ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮೇ 29, 2021

ಹೆಚ್ಚಿನ ಮಾಹಿತಿಗೆ: https://karnatakajudiciary.kar.nic.in/

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಬಹುಪದೋಕ್ತಿಗಳಿಗೆ ಭಾಗಾಕಾರ ಕ್ರಮವಿಧಿ

ಗಣಿತ

ಎಸ್ಸೆಸ್ಸೆಲ್ಸಿ

ಈಗ ಒಂದು ಬಹುಪದೋಕ್ತಿಯನ್ನು ಮತ್ತೊಂದು ಬಹುಪದೋಕ್ತಿ ಕ್ರಿಯೆಯಿಂದ ಭಾಗಿಸುವ ವಿಧಾನವನ್ನು ವಿವರವಾಗಿ ಚರ್ಚಿಸೋಣ. ಸ್ಪಷ್ಟವಾಗಿ ಇದರ ಹಂತಗಳನ್ನು ಗುರುತಿಸುವ ಮೊದಲು ಒಂದು ಉದಾಹರಣೆಯನ್ನು ಪರಿಗಣಿಸೋಣ.

ಭಾಜ್ಯ = ಭಾಜಕ * ಭಾಗಲಬ್ಧ + ಶೇಷ ಆಗಿರುವುದನ್ನು ನಾವು ಕಾಣುತ್ತೇವೆ.

ಅಧ್ಯಾಯ 3 ರಲ್ಲಿ ಅಭ್ಯಸಿಸಿದ ಯೂಕ್ಲಿಡ್‌ನ ಭಾಗಾಕಾರ ಕ್ರಮವಿಧಿಯಂತೆ ಇಲ್ಲಿಯೂ ನಾವು ಒಂದು ಕ್ರಮವಿಧಿಯನ್ನು ಅನ್ವಯಿಸುತ್ತಿದ್ದೇವೆ. ಈ ಕ್ರಮವಿಧಿಯೇ ಈ ರೀತಿ ಹೇಳುತ್ತದೆ. $p(x)$ ಮತ್ತು $g(x)$ ಗಳು ಯಾವುದೇ ಎರಡು ಬಹುಪದೋಕ್ತಿಗಳಾಗಿದ್ದು, $g(x) \neq 0$ ಆದಾಗ

$$p(x) = g(x) * q(x) + r(x)$$

ಆಗುವಂತೆ $q(x)$ ಮತ್ತು $p(x)$ ಎಂಬ ಬಹುಪದೋಕ್ತಿಗಳನ್ನು ನಾವು ಕಾಣಬಹುದು.

ಇಲ್ಲಿ $r(x) = 0$ ಅಥವಾ $r(x)$ ದ ಡಿಗ್ರಿ $g(x)$ ದ ಡಿಗ್ರಿ ಆಗಿರುತ್ತದೆ. ಇದನ್ನು ಬಹುಪದೋಕ್ತಿಗಳಿಗೆ ಭಾಗಾಕಾರ ಕ್ರಮವಿಧಿ ಎನ್ನುತ್ತಾರೆ. ಇದರ ಪ್ರಯೋಜವನ್ನು ನಿದರ್ಶಿಸಲು ಈಗ ಕೆಲವು ಉದಾಹರಣೆಗಳನ್ನು ತೆಗೆದುಕೊಳ್ಳೋಣ.

ಉದಾಹರಣೆ: $3x^3 + x^2 + 2x + 5$ ಅನ್ನು $1 + 2x + x^2$ ದಿಂದ ಭಾಗಿಸಿ.

$3x + 5$

ಪರಿಹಾರ:

$$\begin{array}{r} 3x - 5 \\ x^2 + 2x + 1 \overline{\smash{)}\, 3x^3 + x^2 + 2x + 5} \\ \underline{3x^3 + 6x^2 + 3x} \\ -\quad -\quad - \\ -5x^2 - x + 5 \\ \underline{-5x^2 - 10x - 5} \\ +\quad +\quad + \\ 9x + 10 \end{array}$$

ಹಂತ 1: ಭಾಗಲಬ್ಧದ ಮೊದಲ ಪದವನ್ನು ಪಡೆಯಲು ಭಾಜ್ಯದ ಗರಿಷ್ಠ ಡಿಗ್ರಿಯ ಪದ (ಅಂದರೆ $3x^3$) ಅನ್ನು ಭಾಜಕದ ಗರಿಷ್ಠ ಡಿಗ್ರಿಯ ಪದ (ಅಂದರೆ x^2)ದಿಂದ ಭಾಗಿಸಲಾಗಿದೆ. ಆಗ $3x$ ದೊರೆಯುತ್ತದೆ. ನಂತರ ಭಾಗಾಕಾರ ಕ್ರಿಯೆಯನ್ನು ಮುಂದುವರಿಸಿ. ಆಗ 5x2-x + 5 ಉಳಿಯುತ್ತದೆ.

ಹಂತ 2: ಈಗ ಭಾಗಲಬ್ಧದ ಎರಡನೇ ಪದವನ್ನು ಪಡೆಯಲು ಹೊಸ ಭಾಜ್ಯದ ಗರಿಷ್ಠ ಡಿಗ್ರಿಯ ಪದ (ಅಂದರೆ $5x^2$) ಅನ್ನು ಭಾಜಕದ ಗರಿಷ್ಠ ಡಿಗ್ರಿಯ ಪದ (ಅಂದರೆ x^2) ದಿಂದ ಭಾಗಿಸಿ ಆಗ-5 ಸಿಗುತ್ತದೆ. ಪುನಃ $5x^2 - x + 5$ ಇದರೊಂದಿಗೆ ಭಾಗಾಕಾರ ಕ್ರಿಯೆಯನ್ನು ಮುಂದುವರಿಸಿ.

ಹಂತ 3: ಆಗ $9x + 10$ ಉಳಿಯುತ್ತದೆ. ಈಗ $9x + 10$ ರ ಡಿಗ್ರಿಯ ಭಾಜಕ $x^2 + 2x + 1$ ಡಿಗ್ರಿಗಿಂತ ಕಡಿಮೆ ಇದೆ. ಆದ್ದರಿಂದ ಇನ್ನೂ ಮುಂದಕ್ಕೆ ಭಾಗಾಕಾರ ಕ್ರಿಯೆಯನ್ನು ಮುಂದುವರಿಸಲು ಸಾಧ್ಯವಿಲ್ಲ. ಆದ್ದರಿಂದ ಭಾಗಲಬ್ಧವು 3x-5 ಮತ್ತು ಶೇಷವು $9x + 10$ ಆಗಿದೆ. ಹಾಗೂ

$$(x^2 + 2x + 1) \times (3x - 5) + (9x + 10)$$
$$= 3x^2 + 6x^2 + 3x - 5x^2 - 10x - 5 + 9x + 10$$
$$= 3x^3 + x^2 + 2x + 5$$

ಉದಾಹರಣೆ: $\sqrt{2}$ ಮತ್ತು- $\sqrt{2}$ ಇವು $2x^4 + 3x^3 + 3x^2 + 6x - 2$ ರ ಎರಡು ಶೂನ್ಯಗಳಾದರೆ, ಅದರ ಎಲ್ಲಾ ಶೂನ್ಯತೆಗಳನ್ನು ಕಂಡುಹಿಡಿಯಿರಿ.

ಪರಿಹಾರ: $\sqrt{2}$ ಮತ್ತು $\bar{\sqrt{2}}$ ಇವು ಎರಡು ಶೂನ್ಯಗಳಾಗಿರುವುದರಿಂದ

$$(x - \sqrt{2})(x + \sqrt{2}) = x^2 - 2$$

ಇದು ದತ್ತ ಬಹುಪದೋಕ್ತಿಯ ಒಂದು ಅಪವರ್ತನವಾಗಿದೆ. ಈಗ ದತ್ತ ಬಹುಪದೋಕ್ತಿಯನ್ನು ನಾವು x2-2 ನಿಂದ ಭಾಗಿಸುತ್ತೇವೆ.

$$\begin{array}{r} 2x^2 - 3x + 1 \\ x^2 - 2 \overline{\smash{)}\, 2x^4 - 3x^3 - 3x^2 + 6x - 2} \\ \underline{2x^4 \qquad -4x^2} \\ -\qquad + \\ -3x^3 + x^2 + 6x - 2 \\ \underline{-3x^3 \qquad + 6x} \\ +\qquad - \\ x^2 \qquad -2 \\ \underline{x^2 \qquad -2} \\ -\qquad + \\ 0 \end{array}$$

ಭಾಗಲಬ್ಧ ಮೊದಲ ಪದವು $\frac{2x^4}{x^2} = 2x^2$

ಭಾಗಲಬ್ಧ ಎರಡನೇ ಪದವು $\frac{-3x^2}{x^2} = -3x$

ಭಾಗಲಬ್ಧದ ಮೂರನೇ ಪದವು $\frac{x^2}{x^2} = 1$

ಆದ್ದರಿಂದ ಈಗ ಮಧ್ಯಪದವಾದ -3x ಅನ್ನು ವಿಭಜಿಸುವುದರಿಂದ 2x2-3x + 1 ಅನ್ನು (2x-1) (x-1) ಎಂದು ಅಪವರ್ತಿಸುತ್ತೇವೆ. ಆದ್ದರಿಂದ ಮತ್ತು $x = 1$ ಇವು ಅದರ ಶೂನ್ಯತೆಗಳಾಗಿವೆ.

ಆದ್ದರಿಂದ $\sqrt{2}, \bar{\sqrt{2}}, \frac{1}{2}$ ಮತ್ತು 1 ಇವು ದತ್ತ ಬಹುಪದೋಕ್ತಿಯ ಶೂನ್ಯತೆಗಳಾಗಿವೆ.

ನ್ಯೂಕ್ಲಿಯೋಕಾಂಕ್ಷಿ ಆದೇಶಕ್ರಿಯೆಗಳ ಘನರಸಾಯನಶಾಸ್ತ್ರದ ಅಂಶಗಳು

ರಸಾಯನಶಾಸ್ತ್ರ

ದ್ವಿತೀಯ ಪಿಯುಸಿ

S_N2 ಕ್ರಿಯೆಯು ಸಂಪೂರ್ಣ ವಿಲೋಮ ವಿನ್ಯಾಸವನ್ನು ಅನುಸರಿಸಿದರೆ SN1 ರೆಸಿಮೀಕರಣವನ್ನು ಅನುಸರಿಸುತ್ತದೆ. ಈ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳಲು ಘನರಾಸಾಯನಿಕತೆಯ ತತ್ವ ಮತ್ತು ಸಂಕೇತಗಳನ್ನು (ದ್ಯುತಿ ಪಟುತ್ವ, ಅಸಮ್ಮಿತಿ (ಕೈರಾಲಿಟಿ), ಪ್ರತಿಧಾರಣ ವಿಲೋಮ, ರೆಸಿಮೀಕರಣ) ತಿಳಿದುಕೊಳ್ಳುವುದು ಅಗತ್ಯ.

1) ಸಮತಲ ದ್ರವೀಕೃತ ಬೆಳಕು ಮತ್ತು ದ್ಯುತಿ ಪಟುತ್ವ


ಕೆಲವು ಸಂಯುಕ್ತಗಳು ಸಮತಲ ದ್ರವೀಕೃತ ಬೆಳಕನ್ನು (ಸಾಮಾನ್ಯ ಬೆಳಕನ್ನು ನಿಕೋಲ್ ಅಶ್ರಗದ ಮೂಲಕ ಹಾಯಿಸಿ ಪಡೆದದ್ದು) ತಿರುಗಿಸಿ ಗುಣವನ್ನು ಪಡೆದಿರುತ್ತದೆ. ಅಂತಹ ಸಂಯುಕ್ತಗಳಿಗೆ 'ದ್ಯುತಿ ಪಟುತ್ವ ಸಂಯುಕ್ತಗಳು' ಎನ್ನುವರು.

ಕೆಲವು ಸಂಯುಕ್ತಗಳು ಸಮತಲ ದ್ರವೀಕೃತ ಬೆಳಕನ್ನು ಬಲಕ್ಕೆ ತಿರುಗಿಸುತ್ತದೆ. ಅಂದರೆ ಗಡಿಯಾರದ ಚಲನೆಯ ದಿಕ್ಕಿನಲ್ಲಿ ಇದನ್ನು ಬಲಭ್ರಾಮಕ (Dextrorotatory) ಎನ್ನುವರು. ಗ್ರೀಕ್‌ನಲ್ಲಿ ಬಲಕ್ಕೆ ತಿರುಗಿಸುವುದು ಎಂದರ್ಥ. ಇದನ್ನು d ಅಥವಾ + ಚಿಹ್ನೆಯಿಂದ ಸೂಚಿಸುತ್ತಾರೆ.

ಸಮತಲ ದ್ರವೀಕೃತ ಬೆಳಕನ್ನು ಎಡಕ್ಕೆ ತಿರುಗಿಸಿದರೆ (ಗಡಿಯಾರದ ಚಲನೆಯ ವಿರುದ್ಧ ದಿಕ್ಕಿನಲ್ಲಿ) ಅಂತಹ ಸಂಯುಕ್ತಗಳನ್ನು ಎಡಭ್ರಾಮಕ (laevorotatory) ಎನ್ನುವರು.

ಭ್ರಮಣ ಕೋನದ ಮುಂಚೆ l ರೂಪ ಅಥವಾ ಋಣ (-) ಚಿಹ್ನೆಯಿಂದ ಸೂಚಿಸುತ್ತಾರೆ. ಅಂತಹ ಧನ (+) ಮತ್ತು ಋಣ (-) ಸಮಾಂಗಿಗಳ ಸಂಯುಕ್ತಗಳನ್ನು ದ್ಯುತಿ ಸಮಾಂಗಿ (optical isomer) ಗಳೆಂದು ಮತ್ತು ಆ ವಿದ್ಯಮಾನವನ್ನು ದ್ಯುತಿ ಸಮಾಂಗತೆ (optical activity) ಎನ್ನುವರು.


ಆಣ್ವಿಕ ಅಸಮ್ಮಿತಿ ಕೈರಾಲಿಟಿ ಮತ್ತು ಪ್ರತ್ಯಂಗಿಗಳು (ಸಖ್ಯ ಸಮಾಂಗಿಗಳು)



ಬಿಂಬ ವಿನ್ಯಾಸಗಳನ್ನು ಆಧ್ಯಾರೋಪಿಸಲು ಸಾಧ್ಯವಿಲ್ಲದ ಗುಣಗಳನ್ನು ಅಸಮ್ಮಿತಿ (ಕೈರಲ್) ಮತ್ತು ಆ ಗುಣಕ್ಕೆ ಕೈರಾಲಿಟಿ ಎನ್ನುವರು.


ಹಾಗೆಯೇ ಆಧ್ಯಾರೋಪಿಸಬಲ್ಲ ಬಿಂಬ ವಿನ್ಯಾಸವನ್ನು ಹೊಂದಿರುವ ವಸ್ತುಗಳನ್ನು ಸಮ್ಮಿತಿ (ಅಕೈರಲ್) ಎನ್ನುತ್ತಾರೆ.

ಎರಡು ಸರಳ ಅಣುಗಳಾದ ಪ್ರೊಪೇನ್-2-ಆಲ್ ಮತ್ತು ಬ್ಯೂಟೇನ್-2-ಆಲ್ ಅಣುಗಳ ಬಿಂಬ ವಿನ್ಯಾಸವನ್ನು ಪರಿಗಣಿಸಿಕೊಳ್ಳಿ.



'B'ಅನ್ನು 180° ತಿರುಗಿಸಿದಾಗ 'C' ದೊರೆಯುವುದು. (C) ಬಿಂಬವಿನ್ಯಾಸವನ್ನು 'A' ಮೇಲೆ ಆದ್ಯಾರೋಪಿಸಬಹುದು.

ನಿಮಗೆ ಸ್ಪಷ್ಟವಾಗಿ ಗೋಚರಿಸುವಂತೆ ಪ್ರೋಪೇನ್-2-ಆಲ್‌ನಲ್ಲಿ ಚತುರ್ಮುಖೀಯ ಕಾರ್ಬನ್‌ಗೆ ಬಂಧಿಸಿದ ನಾಲ್ಕು ಗುಂಪುಗಳು ವಿಭಿನ್ನವಾಗಿಲ್ಲ. ಆದ್ದರಿಂದ ಇದು 'ಅಸಮ್ಮಿತಿ (chiral) ಕಾರ್ಬನ್ ಪರಮಾಣುವನ್ನು ಹೊಂದಿಲ್ಲ. ಆದ್ದರಿಂದ ಇದು 'ಸಮ್ಮಿತಿ ಅಣು (achiral)'.



'E' ಯನ್ನು 180° ತಿರುಗಿಸಿದಾಗ 'F' ದೊರೆಯುವುದು.

ಕೈರಲ್ ಅಣುವಿಗೆ ಸಾಮಾನ್ಯ ಉದಾಹರಣೆಗಳೆಂದರೆ 2-ಕ್ಲೋರೋಬ್ಯೂಟೇನ್, 2-3 ಡೈಹೈಡ್ರಾಕ್ಸಿ-ಪ್ರೊಪೇನಾಲ್ (OHC-CHOH-CH2OH) ಬ್ರೊಮೊಕ್ಲೋರೋ-ಅಯ್ಡೋಮಿಥೇನ್ (BrClCHI) 2-ಬ್ರೊಮೊಪ್ರೊಪೆನಾಯಿಕ್ ಆಮ್ಲ (H_3C-CHBr-COOH) ಮುಂತಾದವುಗಳು.

ಒಂದರ ಮೇಲೊಂದು ಆಧ್ಯಾರೋಪಿಸಲಾಗದ ಘನರಸಾಯನ ಸಮಾಂಗಿಗಳ ಬಿಂಬ ವಿನ್ಯಾಸಗಳನ್ನು ಪ್ರತ್ಯಂಗಿಗಳು (ಸಖ್ಯಸಮಾಂಗಿಗಳು) (Enantiomer) ಎನ್ನುವರು.

(ಮುಂದುವರಿಯುವುದು)

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ರಸಾಯನಶಾಸ್ತ್ರ ವಿಭಾಗದ 'ಸೊಲ್ಯುಷನ್ ಸಾಲಿಬಿಲಿಟಿ' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/3b3XPqs

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ತಮ್ಮ ಭಾವನೆಗಳು ಮತ್ತು ಚಿಂತನೆಗಳ ಮೇಲೆ ಹತೋಟಿ ಸಾಧಿಸುವುದು ಎಷ್ಟು ಕಷ್ಟ ಎಂಬುದನ್ನು ಜನ ಕಠಿಣವಾದ ಸಂದರ್ಭಗಳಲ್ಲಷ್ಟೇ ಅರ್ಥ ಮಾಡಿಕೊಳ್ಳುತ್ತಾರೆ.
–ಆ್ಯಂಟನ್ ಚೆಖಾವ್

ಆಮ್ಲಜನಕ ಪೂರೈಕೆಯಲ್ಲಿ ನಿರ್ಲಕ್ಷ್ಯ ಕೇಂದ್ರ ಸರ್ಕಾರದ ನಡೆ ಅಕ್ಷಮ್ಯ

ದೇಶದಲ್ಲಿ ಕೊರೊನಾ ಸೋಂಕು ಹರಡುವಿಕೆಯನ್ನು ತಡೆಯುವಲ್ಲಿ ಕೇಂದ್ರ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎನ್ನುವುದು ಮೇಲ್ನೋಟಕ್ಕೇ ಗೋಚರಿಸುತ್ತಿದೆ. ಈಗ ಸೋಂಕಿತರ ತುರ್ತುಚಿಕಿತ್ಸೆಗೆ ವೈದ್ಯಕೀಯ ಆಮ್ಲಜನಕ ಪೂರೈಕೆ ಮಾಡುವಲ್ಲಿಯೂ ಎಡವಿರುವುದು ಅಕ್ಷಮ್ಯ. ಸೋಂಕು ತೀವ್ರ ಗತಿಯಲ್ಲಿ ಹೆಚ್ಚುತ್ತಿರುವ ರಾಜ್ಯಗಳಿಗೆ ಅಗತ್ಯ ಪ್ರಮಾಣದಲ್ಲಿ ಸಕಾಲಕ್ಕೆ ಆಮ್ಲಜನಕ ಪೂರೈಸುವಲ್ಲಿ ಕೇಂದ್ರದ ನಿರ್ಲಕ್ಷ್ಯ ಮತ್ತು ಮಲತಾಯಿ ಧೋರಣೆ ಎದ್ದು ಕಾಣುತ್ತಿದೆ. ಕರ್ನಾಟಕದ ಹಲವು ಜಿಲ್ಲೆಗಳ ಆಸ್ಪತ್ರೆಗಳಲ್ಲಿ ಆಮ್ಲಜನಕದ ಕೊರತೆ ತೀವ್ರವಾಗಿದೆ. ಆಮ್ಲಜನಕದ ಕೊರತೆಯಿಂದ ರೋಗಿಗಳು ಸಾಲುಸಾಲಾಗಿ ಸಾಯುತ್ತಿರುವ ವರದಿಗಳು ಪ್ರತಿದಿನವೂ ಬರುತ್ತಿವೆ. ಆಮ್ಲಜನಕದ ರಾಜ್ಯವಾರು ವಿತರಣೆಯ ನಿಯಂತ್ರಣವನ್ನು ಕೈಯಲ್ಲಿ ಇಟ್ಟುಕೊಂಡಿರುವ ಕೇಂದ್ರ ಸರ್ಕಾರವು ಜನರ ಜೀವದ ಜೊತೆಗೆ ಚೆಲ್ಲಾಟವಾಡುತ್ತಿರುವಂತೆ ಕಾಣಿಸುತ್ತಿದೆ. ಕರ್ನಾಟಕದ ಪ್ರಕರಣವನ್ನೇ ಗಮನಿಸಿ. ರಾಜ್ಯಕ್ಕೆ 1,792 ಟನ್‌ಗಳಷ್ಟು ಆಮ್ಲಜನಕದ ಅಗತ್ಯವಿದೆ. ಕೇಂದ್ರವು ರಾಜ್ಯಕ್ಕೆ ನೀಡುತ್ತಿರುವ ಆಮ್ಲಜನಕದ ಪಾಲು 865 ಟನ್ ಮಾತ್ರ. ಪ್ರಧಾನಿ ನರೇಂದ್ರ ಮೋದಿಯವರು ಮುಖ್ಯಮಂತ್ರಿಗಳ ಜೊತೆಗೆ ಆಮ್ಲಜನಕ ನಿರ್ವಹಣೆಗೆ ಸಂಬಂಧಿಸಿ ಕಳೆದ ತಿಂಗಳು ವಿಡಿಯೊ ಸಂವಾದ ನಡೆಸಿದ್ದರು. ರಾಜ್ಯದಲ್ಲಿ ಆಮ್ಲಜನಕದ ತೀವ್ರ ಕೊರತೆಯಿದೆ ಎನ್ನುವುದನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಪ್ರಧಾನಿಯವರ ಗಮನಕ್ಕೆ ತಂದಿದ್ದರು. ಆಮ್ಲಜನಕದ ಪೂರೈಕೆ ಹೆಚ್ಚಿಸುವಂತೆ ಆಗ್ರಹಪೂರ್ವಕ ಮನವಿ ಮಾಡಿದ್ದರು. ಆದರೆ ಬೇಡಿಕೆ ಸಲ್ಲಿಸಿ ಎರಡು ವಾರ ಕಳೆದಿದ್ದರೂ ಕೇಂದ್ರ ಸರ್ಕಾರವು ರಾಜ್ಯದ ಆಮ್ಲಜನಕ ಪೂರೈಕೆಯ ಪ್ರಮಾಣ ಹೆಚ್ಚಿಸಲು ಕ್ರಮ ಕೈಗೊಂಡಿಲ್ಲ. ಏಪ್ರಿಲ್ 30ರಂದು ರಾಜ್ಯ ಸರ್ಕಾರವು ಕೇಂದ್ರ ವಾಣಿಜ್ಯ ಸಚಿವಾಲಯದ ಕಾರ್ಯದರ್ಶಿಗೆ ಪತ್ರ ಬರೆದು 1,162 ಟನ್ ಆಮ್ಲಜನಕದ ಅಗತ್ಯವಿದೆ ಎಂದು ಬೇಡಿಕೆ ಮಂಡಿಸಿದೆ. ಅದಕ್ಕೂ ಉತ್ತರವಿಲ್ಲ. ಪ್ರತಿನಿತ್ಯ 927 ಟನ್ ಆಮ್ಲಜನಕದ ಕೊರತೆಯನ್ನು ಎದುರಿಸುತ್ತಿರುವ ಕರ್ನಾಟಕದಲ್ಲಿ ಈಗ ಆಮ್ಲಜನಕದ ಕೊರತೆಯಿಂದ ಸಾವಿಗೀಡಾಗುತ್ತಿರುವ ರೋಗಿಗಳ ಸಂಖ್ಯೆಯೂ ಹೆಚ್ಚುತ್ತಿದೆ. ಚಾಮರಾಜನಗರ ಜಿಲ್ಲೆಯಲ್ಲಿ 24 ರೋಗಿಗಳು ಒಂದೇ ದಿನ ಪ್ರಾಣ ಕಳೆದುಕೊಂಡರೆ, ಕಲಬುರ್ಗಿ ಜಿಲ್ಲೆಯಲ್ಲಿ ನಾಲ್ವರು, ವಿಜಯಪುರದಲ್ಲಿ ಮೂವರು ರೋಗಿಗಳು ಪ್ರಾಣ ಬಿಟ್ಟಿದ್ದಾರೆ; ಈ ಎಲ್ಲ ಸಾವುಗಳಿಗೆ ಆಮ್ಲಜನಕದ ಕೊರತೆಯೇ ಕಾರಣ ಎಂಬ ದೂರುಗಳು ಇವೆ. ಹಾಗಾಗಿ ಈ ಸಾವುಗಳಿಗೆ ಕೇಂದ್ರ ಸರ್ಕಾರದ ನಿರ್ಲಕ್ಷ್ಯ ಮತ್ತು ಮಲತಾಯಿ ಧೋರಣೆಯೇ ಕಾರಣ ಎನ್ನದೆ ನಿರ್ವಾಹವಿಲ್ಲ. ರಾಜ್ಯದಲ್ಲೇ 1,043 ಟನ್ ಆಮ್ಲಜನಕ ಉತ್ಪಾದನೆ ಆಗುತ್ತಿದ್ದರೂ ಅದರಲ್ಲಿ ಒಂದು ಪಾಲನ್ನು ಕೇಂದ್ರ ಸರ್ಕಾರವು ನೆರೆಯ ರಾಜ್ಯಗಳಿಗೆ ವಿತರಿಸಿ, ಕರ್ನಾಟಕಕ್ಕೆ ದೂರದ ವಿಶಾಖಪಟ್ಟಣದಿಂದ ಪೂರೈಸುವಂತಹ ಅಸಂಬದ್ಧವೂ ನಡೆಯುತ್ತಿದೆ. ನೋಟು ಅಮಾನ್ಯೀಕರಣ-ದಂತಹ ನಿರ್ಧಾರವನ್ನು ರಾತ್ರೋರಾತ್ರಿ ಕೈಗೊಳ್ಳುವ ಸರ್ಕಾರಕ್ಕೆ ಆಡಳಿತಾತ್ಮಕವಾದ ಸಣ್ಣದೊಂದು ನಿರ್ಧಾರದ ಮೂಲಕ ಈ ಅಸಂಗತ ವ್ಯವಸ್ಥೆಯನ್ನು ಸರಿಪಡಿಸಲು ಆಗದೇ?



ಕೇಂದ್ರ ಸರ್ಕಾರವು ತಕ್ಷಣವೇ ಕರ್ನಾಟಕಕ್ಕೆ ಆಮ್ಲಜನಕ ಪೂರೈಕೆಯನ್ನು ಹೆಚ್ಚಿಸಬೇಕು. ಇದಕ್ಕಾಗಿ ಕೇಂದ್ರ ಸರ್ಕಾರದ ಮೇಲೆ ರಾಜ್ಯದ ಬಿಜೆಪಿ ಮುಖಂಡರು ತೀವ್ರ ಒತ್ತಡ ಹೇರಬೇಕು

ಪರಿಸ್ಥಿತಿಯು ಕೈಮೀರಿದೆ ಎಂಬುದನ್ನು ಅರಿತ ಕರ್ನಾಟಕ ಹೈಕೋರ್ಟ್, ಆಮ್ಲಜನಕ ಕೊರತೆಗೆ ಸಂಬಂಧಿಸಿ ಸಲ್ಲಿಕೆಯಾಗಿರುವ 19 ಅರ್ಜಿಗಳನ್ನು ಮುಂಚಿತವಾಗಿಯೇ ವಿಚಾರಣೆಗೆ ಎತ್ತಿಕೊಂಡಿದೆ. ಆದರೆ ಹೈಕೋರ್ಟ್ ಮುಂದೆ ವಾದ ಮಂಡಿಸಿರುವ ಕೇಂದ್ರ ಸರ್ಕಾರದ ವಕೀಲರು 'ಒಂದಕ್ಕಿಂತ ಹೆಚ್ಚು ಸಚಿವಾಲಯಗಳಿಗೆ ಸಂಬಂಧಿಸಿದ ವಿಷಯ ಇದು. ನಿಗದಿತ ಪ್ರಕ್ರಿಯೆ ಅನುಸರಿಸಿದ ಬಳಿಕವೇ ಕೇಂದ್ರ ಸರ್ಕಾರವು ಒಂದು ನಿರ್ಧಾರಕ್ಕೆ ಬರಲಿದೆ' ಎಂದಿದ್ದಾರೆ. 'ಜನರು ಸಾಯುತ್ತಿದ್ದಾರೆ, ನಿಮ್ಮ ಎಲ್ಲ ಪ್ರಕ್ರಿಯೆಗಳನ್ನೂ ಬದಿಗಿಡಿ. ಆಮ್ಲಜನಕ ಹಂಚಿಕೆ ಯಾವಾಗ ಹೆಚ್ಚಿಗೆ ಮಾಡುತ್ತೀರಿ ಹೇಳಿ' ಎಂದು ಮುಖ್ಯ ನ್ಯಾಯಮೂರ್ತಿಯೂ ಇರುವ ನ್ಯಾಯಪೀಠ ಸಿಟ್ಟಿನಿಂದ ಪ್ರಶ್ನಿಸಿರುವುದು ಪರಿಸ್ಥಿತಿಯ ಗಂಭೀರತೆಗೆ ಹಿಡಿದಿರುವ ಕೈಗನ್ನಡಿ. ರಾಜ್ಯಕ್ಕೆ ಆಮ್ಲಜನಕ ಪೂರೈಕೆಯಲ್ಲಿ ಕೇಂದ್ರ ಸರ್ಕಾರ ಎಷ್ಟು ಸಂವೇದನಾಶೂನ್ಯವಾಗಿದೆ ಎನ್ನುವುದಕ್ಕೂ ಇದು ಸಾಕ್ಷಿಯಾಗಿದೆ. ರಾಜ್ಯದಿಂದ ಅತ್ಯಧಿಕ ಸಂಖ್ಯೆಯಲ್ಲಿ ದೆಹಲಿಗೆ ಆಯ್ಕೆಯಾಗಿ ಹೋಗಿರುವ ಬಿಜೆಪಿಯ ಸಂಸದರು ಈ ವಿಷಯದಲ್ಲಿ ಬಾಯಿಗೆ ಬೀಗ ಜಡಿದುಕೊಂಡು ಕುಳಿತಿರುವುದು ಏನನ್ನು ಸೂಚಿಸುತ್ತಿದೆ? ಕರ್ನಾಟಕಕ್ಕಿಂತ ಕಡಿಮೆ ಸೋಂಕು ಪ್ರಕರಣಗಳಿರುವ ಕೆಲವು ರಾಜ್ಯಗಳಿಗೆ ಕೇಂದ್ರವು ಹೆಚ್ಚು ಆಮ್ಲಜನಕ ಪೂರೈಕೆ ಮಾಡುತ್ತಿರುವ ಬಗ್ಗೆ ಈ ಸಂಸದರು ಮೂಕರಾಗಿರುವುದು ಏಕೆ? ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಪಕ್ಷದ ಸರ್ಕಾರ ಇದ್ದರೆ ರಾಜ್ಯದ ಆಡಳಿತ ಅತ್ಯುತ್ತಮವಾಗಿರಲಿದೆ ಎಂದು ಚುನಾವಣೆಯ ವೇಳೆ ಭರವಸೆ ನೀಡಿದ್ದ ಬಿಜೆಪಿ ಮುಖಂಡರು, ಈಗ ಕೇಂದ್ರ ಮತ್ತು ರಾಜ್ಯ ಎರಡೂ ತಾಳಮೇಳವಿಲ್ಲದೆ ವರ್ತಿಸುತ್ತಿರುವ ವಿದ್ಯಮಾನವನ್ನು ಹೇಗೆ ಸಮರ್ಥಿಸುತ್ತಾರೆ? ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 4.87 ಲಕ್ಷ ದಾಟಿದೆ. ಇವರಲ್ಲಿ ಶೇ 17ರಷ್ಟು ಮಂದಿಗೆ ಆಮ್ಲಜನಕ ಪೂರೈಕೆಯುಳ್ಳ ಹಾಸಿಗೆ ಮತ್ತು ಶೇ 3ರಷ್ಟು ಮಂದಿಗೆ ಐಸಿಯು ಅಗತ್ಯ ಉಂಟಾಗಬಹುದು ಎಂದು ಅಂದಾಜಿಸಲಾಗಿದೆ. ಮೇ 10ರ ವೇಳೆಗೆ ಸೋಂಕಿತರ ಸಂಖ್ಯೆ ಇನ್ನೂ ಹೆಚ್ಚಲಿದೆ ಎಂದು ರಾಜ್ಯ ಸರ್ಕಾರವೇ ಹೇಳಿದೆ. ಕೇಂದ್ರ ಸರ್ಕಾರವು ತಕ್ಷಣವೇ ಕರ್ನಾಟಕಕ್ಕೆ ಆಮ್ಲಜನಕ ಪೂರೈಕೆಯನ್ನು 1,792 ಟನ್‌ಗಳಿಗೆ ಹೆಚ್ಚಿಸಬೇಕು. ಆಮ್ಲಜನಕ ಪೂರೈಕೆ ಹೆಚ್ಚಿಸಲು ಕೇಂದ್ರ ಸರ್ಕಾರದ ಮೇಲೆ ರಾಜ್ಯದ ಬಿಜೆಪಿ ಮುಖಂಡರು ತೀವ್ರ ಒತ್ತಡ ಹೇರಬೇಕು. ಇಲ್ಲವಾದಲ್ಲಿ ಚಾಮರಾಜನಗರದಲ್ಲಿ ನಡೆದಂತಹ ದಾರುಣ ಘಟನೆಗಳು ಇನ್ನಷ್ಟು ಜಿಲ್ಲೆಗಳಲ್ಲಿ ಮರುಕಳಿಸುವ ಅಪಾಯವಿದೆ.

ದಿನದ ಟ್ವೀಟ್

ಲಸಿಕೆಯ ಅಗತ್ಯ ಮನಗಾಣಿ



ದೇಶದಲ್ಲಿ ಲಸಿಕೆ ನೀಡಿಕೆ ಪ್ರಕ್ರಿಯೆಯು ಕ್ಷಿಪ್ರವಾಗಿ ವಿಪತ್ಕಾರಿ ಹಂತದತ್ತ ಜಾರುತ್ತಿದೆ. ಈ ತುರ್ತು ಅಗತ್ಯದ ಬಗ್ಗೆ ಅಥವಾ ಬಿಕ್ಕಟ್ಟಿನ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳುತ್ತಿಲ್ಲ. ಮೂರು ವಾರಗಳ ಹಿಂದೆ ಇದ್ದ ಸರಾಸರಿ ಲಸಿಕೆ ನೀಡಿಕೆ ಪ್ರಮಾಣಕ್ಕೆ ಹೋಲಿಸಿದರೆ ಈಗ ಈ ಪ್ರಮಾಣ ಅರ್ಧಕ್ಕಿಂತಲೂ ಕಡಿಮೆಯಾಗಿದೆ.

ಶೇಖರ್ ಗುಪ್ತಾ, ಪತ್ರಕರ್ತ

25 ವರ್ಷಗಳ ಹಿಂದೆ

ಸೋಮವಾರ, 6-5-1996

- **ಕಾಂಗ್ರೆಸ್ ನಾಯಕತ್ವ ಘರ್ಷಣೆ ಇಲ್ಲ: ರಾವ್**

ವಾಯುಪಡೆ ವಿಶೇಷ ವಿಮಾನ, ಮೇ 5 (ಪಿಟಿಐ)– ಲೋಕಸಭಾ ಚುನಾವಣೆಯ ನಂತರ ಕಾಂಗ್ರೆಸ್ ಐ ಪಕ್ಷದಲ್ಲಿ ನಾಯಕತ್ವ ಬದಲಾವಣೆ ಕುರಿತಂತೆ ಆಂತರಿಕ ಘರ್ಷಣೆ ಉಂಟಾಗುವ ಸಾಧ್ಯತೆಯನ್ನು ತಳ್ಳಿಹಾಕಿದ ಪ್ರಧಾನಿ ಪಿ.ವಿ.ನರಸಿಂಹ ರಾವ್, ತಮ್ಮ ಪಕ್ಷ ಪೂರ್ಣ ಬಹುಮತದೊಂದಿಗೆ ಕೇಂದ್ರದಲ್ಲಿ ಮತ್ತೆ ಸರ್ಕಾರ ರಚಿಸುವುದು ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಜಮ್ಮು ಮತ್ತು ಕಾಶ್ಮೀರದಲ್ಲಿ ಚುನಾವಣಾ ಪ್ರಚಾರ ಮುಗಿಸಿ ದೆಹಲಿಗೆ ಹಿಂದಿರುಗುವಾಗ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪ್ರಧಾನಿ ಹುದ್ದೆ ಹಾಗೂ ಪಕ್ಷದ ಅಧ್ಯಕ್ಷ ಗಾದಿಯನ್ನು ಒಬ್ಬರೇ ಹೊಂದಿರಬಾರದು ಎಂಬ ಪಕ್ಷದ ಹಿರಿಯ ನಾಯಕ ಕೆ.ಕರುಣಾಕರನ್ ಅವರ ಹೇಳಿಕೆ ಬಗ್ಗೆ ಗಮನ ಸೆಳೆದಾಗ ಹೀಗೆ ಪ್ರತಿಕ್ರಿಯಿಸಿದರು.

50 ವರ್ಷಗಳ ಹಿಂದೆ

ಗುರುವಾರ, 6-5-1971

- **ಪ್ಲಾಂಟೇಷನ್ ಜಮೀನು ಸಹಕಾರಿ ಸಂಸ್ಥೆಗಳಿಗೆ ವಹಿಸಿಕೊಡಲು ಆದೇಶ**

ಮಂಗಳವಾರ, ಮೇ 5– 'ರಾಜ್ಯದಲ್ಲಿ ಇನ್ನು ಮುಂದೆ ಕಾಫಿ, ರಬ್ಬರ್ ಮುಂತಾದ ಪ್ಲಾಂಟೇಷನ್ ಬೆಳೆಗಳಿಗೆ ಜಮೀನನ್ನು ಖಾಸಗಿ ಬಂಡವಾಳಗಾರರಿಗೆ ಕೊಡುವ ಬದಲು ಬಹುಜನರ ಸ್ವಾಮ್ಯವಿರುವ ಸಹಕಾರಿ ಸಂಸ್ಥೆಗಳಿಗೆ ವಹಿಸಿಕೊಡುವ ಬಗ್ಗೆ ಪರಿಶೀಲಿಸಬೇಕು' ಎಂದು ರಾಜ್ಯಪಾಲ ಶ್ರೀ ಧರ್ಮವೀರ ಅವರು ಅರಣ್ಯ ಇಲಾಖೆಗೆ ಆದೇಶ ನೀಡಿದ್ದಾರೆ.

'ದೊಡ್ಡ ಅರಣ್ಯ ಜಮೀನುಗಳನ್ನು ಸಿರಿವಂತ ತೋಟಗಾರರಿಗೆ ವಹಿಸಿಕೊಡುವ ಈಗಿನ ಕ್ರಮವನ್ನು ನಾನು ಒಪ್ಪುವುದಿಲ್ಲ. ಬಡ ಕಾರ್ಮಿಕರು ಬಡವರಾಗಿಯೇ ಉಳಿಯುವ ಪರಿಸ್ಥಿತಿ ಮುಂದುವರಿಯಬಾರದು' ಎಂದು ಅವರು ಹೇಳಿದರು.

- **ವಿದ್ಯುತ್ ದರ: ಯುನಿಟ್‌ಗೆ 12 ಪೈಸೆ**

ಬೆಂಗಳೂರು, ಮೇ 5– ರಾಜ್ಯದಲ್ಲಿನ ವಿದ್ಯುಚ್ಛಕ್ತಿ ಸುಂಕ ತೆರಿಗೆ ಸೇರಿ ಯುನಿಟ್ ಒಂದಕ್ಕೆ 12 ಪೈಸೆಯಾಗಿದ್ದು, ಕೆಲವು ಪತ್ರಿಕೆಗಳಲ್ಲಿ 16 ಪೈಸೆ ಎಂದು ವರದಿಯಾಗಿರುವುದು ಸರಿಯಲ್ಲ ಎಂದು ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರು ಇಂದು ಸ್ಪಷ್ಟೀಕರಿಸಿದ್ದಾರೆ.

ಕಾಂಗ್ರೆಸ್ ಪಕ್ಷ ಇಂದು ಎದುರಿಸುತ್ತಿರುವ ಸವಾಲುಗಳಿಗೆ ಮೂರು ಆಯಾಮಗಳಿವೆ

ರಾಜಕೀಯವಾಗಿ ಅಸಂಗತ ಆಗಬಾರದೆಂದರೆ...



ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ನಾಲ್ಕು ರಾಜ್ಯಗಳು ಹಾಗೂ ಒಂದು ಕೇಂದ್ರಾಡಳಿತ ಪ್ರದೇಶದ ವಿಧಾನಸಭೆಗೆ ನಡೆದ ಚುನಾವಣೆಯ ಫಲಿತಾಂಶವು ಮುಂದಿನ ದಿನಗಳಲ್ಲಿ ದೇಶದ ರಾಜಕಾರಣದ ಹಾದಿಯನ್ನು ನಿರ್ಧರಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದೆ. ಪಶ್ಚಿಮ ಬಂಗಾಳ, ಕೇರಳ ಮತ್ತು ತಮಿಳುನಾಡು ವಿಧಾನಸಭೆಗಳ ಫಲಿತಾಂಶದ ಬಗ್ಗೆ ಬಹಳ ಚರ್ಚೆ ನಡೆದಿದೆ. ಆದರೆ, ಕಾಂಗ್ರೆಸ್ ಪಕ್ಷದ ಸಾಧನೆಯ ಬಗ್ಗೆ ತೀರಾ ಸೀಮಿತ ಗಮನಹರಿದಿದೆ. ಈ ಚುನಾವಣೆ ಫಲಿತಾಂಶವು ಕಾಂಗ್ರೆಸ್ಸಿಗೆ ಒಳ್ಳೆಯ ಸುದ್ದಿಯನ್ನು ತಂದಿಲ್ಲ. ಕೇರಳದಲ್ಲಿ ತನ್ನ ಪಾಲುದಾರಿಕೆ ಇರುವ ಮೈತ್ರಿಕೂಟವನ್ನು ಅಧಿಕಾರಕ್ಕೆ ತರಲು ಕಾಂಗ್ರೆಸ್ಸಿಗೆ ಆಗಿಲ್ಲ. ಅಸ್ಸಾಂನಲ್ಲಿ ಬಿಜೆಪಿಯಿಂದ ಅಧಿಕಾರ ಕಸಿದುಕೊಳ್ಳಲು ಆಗಿಲ್ಲ. ಪುದುಚೇರಿಯಲ್ಲಿ ಅಧಿಕಾರಕ್ಕೆ ಮರಳಲು ಆಗಿಲ್ಲ. ಪಶ್ಚಿಮ ಬಂಗಾಳದಲ್ಲಿ ಪಕ್ಷವು ಸ್ಪರ್ಧೆಯಲ್ಲೇ ಇರಲಿಲ್ಲ. ತಮಿಳು-ನಾಡಿನಲ್ಲಿ ಡಿಎಂಕೆ ಜೊತೆ ಗುರುತಿಸಿಕೊಂಡು, ಜಯದ ಅಲೆಯಲ್ಲಿ ತೇಲಿದೆ. ಕಾಂಗ್ರೆಸ್ ಪಕ್ಷವು ಈಗ ಪಂಜಾಬ್, ರಾಜಸ್ಥಾನ ಮತ್ತು ಛತ್ತೀಸಗಡ ರಾಜ್ಯಗಳಲ್ಲಿ ಅಧಿಕಾರದಲ್ಲಿದೆ. ಮೂರು ರಾಜ್ಯಗಳಲ್ಲಿ (ಜಾರ್ಖಂಡ್, ಮಹಾರಾಷ್ಟ್ರ ಮತ್ತು ಈಗ ತಮಿಳುನಾಡು) ಆಡಳಿತಾರೂಢ ಪಕ್ಷದ ಜೊತೆ ಮೈತ್ರಿ ಮಾಡಿಕೊಂಡಿದೆ.

ಹೀಗೆ ಆಡಳಿತದಲ್ಲಿ ಇರುವ ರಾಜ್ಯಗಳ ಸಂಖ್ಯೆಯು ದೇಶದ ಒಟ್ಟು ರಾಜ್ಯಗಳಿಗೆ ಹೋಲಿಸಿದರೆ, ನಾಲ್ಕನೆಯ ಒಂದರಷ್ಟು. 2014ರ ಲೋಕಸಭಾ ಚುನಾವಣೆಯಲ್ಲಿ ಸೋಲುಂಡ ನಂತರ ಕಾಂಗ್ರೆಸ್ ಪಕ್ಷವು ಕುಸಿತದ ಹಾದಿಯಲ್ಲಿಯೇ ಇರುವಂತೆ ಕಾಣುತ್ತಿದೆ. ಅದು ಪುನಶ್ಚೇತನವನ್ನು ಕಂಡೇ ಇಲ್ಲ ಅನಿಸುತ್ತಿದೆ. 'ಕಾಂಗ್ರೆಸ್ ಮುಕ್ತ ಭಾರತ' ನಿರ್ಮಿಸುವ ಬಿಜೆಪಿ ನಾಯಕರ ಕನಸನ್ನು ಕಾಂಗ್ರೆಸ್ಸಿನ ಹಲವರು ತಮಗರಿಯದಂತೆ ತಾವೇ ನನಸಾಗಿಸುತ್ತಿದ್ದಾರೆ!

ಬಿಜೆಪಿ ವಿರೋಧಿ ರಾಜಕೀಯ ಶಕ್ತಿಗಳ ನಾಯಕತ್ವದ ಸ್ಥಾನವನ್ನು ಕಾಂಗ್ರೆಸ್ ಪಕ್ಷವು ರಾಜ್ಯ ಮಟ್ಟದಲ್ಲಿ ಬಲಿಷ್ಠವಾಗಿರುವ ಪಕ್ಷವೊಂದಕ್ಕೆ ಬಿಟ್ಟುಕೊಡಲಿದೆ ಎಂದು ಭಾಸವಾಗುತ್ತಿದೆ. ಕಾಂಗ್ರೆಸ್ ಇಂದು ಎದುರಿಸುತ್ತಿರುವ ಸವಾಲುಗಳಿಗೆ ಮೂರು ಆಯಾಮಗಳು ಇವೆ. ಇವುಗಳನ್ನು ಸಮಗ್ರವಾಗಿ ನಿಭಾಯಿಸಲು ಪ್ರಯತ್ನ ನಡೆಸದಿದ್ದರೆ ಪಕ್ಷದ ಭವಿಷ್ಯ ನಿಜಕ್ಕೂ ಮಸುಕಾಗಲಿದೆ.

ಮೊದಲನೆಯದು, ಗೆಲುವಿನ ದವಡೆಯಿಂದ ಸೋಲಿನತ್ತ ಜಾರುವ ಅನನ್ಯ ಕೌಶಲವೊಂದು ಕಾಂಗ್ರೆಸ್‌ಗೆ ಸಿದ್ಧಿಸಿರುವಂತಿದೆ! ಈಚೆಗಿನ ಎರಡು ಉದಾಹರಣೆಗಳನ್ನು ಗಮನಿಸೋಣ. ಅಸ್ಸಾಂನಲ್ಲಿ ಪ್ರತಿರೋಧ ಒಡ್ಡುವಲ್ಲಿ ಪಕ್ಷ ವಿಫಲವಾಯಿತು. ಬಿಜೆಪಿಯ ಐದು ವರ್ಷಗಳ ಅಧಿಕಾರ ಅವಧಿಯಲ್ಲಿ ಕಾಂಗ್ರೆಸ್ ಗಾಢ ನಿದ್ರೆಯಲ್ಲಿ ಇದ್ದಂತಿತ್ತು. ಚುನಾವಣೆ ಘೋಷಣೆಯಾಗುವ ತುಸು ಮೊದಲು ಕಾಂಗ್ರೆಸ್ ಎಚ್ಚೆತ್ತುಕೊಂಡಿತು. ರಾಜ್ಯ ವಿಧಾನಸಭೆಗೆ ಚುನಾವಣೆ ಘೋಷಣೆ ಆಗುತ್ತಿದ್ದ ಸಂದರ್ಭದಲ್ಲಿ ಕಾಂಗ್ರೆಸ್ಸಿಗರು ಎಂಟು ಪಕ್ಷಗಳ ಮಹಾ ಮೈತ್ರಿಕೂಟವನ್ನು ಕಟ್ಟಿದರು. ಈ ಮೈತ್ರಿಕೂಟದಲ್ಲಿ ಎಐಯುಡಿಎಫ್ ಕೂಡ ಇತ್ತು, ಎಡಪಕ್ಷಗಳೂ ಇದ್ದವು. ಹೀಗಿದ್ದರೂ ಈ ಮೈತ್ರಿಕೂಟವು ಟೇಕ್‌ಆಫ್ ಆಗಲೇ ಇಲ್ಲ ಎಂಬುದನ್ನು ಪ್ರಚಾರ ಅಭಿಯಾನವೇ ತೋರಿಸಿತು. ಮೈತ್ರಿಕೂಟವನ್ನು ಯಾವ ಯೋಜನೆಯೂ ಇಲ್ಲದೆ, ಬಹಳ ತಡವಾಗಿ ರೂಪಿಸಲಾಗಿತ್ತು. ಗೆದ್ದೇ ಗೆಲ್ಲಬೇಕು ಎಂಬ ಛಲ ಕಾಣಿಸುತ್ತಿರಲಿಲ್ಲ.

ಎರಡನೆಯ ನಿದರ್ಶನ ಪುದುಚೇರಿಯದ್ದು. ಅಲ್ಲಿ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಪಕ್ಷದಲ್ಲಿನ ಆಂತರಿಕ ಕಲಹವನ್ನು ಹತ್ತಿಕ್ಕಲು ಏನೂ ಮಾಡಲಿಲ್ಲ. ಆಡಳಿತಕ್ಕಿಂತ ಹೆಚ್ಚಿನ ಗಮನವನ್ನು ಮುಖ್ಯಮಂತ್ರಿಯು ಲೆಫ್ಟಿನೆಂಟ್ ಗವರ್ನರ್ ಜೊತೆ ನಡೆಸಿದ್ದ ಕದನದ ಮೇಲೆ ನೀಡಿತು. ಅಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೆ ಬಂದ ನಂತರ, ಚುನಾವಣೆಗೂ ಮೊದಲು ಕಾಂಗ್ರೆಸ್ ಪಕ್ಷವು ತನ್ನದೇ ಪಕ್ಷದ ಮಾಜಿ ಮುಖ್ಯಮಂತ್ರಿಯನ್ನು ಚುನಾವಣೆಯಲ್ಲಿ ಅಭ್ಯರ್ಥಿ ಎಂದು ಘೋಷಿಸದೇ ಇರಲು ತೀರ್ಮಾನಿಸಿತು. ಮಿತ್ರಪಕ್ಷಗಳಿಂದ ಈ ವಿಚಾರದಲ್ಲಿ ಒತ್ತಡ ಇದ್ದಿರಬಹುದು. ಆದರೆ ಚುನಾವಣೆ ಆರಂಭವಾಗುವುದಕ್ಕೂ ಮೊದಲೇ ಪಕ್ಷವು ಸೋಲನ್ನು ಒಪ್ಪಿಕೊಂಡಂತಿತ್ತು. ಇದು ಎನ್‌ಡಿಎ ಮೈತ್ರಿಕೂಟದ ಕೆಲಸವನ್ನು ಸುಲಭಗೊಳಿಸಿತು.

ಎರಡನೆಯದಾಗಿ, ಏಕಪಕ್ಷದ ಪ್ರಾಬಲ್ಯ ಇದ್ದ ಸಂದರ್ಭದಲ್ಲಿ ತಾವು ಆಡಳಿತ ನಡೆಸುತ್ತಿದ್ದೆವು ಎಂಬ 'ನಶೆ'ಯಿಂದ ಹೊರಬರಲು ಕಾಂಗ್ರೆಸ್ ನಾಯಕರಿಗೆ (ಬೇರೆ ಬೇರೆ ಹಂತಗಳಲ್ಲಿನ ನಾಯಕರಿಗೆ) ಸಾಧ್ಯವಾಗುತ್ತಿಲ್ಲ. ವಿರೋಧ ಪಕ್ಷದಲ್ಲಿ ಇರುವಾಗಲೂ ಅವರು, ತಾವು ಅಲ್ಪ ಅವಧಿಗೆ ಮಾತ್ರ 'ಸರ್ಕಾರದಿಂದ ಹೊರಗಡೆ ಇದ್ದೇವೆ', ಅಧಿಕಾರಕ್ಕೆ ಖಂಡಿತವಾಗಿಯೂ ಮರಳಲಿದ್ದೇವೆ ಎಂಬಂತೆ ವರ್ತಿಸುತ್ತಿದ್ದಾರೆ. ಕಾಂಗ್ರೆಸ್ಸಿನ ಹಲವರಿಗೆ, ಜನರ ಆಯ್ಕೆಯ ಪಕ್ಷವಾಗಿ ಅಧಿಕಾರಕ್ಕೆ ಮರಳುವುದಕ್ಕೆ ತಮ್ಮ ಪ್ರಯತ್ನ ಬೇಕು ಎಂದು ಅನಿಸುತ್ತಿಲ್ಲ. ಎದುರಾಳಿ ಪಕ್ಷದ ಅಧಿಕಾರ ಅವಧಿ ಪೂರ್ಣಗೊಂಡ ನಂತರ ತಾವು ಮತ್ತೆ ಅಧಿಕಾರಕ್ಕೆ ಬರುತ್ತೇವೆ ಎಂಬಂತೆ ವರ್ತಿಸುತ್ತಾರೆ. ಅಥವಾ ಎದುರಾಳಿ ಪಕ್ಷದ ತಪ್ಪುಗಳ ಪರಿಣಾಮವಾಗಿ ಜನ ತಮ್ಮನ್ನೇ ಅನಿವಾರ್ಯವಾಗಿ ಆಯ್ಕೆ ಮಾಡುತ್ತಾರೆ ಎಂದೂ ಭಾವಿಸಿದ್ದಾರೆ. ಪಕ್ಷದೊಳಗಿನ ಕಲಹವು ಇದನ್ನು ಸ್ಪಷ್ಟವಾಗಿ ಹೇಳುತ್ತದೆ.

ಎರಡು ಉದಾಹರಣೆಗಳ ಮೂಲಕ ಇದನ್ನು ಹೇಳಬಹುದು. ಕೇರಳದಲ್ಲಿ ಈಚೆಗೆ ಆಗಿರುವ ಬೆಳವಣಿಗೆಗಳು ಮೊದಲ ಉದಾಹರಣೆ. ಸಂಯುಕ್ತ ಪ್ರಜಾತಾಂತ್ರಿಕ ಒಕ್ಕೂಟದ (ಯುಡಿಎಫ್) ನಾಯಕನ ಸ್ಥಾನದಲ್ಲಿರುವ ಕಾಂಗ್ರೆಸ್, ನಾಲ್ಕು ದಶಕಗಳಿಂದ ಬಂದಿರುವ ಪದ್ಧತಿಯಂತೆ ಎದುರಾಳಿ ಮೈತ್ರಿಕೂಟದ ಅಧಿಕಾರ ಅವಧಿ ಮುಗಿದ ನಂತರ, ಜನ ತನ್ನ ಮೈತ್ರಿಕೂಟಕ್ಕೆ ಮತ್ತೆ ಅಧಿಕಾರ ನೀಡುತ್ತಾರೆ ಎಂದು ಭಾವಿಸಿತು. ಆದರೆ, ಪಕ್ಷದೊಳಗಿನ ಕಲಹ ಅದೆಷ್ಟು ತೀವ್ರವಾಗಿತ್ತೆಂದರೆ, ಮುಖ್ಯಮಂತ್ರಿ ಅಭ್ಯರ್ಥಿಯನ್ನೇ ಘೋಷಿಸಲು ಆಗಲಿಲ್ಲ. ಪಕ್ಷದೊಳಗಿನ ಒಂದು ಬಣವು, ಎದುರಾಳಿ ಬಣಕ್ಕೆ ಹಾನಿ ಮಾಡಲು ಪಣ ತೊಟ್ಟಂತಿತ್ತು. ಇಲ್ಲಿ ಮಧ್ಯಪ್ರದೇಶದ ಉದಾಹರಣೆಯನ್ನೂ ನೀಡಬಹುದು. ಸವಾಲಿನ ಚುನಾವಣೆಯನ್ನು ಎದುರಿಸಿ ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿಯಿತು. ಆದರೆ, ಪಕ್ಷದಲ್ಲಿನ ಆಂತರಿಕ ಕಚ್ಚಾಟ ಹಾಗೂ ನಾಯಕರ ಸೊಕ್ಕು ಪಕ್ಷಕ್ಕೆ ಅಧಿಕಾರದಲ್ಲಿ ಮುಂದುವರಿಯಲು ಅವಕಾಶ ನೀಡಲಿಲ್ಲ. ಸರ್ಕಾರದ ಆತ್ಮಘಾತುಕ ನಡೆಗಳು ಅಧಿಕಾರಕ್ಕೆ ಬಂದ ಮೊದಲ ದಿನದಿಂದಲೂ ಕಾಣುತ್ತಿದ್ದವು.

ಕೊನೆಯದಾಗಿ, ಪಕ್ಷ ಎದುರಿಸುತ್ತಿರುವ ನಾಯಕತ್ವದ ಗಂಭೀರ ಬಿಕ್ಕಟ್ಟಿನ ಬಗ್ಗೆ ಎರಡು ಮಾತು. ನಾಯಕತ್ವ-ಕ್ಕಾಗಿ ಗಾಂಧಿ ಕುಟುಂಬದ ಆಚೆಗೆ ನೋಟ ಹರಿಸಲು ಪಕ್ಷಕ್ಕೆ ಸಾಧ್ಯವೇ ಆಗುತ್ತಿಲ್ಲ. ಗಾಂಧಿ ಕುಟುಂಬದಲ್ಲಿಯೂ ನಾಯಕತ್ವವನ್ನು ವಹಿಸಿಕೊಂಡು, ಏಕ ಮನಸ್ಸಿನಿಂದ ಕೆಲಸ ಮಾಡಲು ರಾಹುಲ್ ಗಾಂಧಿ ಅವರು ಹಿಂದೇಟು ಹಾಕುತ್ತಿದ್ದಾರೆ. ರಾಜಕೀಯ ನಾಯಕತ್ವ ಅಂದರೆ ಹಗಲು–ರಾತ್ರಿ ಅದರ ಬಗ್ಗೆಯೇ ಗಮನ ನೀಡಬೇಕು, ಸಮಗ್ರ ದೃಷ್ಟಿಕೋನ ಹೊಂದಿರಬೇಕು. ಇವೆರಡೂ ಕಾಣುತ್ತಿಲ್ಲ.

ರಾಷ್ಟ್ರೀಯ ನಾಯಕರಿಗೆ ಚುನಾವಣೆಗಳನ್ನು ಗೆದ್ದುಕೊಡಲು ಸಾಧ್ಯವಾಗುತ್ತಿಲ್ಲ ಎಂಬುದು ಪಕ್ಷಕ್ಕೆ ಅರಿವಾದ ನಂತರ, ಜನಸಮೂಹದ ಬೆಂಬಲ ಹೊಂದಿರುವ, ರಾಜ್ಯ ಮಟ್ಟದಲ್ಲಿನ ನಾಯಕರನ್ನು ಸಶಕ್ತರನ್ನಾಗಿಸಬೇಕು. ಆದರೆ ಪಕ್ಷದಲ್ಲಿನ ನಾಯಕರು ಹಾಗೂ ಸರ್ಕಾರವನ್ನು ನಡೆಸುತ್ತಿರುವವರು ಪಕ್ಷದಲ್ಲಿನ ಬಂಡಾಯಗಾರರಂತೆ, ತಮ್ಮ ಎದುರಾಳಿಗಳನ್ನು ತುಳಿಯುವುದಕ್ಕೆ ಹೆಚ್ಚು ಗಮನ ನೀಡುತ್ತಿರುವವರಂತೆ ಕಾಣುತ್ತಾರೆ. ಪಕ್ಷದಲ್ಲಿನ ಎಲ್ಲರನ್ನೂ ಜೊತೆಯಾಗಿ ಕರೆದುಕೊಂಡು ಹೋಗುವ ಬಗ್ಗೆ ಗಮನ ಇಟ್ಟಿರುವವರಂತೆ ಕಾಣಿಸುತ್ತಿಲ್ಲ. ಬದಲಿಗೆ, ತಮ್ಮ ರಾಜಕೀಯ ಗುಂಪುಗಳನ್ನು ರಕ್ಷಿಸಿಕೊಳ್ಳುವುದಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿರುವಂತೆ ಕಾಣುತ್ತಿದೆ.

ಈಗ ಪ್ರಕಟವಾಗಿರುವ ಚುನಾವಣಾ ಫಲಿತಾಂಶವು ಕಾಂಗ್ರೆಸ್ ಪಾಲಿಗೆ ಎಚ್ಚರಿಕೆಯ ಕರೆಗಂಟೆ. ಈ ಎಚ್ಚರಿಕೆಯ ಗಂಟೆಯು ಗಟ್ಟಿಯಾಗಿ, ಸ್ಪಷ್ಟವಾಗಿ ಸದ್ದು ಮಾಡಿದೆ. ಗಂಟೆಯ ಸದ್ದನ್ನು ತಕ್ಷಣಕ್ಕೆ ಅಡಗಿಸಿ, ಎಲ್ಲವೂ ಸರಿಯಾಗಿದೆ ಎಂಬಂತೆ ಪಕ್ಷ ವರ್ತಿಸುತ್ತದೆಯೇ? ಆಳವಾಗಿ ಆತ್ಮಾವಲೋಕನ ನಡೆಸಬೇಕು, ಆಗ ಮಾತ್ರ ಜಯದ ಹಾದಿಗೆ ತಾನು ಮರಳಬಹುದು ಎಂಬುದನ್ನು ಒಪ್ಪಿಕೊಳ್ಳುವ ಮನಸ್ಸು ಪಕ್ಷಕ್ಕೆ ಇದೆಯೇ? ರಾಜಕೀಯವಾಗಿ ಅಸಂಗತ ಆಗಬಾರದು ಎಂದಾದಲ್ಲಿ ಈ ವಿಚಾರದಲ್ಲಿ ಆದಷ್ಟು ಬೇಗ ಕ್ರಮ ಕೈಗೊಳ್ಳಬೇಕು.



ಚುರುಮುರಿ



ಸುಮ್ಮನೆ ಹೆಂಗಿರ್ಲಿ...?

• ಸುಧೀಂದ್ರ

'ಮಾತಾಡಿ ತುಂಬಾ ದಿನಗಳಾದವು. ಹುಷಾರಾಗಿದೀಯಾ ತಾನೆ?' ಎನ್ನುತ್ತಲೇ ಒಳಗೆ ಬಂದ ಮಹದೇವ.

'ಹೋದ ವಾರ ನೀನು ಕೊಟ್ಟ ಸಜೆಷನ್ ಚೆನ್ನಾಗಿ ವರ್ಕಾಯ್ತು. ರಾತ್ರಿ ದಿಂಬಿಗೆ ತಲೆಯಿಟ್ಟೊಡನೆ ನಿದ್ದೆ ಬರ್ತಿದೆ. ಬೆಳಗ್ಗೆಯ ತನಕ ಎಚ್ಚರವಾಗ್ತಿಲ್ಲ' ಎಂದೆ.

ನಮ್ಮಿಬ್ಬರ ಮಾತುಕತೆ ಕೇಳಿಸಿಕೊಂಡ ಮಡದಿ, 'ನಮ್ಮ ಮನೆಯಲ್ಲೀಗ ನ್ಯೂಸ್ ಕರ್ಫ್ಯೂ ಜಾರಿಯಲ್ಲಿದೆ. ಅದನ್ನೇ ಲಾಕ್‌ಡೌನ್ ರೀತಿ ಮುಂದಿನ ವಾರ ವಿಸ್ತರಿಸಲೂಬಹುದು' ಎನ್ನುತ್ತಲೇ ಕಾಫಿ ಬಟ್ಟಲುಗಳೊಂದಿಗೆ ಬಂದಳು.

ಯಾರ ಹಿತವಚನಗಳನ್ನು ಪಾಲಿಸದಿದ್ದರೂ ಗೆಳೆಯ ಮಹದೇವನ ಮಾತುಗಳನ್ನು ಮಾತ್ರ ನಾನು ಆಗಾಗ್ಗೆ ಕೇಳ್ತೀರ್ತೀನಿ. ಕಳೆದ ಬಾರಿ ಅವನು ಮನೆಗೆ ಬಂದಿದ್ದಾಗ, ರಾತ್ರಿಯ ಹೊತ್ತು ಕಣ್ಣಿಗೆ ನಿದ್ದೆಯೇ ಹತ್ತುತ್ತಿಲ್ಲವೆಂದಿದ್ದೆ. 'ಕೊರೊನಾ ನ್ಯೂಸ್ ಎಫೆಕ್ಟ್. ಒಂದು ವಾರ ಟೀವಿ ನ್ಯೂಸ್ ನೋಡ್ಬೇಡ' ಎಂಬ ಸಲಹೆಯನ್ನು ಅವನೇ ಕೊಟ್ಟಿದ್ದ.

'ನೀವು ಹೇಳಿದಾಗಿನಿಂದ ನಮ್ಮನೆ ಟೀವಿಯಲ್ಲಿ ಕೊರೊನಾ ರಣಕೇಕೆ ಹಾಕೋದು ನಿಲ್ಸಿದೆ' ಎಂದಳು ಮಡದಿ.

'ಅದರ ಬದಲು, ಒಂದು ವಾರವಾದರೂ ಅರಿಶಿಣಶಾಸ್ತ್ರವನ್ನೇ ಮುಗಿಸಿಲ್ಲದ 'ಮಂಗಳಗೌರಿ ಮದುವೆ'ಯ ನೆಂಟರ ಗಲಾಟೆಯನ್ನು ನಾನು ಕೇಳಬೇಕಿದೆ' ಎಂದೆ. 'ಸಂಜೆ ಆಗ್ತಿದ್ದಂತೆ, ಈ ಸಲ ಕಪ್ ನಮ್ದೇ ಅನ್ನೋ ನಿಮ್ಮ ಕಿರುಚಾಟದ್ಮುಂದೆ ಅದೇನೂ ಅಲ್ಲ' ಅನ್ನುತ್ತಾ ಮಡದಿ ನನ್ನ ಬಾಯಿ ಮುಚ್ಚಿಸಿದಳು.

ನಮ್ಮ ಪ್ರೇಮ ಕಲಹವನ್ನಾಲಿಸುತ್ತಿದ್ದ ಮಹದೇವ, 'ಎಲ್ಲಾ ಸರಿ. ಆದರೆ ಫೇಸ್‌ಬುಕ್, ವಾಟ್ಸ್‌ಆ್ಯಪ್‌ಗಳಲ್ಲಾದರೂ ನೀನು ಸ್ವಲ್ಪ ಆ್ಯಕ್ಟಿವ್ ಆಗಿರು, ಇಲ್ಲಾಂದ್ರೆ ನಮಗೆಲ್ಲಾ ಗಾಬರಿಯಾಗತ್ತೆ' ಎಂದ. 'ಇದ್ದಕ್ಕಿದ್ದಂತೆ ಆ್ಯಕ್ಟಿವಿಟಿ ನಿಂತೋದ್ರೆ, ನಿನಗೆ ಕೊರೊನಾ ಜತೆ ಹೊಸತಾಗಿ ಲಿವ್-ಇನ್-ರಿಲೇಶನ್‌ಶಿಪ್ ಶುರುವಾಗಿರಬಹುದೂಂತ ಜನ ಭಾವಿಸಿಬಿಡ್ತಾರೆ' ಅಂದ.

'ಸರಿ' ಎಂದವನೇ ಸ್ಟೇಟಸ್ ಅಪ್‌ಡೇಟ್ ಹಾಕಲು ಫೋನ್ ಕೈಗೆತ್ತಿಕೊಂಡೆ. ಅಷ್ಟರಲ್ಲಿ ಮಡದಿಯ ಫೋನ್‌ನಿಂದ 'ನಿನ್ನಾ ನೋಡಿ ಸುಮ್ಮನೆ ಹೆಂಗಿರ್ಲಿ' ಎಂಬ ಹೊಸ ರಿಂಗ್‌ಟೋನ್ ಗುನುಗುನಿಸಿತು.

ಸಂಗತ

ಪಡಿತರ ವಲಯಕ್ಕಿರಲಿ 'ರಾಗಿ ಭಾಗ್ಯ'

ಪಡಿತರ ಚೀಟಿದಾರರಿಗೆ ಬಹೂಪಯೋಗಿ ರಾಗಿಯ ಬದಲು ಪೂರ್ತಿ ಅಕ್ಕಿಯನ್ನೇ ಕೊಡಿ ಎನ್ನುವ ಬೇಡಿಕೆ ಎಷ್ಟು ಸರಿ?

• ಹೊರೆಯಾಲ ದೊರೆಸ್ವಾಮಿ

ರಾಜ್ಯ ಸರ್ಕಾರವು ಬಿಪಿಎಲ್ ಪಡಿತರ ಚೀಟಿದಾರರಿಗೆ ಘಟಕ ಒಂದಕ್ಕೆ 5 ಕೆ.ಜಿ. ಅಕ್ಕಿಗೆ ಬದಲಾಗಿ 2 ಕೆ.ಜಿ. ಅಕ್ಕಿ ಮತ್ತು 3 ಕೆ.ಜಿ. ರಾಗಿ, ಉತ್ತರ ಕರ್ನಾಟಕ ಭಾಗಕ್ಕೆ ರಾಗಿಯ ಬದಲು ಜೋಳ ಕೊಡಲು ತೀರ್ಮಾನಿಸಿದೆ. ಈ ಬಗ್ಗೆ ತಕರಾರು ಎತ್ತಿರುವ ಕೆಲವರು, ಮೊದಲಿನಂತೆ 5 ಕೆ.ಜಿ. ಅಕ್ಕಿಯನ್ನೇ ಕೊಡಬೇಕು ಎಂದಿದ್ದಾರೆ.

ರಾಗಿ ನಮ್ಮ ನಾಡಿನ, ವಿಶೇಷವಾಗಿ ದಕ್ಷಿಣ ಕರ್ನಾಟಕದ ಮುಖ್ಯ ಆಹಾರ. ರಾಗಿ ಮಾತ್ರವಲ್ಲ ನವಣೆ, ಸಾಮೆ, ಕಂಬು, ಅರ್ಕ ಈ ಕೆಲವಾರು 'ಚಿಕ್ಕುಚಿಲವಾನ' ಕುಟುಂಬ ವರ್ಗಕ್ಕೆ ಸೇರಿದ ಧಾನ್ಯಗಳು (ಈಗ ನಗರೀಕರಣಗೊಂಡು 'ಸಿರಿಧಾನ್ಯ' ಎಂಬ ಅಪಭ್ರಂಶ ಪದವಾಗಿದೆ) ನಮ್ಮ ನಾಡಿನ ಬೇಸಾಯ ಬದುಕಿನ ಅವಿಭಾಜ್ಯ ಅಂಗಗಳಾಗಿವೆ. ರಾಗಿ ಅಂಬಲಿ, ರಾಗಿ ರೊಟ್ಟಿ, ರಾಗಿ ದೋಸೆ, ರಾಗಿ ಕಡಬು, ರಾಗಿ ಹುರಿಟ್ಟು, ರಾಗಿ ಹಲ್ವ, ರಾಗಿ ಬಿಸ್ಕತ್ತು, ರಾಗಿ ಪೇಯ (ರಾಗಿ ಮಾಲ್ಟ್), ರಾಗಿ ಮುದ್ದೆ ಹೀಗೆ ನಾನಾ ಪ್ರಕಾರಗಳಲ್ಲಿ ಆಹಾರವಾಗಿ ಅದನ್ನು ಬಳಸುವ ಪದ್ಧತಿ ಸಮಾಜದಲ್ಲಿ ಇದೆ. ಅಷ್ಟೇ ಅಲ್ಲ, ಹಣೆಗೆ ಬೊಟ್ಟು ಇಡುವ ಸಾದು ತಯಾರಿಕೆಗೂ ಅದು ಈ ಹಿಂದೆ ವ್ಯಾಪಕವಾಗಿ ಬಳಕೆ-ಯಾಗುತ್ತಿತ್ತು. 'ಕಾಡಿಗೆ' ತಯಾರಿಸುವಲ್ಲೂ ಅದು ಮೂಲ ಕಚ್ಚಾ ಪದಾರ್ಥವಾಗುತ್ತಿತ್ತು.

ಹೀಗೆ ಬಹೂಪಯೋಗಿಯಾದ ರಾಗಿ ನಮ್ಮ ದೇಶದ ಹವಾಮಾನಕ್ಕೆ ಅನುಗುಣವಾಗಿ ಬೆಳೆದು ಜನರ ಬದುಕಿಗೆ ಬೆನ್ನೆಲುಬಾಗಿದೆ. ರಾಗಿಯು ತಂಪಿನ ಧಾನ್ಯವಾಗಿದ್ದು, ದೇಶದ ಮತ್ತು ದೇಹದ ಉಷ್ಣತೆಗೆ ಎದುರಾಗಿ ನಿಲ್ಲುವ ಗುಣವನ್ನು ಸಹಜಸ್ವಭಾವವಾಗಿ ಹೊಂದಿದೆ. ಈ ಇಂಡೊ- ಆಫ್ರಿಕ ಚಿಕ್ಕುಚಿಲವಾನವನ್ನು ಮತ್ತಷ್ಟು ಉತ್ಕೃಷ್ಟ ಮಾಡಿ 'ಅನ್ನಪೂರ್ಣ' ಎಂಬ ಹೊಸ ತಳಿಯನ್ನು ಕಂಡುಹಿಡಿದವರು ನಮ್ಮವರೇ ಆದ ದಿವಂಗತ ರಾಗಿ ಲಕ್ಷ್ಮಣಯ್ಯನವರು. ಬಡವರ ಆಹಾರದ ಮೌಲ್ಯವರ್ಧಿತ ತಳಿಯನ್ನು ಸಂಶೋಧಿಸಿದ ಪ್ರಾಂಜಲ ಮನಸ್ಸಿನ ದಲಿತ ವಿಜ್ಞಾನಿ.

ರಾಗಿ ನಮ್ಮ ಜನಜೀವನದಲ್ಲಿ ಬೆರೆತುಹೋಗಿರುವುದನ್ನು, ನಾನಾ ಜನಪದೀಯ ಹೇಳಿಕೆಗಳು ಸಮರ್ಥಿಸುತ್ತವೆ. 'ರಾಗಿ ಉಂಡೋನು ನಿರೋಗಿ', 'ರಾಗಿ ಮುದ್ದೆ ಹೊಂಗೆ ನೆಳ್ಳಿನ ನಿದ್ದೆ', 'ರಾಗಿ ಮುದ್ದೆ ಕಣ್ತುಂಬ ನಿದ್ದೆ', 'ಹಿಟ್ಟಂ ಉಂಡಂ ಬೆಟ್ಟಂ ಕಿತ್ತಿಟ್ಟಂ'... ಈ ಎಲ್ಲ ಮಾತುಗಳು ರಾಗಿಯೊಂದಿಗಿರುವ ನಮ್ಮ ಜನಪದರ ತಾದಾತ್ಮ್ಯ ಭಾವವನ್ನು ಹೇಳುತ್ತವೆ.

ರಾಗಿಯು ಸಾಮಾನ್ಯವಾಗಿ ಕಪ್ಪಾಗಿರುವುದರಿಂದಲೊ ಏನೊ (ಕೆಂಪು ರಾಗಿಯೂ ಇದೆ) ಅದನ್ನು ಕೀಳಾಗಿ ಪರಿಗಣಿಸಿರಬಹುದೆಂದು ತೋರುತ್ತದೆ. ಆದುದರಿಂದಲೇ, ತನ್ನ ಸಮಕಾಲೀನ ಸಮಾಜವನ್ನು ಚಿಕಿತ್ಸಕ ದೃಷ್ಟಿಕೋನದಿಂದ ನೋಡಿದ ಹರಿದಾಸರಲ್ಲಿ ಪ್ರಮುಖರಲ್ಲೊಬ್ಬರಾದ ಕನಕದಾಸರು ಜಾತಿ ಮೇಲುಕೀಳುಗಳ ತರತಮ ಭೇದವನ್ನು ಅಕ್ಕಿ (ವ್ರೀಹಿ) ಮತ್ತು ರಾಗಿಯ (ರಾಘವ) ಕಲಹದ ಒಂದು ರೂಪಕ ಕಾವ್ಯವಾಗಿ 'ರಾಮಧಾನ್ಯ' ಎಂಬ ವಿಶಿಷ್ಟ ಕಾವ್ಯವನ್ನು ರಚಿಸಿರುವರು. 'ರಾಮಧಾನ್ಯ' ಎಂಬ ಹೆಸರಿನ ಈ ಕೃತಿಯ ಮೂಲಕ, ಕೀಳೆಂಬ ಕುಲದ ಪ್ರತಿನಿಧಿಯಾದ ರಾಗಿಯ ಮಹತ್ವವನ್ನು ಸಾರುವುದರೊಂದಿಗೆ ಕನಕದಾಸರು ಅದರ ಶ್ರೇಷ್ಠತೆಯನ್ನು ಎತ್ತಿ ಹಿಡಿದು, ಕೀಳೆಂಬ ಜಾತಿ ಮತ್ತು ದುರ್ಬಲ ವರ್ಗಸಮುದಾಯಗಳ ಆತ್ಮವಿಶ್ವಾಸಕ್ಕೆ ಕಾರಣರಾಗಿದ್ದಾರೆ.

ಇಂಥ ಬಡಜನರ ಪ್ರತಿನಿಧಿಯಾದ ರಾಗಿಯ ಬದಲು ಪಡಿತರ ಚೀಟಿಯುಳ್ಳವರಿಗೆ ಪೂರ್ತಿ ಅಕ್ಕಿಯನ್ನೇ ಕೊಡಿ ಎನ್ನುವವರ ಒಲವು ಯಾರ ಪರವಾಗಿದೆ ಎಂದು ಯಾರಿಗಾದರೂ ಅನುಮಾನ ಬರುತ್ತದೆ. ಅವರೇನು ಬಿಳಿ ಬಣ್ಣದ ಶ್ರೇಷ್ಠತೆಯನ್ನು ಅಪ್ಪಿಕೊಂಡಿರುವವರೋ? ಅಥವಾ ಈ ಬಗ್ಗೆ ಯಾವ ಚಿಂತನೆಯೂ ಇಲ್ಲದೆ ಸುಮ್ಮನೆ ಮಕ್ಕೀಕಮಕ್ಕಿಯಾಗಿ ಹೇಳಿರುವರೋ? ಶ್ರೇಷ್ಠತೆಯ ವ್ಯಸನ ಇವರಿಗೇಕೆ ಬಂತು? ಅದು ಸಾಹಿತ್ಯ ವಲಯದಲ್ಲಿ ಒಂದು ಕಾಲದಲ್ಲಿ ಮೆರೆದಾಡಿ ನಾಪತ್ತೆಯಾಯಿತು. ಈಗ ಅದರ ಮುಂದುವರಿಕೆ ಪಡಿತರ ವಲಯಕ್ಕೇಕೆ ಕಾಲಿಟ್ಟಿತು? ರಾಗಿ ಬೆಳೆಯುವುದನ್ನು ಕೀಳೆಂದು ಪರಿಗಣಿಸುತ್ತ ಭತ್ತ ಬೆಳೆಗಾರರತ್ತ ತಮ್ಮ ಚಿತ್ತ ಹರಿಸಿರುವರೊ? ಹಳೆ ಮೈಸೂರು ಜಿಲ್ಲೆಯ (ಇಡೀ ಮಂಡ್ಯ ಜಿಲ್ಲೆ + ಚಾಮರಾಜನಗರ ಜಿಲ್ಲೆ + ಇಂದಿನ ಮೈಸೂರು ಜಿಲ್ಲೆ) ಪ್ರಮುಖ ಆಹಾರ ರಾಗಿ, ಜೋಳ, ಹುರುಳಿ, ತಡಗುಣಿ ಇಂಥವೇ ಆಗಿದ್ದವು ಎಂಬುದು ನಮಗೆ ನೆನಪಿದ್ದರೆ ಸಾಕು.



ಈ ಎಲ್ಲ ಕಾರಣಗಳಿಂದ ಸರ್ಕಾರವು ಪ್ರತಿಯೊಂದು ಜಿಲ್ಲೆಗೂ ಆಯಾ ಪ್ರದೇಶದ ಮೂಲ ಧಾನ್ಯವನ್ನೇ ಚೀಟಿದಾರರಿಗೆ ಅಧಿಕವಾಗಿ ಕೊಡಲಿ. ಅಕ್ಕಿಯನ್ನು ತಿನ್ನುವ ನಾಲಿಗೆ ರುಚಿ, ಅದನ್ನು ಅಪೇಕ್ಷಿಸಿದರೆ ಒಂದಿಷ್ಟು ಅದನ್ನೂ ಕೊಡಲಿ. ಯಾಕೆಂದರೆ 'ಊಟ ತನ್ನಿಚ್ಛೆ, ನೋಟ ಪರರಿಚ್ಛೆ'. ಅಂತಿಮವಾಗಿ ಸರ್ಕಾರವು ಸ್ಥಳೀಯ ಬೆಳೆಗಳನ್ನು ಪ್ರೋತ್ಸಾಹಿಸಲಿ. ಇದನ್ನು ವಿರೋಧಿಸುವವರು ಈ ಬಗ್ಗೆ ಸಕಾರಾತ್ಮಕವಾಗಿ ಆಲೋಚಿಸಲಿ.

ಈ 'ಅನ್ನ ಭಾಗ್ಯ' ಎಂಬ ಪದಗುಚ್ಛವೇ ಶ್ರೇಷ್ಠತೆಯ ಸಂಕೇತವಲ್ಲವೇ? ಯಾಕೆ 'ರಾಗಿ ಭಾಗ್ಯ', 'ಜೋಳ ಭಾಗ್ಯ' ಅಲ್ಲ? ಕೀಳರಿಮೆಯೆಂದೋ? ನೇರವಾಗಿ ಕೇಳುವುದಾದರೆ, ದೇಶದಲ್ಲಿ ದುಡಿಮೆಯ ಅವಕಾಶ ಹೆಚ್ಚಾಗಿ ಇಲ್ಲದ್ದರಿಂದ, ರಾಜ್ಯದಲ್ಲಿರುವ ಎಲ್ಲ ಭಾಗ್ಯಗಳು 'ದೌರ್ಭಾಗ್ಯ'ದ ಕುರುಹಲ್ಲವೇ?

ವಾಚಕರ ವಾಣಿ

ಬೆಡ್ ಬ್ಲಾಕಿಂಗ್: ನಿಷ್ಪಕ್ಷಪಾತ ತನಿಖೆ ಅಗತ್ಯ

ಕೋವಿಡ್ ಎರಡನೇ ಅಲೆಯ ಹೊಡೆತದಿಂದ ಇಡೀ ರಾಜ್ಯ ತಲ್ಲಣಗೊಂಡಿರುವ ಹೊತ್ತಿನಲ್ಲಿ ಮಂಗಳವಾರ ಮಧ್ಯಾಹ್ನ ಮಾಧ್ಯಮಗಳು ಬಿತ್ತರಿಸಿದ ಸುದ್ದಿ ಅತ್ಯಂತ ಆಘಾತಕಾರಿಯಾಗಿತ್ತು. ಸಂಸದ ತೇಜಸ್ವಿ ಸೂರ್ಯ ಮತ್ತು ಅವರ ತಂಡ 'ಬೆಡ್ ಬ್ಲಾಕಿಂಗ್'ನಂತಹ ಭ್ರಷ್ಟಾಚಾರದ ಕರಾಳ ಮುಖವನ್ನು ಬಯಲಿಗೆ ತಂದಿದೆ. ಬೆಂಗಳೂರಿನಲ್ಲಿ ಹೆಚ್ಚಿನ ಮನೆಗಳು ಸೋಂಕಿತರಿಂದ, ಸಾವು– ನೋವಿನಿಂದ ತುಂಬಿರುವ ಹೊತ್ತಿನಲ್ಲಿ ಬಿಬಿಎಂಪಿ ಸಿಬ್ಬಂದಿ 'ಉರಿಯುತ್ತಿರುವ ಮನೆಯ ಗಳ ಹಿರಿಯುವ ಕೆಲಸ' ಮಾಡಿರುವುದು ಅತ್ಯಂತ ಅಮಾನವೀಯ.

ಸರ್ಕಾರ ಇನ್ನಾದರೂ ತನ್ನ ಹೊಣೆ ಅರಿತು ನಿಷ್ಪಕ್ಷಪಾತವಾದ ತನಿಖೆ ನಡೆಸಲಿ. ಈ ಕೃತ್ಯದಲ್ಲಿ ಶಾಮೀಲಾದ ಎಲ್ಲರನ್ನೂ ಶಿಕ್ಷಿಸಲಿ. ಬೆಂಗಳೂರಿನಲ್ಲಿ ಆಕ್ಸಿಜನ್ ಸೌಲಭ್ಯವಿರುವ ಹಾಸಿಗೆ ಸಿಗದೆ ಸತ್ತವರ ಆತ್ಮಕ್ಕೆ ಆ ಮೂಲಕವಾದರೂ ನ್ಯಾಯ ಸಿಗುವಂತಾಗಲಿ.

ಡಾ. ಅರ್ಚನಾ ಆರ್., ಬೆಂಗಳೂರು

ಬಂಗಾಳ: ಬಲಗೊಳ್ಳಬೇಕಿದೆ ಪ್ರಜಾಪ್ರಭುತ್ವ ವ್ಯವಸ್ಥೆ

ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ಚುನಾವಣೋತ್ತರ ಹಿಂಸಾಚಾರ ಅತ್ಯಂತ ಖಂಡನೀಯ. ದೇಶ ಈಗ ಕೊರೊನಾ ಸೋಂಕಿನ ದಾಳಿಯಿಂದ ಹೈರಾಣಾಗಿದೆ. ಪಶ್ಚಿಮ ಬಂಗಾಳದಲ್ಲಿ ಅಸ್ತಿತ್ವಕ್ಕೆ ಬಂದಿರುವ ಮಮತಾ ಬ್ಯಾನರ್ಜಿ ಅವರ ನೇತೃತ್ವದಲ್ಲಿನ ಹೊಸ ಸರ್ಕಾರ ದ್ವೇಷ ಭಾವನೆ ತೊರೆದು, ಈ ಸಂಕಷ್ಟದ ಸಂದರ್ಭದಲ್ಲಿ ಶಾಂತಿ ಕಾಪಾಡಲು ತುರ್ತು ಕ್ರಮ ತೆಗೆದುಕೊಳ್ಳಬೇಕು. ಈ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಗೊಳಿಸಿ ಜನರ ಮನಸ್ಸನ್ನು ಗೆಲ್ಲಬೇಕು.

ಯಲುವಹಳ್ಳಿಸೊಣ್ಣೇಗೌಡ, ಚಿಕ್ಕಬಳ್ಳಾಪುರ

ಜನಪ್ರತಿನಿಧಿಗಳು ಕಾರ್ಯೋನ್ಮುಖರಾಗಲಿ

ಕೊರೊನಾ ಎರಡನೆಯ ಅಲೆಗೆ ಈಗಾಗಲೇ ಸಾವಿರಾರು ಮಂದಿಯನ್ನು ಕಳೆದುಕೊಂಡಿದ್ದೇವೆ. ಇಂತಹ ಸಂದರ್ಭದಲ್ಲಿ ಜನರಿಗೆ ಧೈರ್ಯ ತುಂಬುವ, ಅವರಲ್ಲಿ ಸೂಕ್ತ ಜಾಗೃತಿ ಮೂಡಿಸುವ, ಲಸಿಕೆ ನೀಡಿಕೆ ಕಾರ್ಯ ಚುರುಕುಗೊಳ್ಳುವಂತೆ ನೋಡಿಕೊಳ್ಳುವ ವ್ಯವಸ್ಥೆಯನ್ನು ಜನಪ್ರತಿನಿಧಿಗಳು ಸಮರೋಪಾದಿಯಲ್ಲಿ ಮಾಡಬೇಕಾಗಿದೆ. ಆಗಲೇ ಜನರಿಗೆ ಜನಪ್ರತಿನಿಧಿಗಳ ಮೇಲೆ ನಂಬಿಕೆ ಬರುವುದು. ಅದೇ ರೀತಿ ಕೋವಿಡ್ ಅನ್ನು ಎದುರಿಸುವ ಸಾಮರ್ಥ್ಯ ಮತ್ತು ಧೈರ್ಯ ಕೂಡ ಬರುವುದು.

ಯಾಸೀನ್ ಬಂಗೇರಕಟ್ಟೆ, ಬೆಳ್ತಂಗಡಿ

ಅರ್ಹತಾ ಪರೀಕ್ಷೆ: ಸ್ಥಳೀಯ ಭಾಷೆಗಿರಲಿ ಆದ್ಯತೆ

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ), ರಾಜ್ಯದಲ್ಲಿನ ಸುಮಾರು 400 ಕ್ಲರ್ಕ್ (ಜೂನಿಯರ್ ಅಸೋಸಿಯೇಟ್) ಹುದ್ದೆಗಳಿಗೆ ಇತ್ತೀಚೆಗೆ ಅರ್ಜಿ ಆಹ್ವಾನಿಸಿದೆ. ಅರ್ಹತಾ ಪರೀಕ್ಷೆಯು ಬರೀ ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಪ್ರಾಥಮಿಕ ಮತ್ತು ಮುಖ್ಯ ಪರೀಕ್ಷೆ ಹಂತಗಳಲ್ಲಿ ನಡೆಯಲಿದೆ. ಸ್ಪರ್ಧಾತ್ಮಕ ಪರೀಕ್ಷೆಗಳು ಅವರವರ ಮಾತೃಭಾಷೆಯಲ್ಲಿ ನಡೆದರೆ ಪ್ರಶ್ನೆಗಳು ಸ್ಪಷ್ಟವಾಗಿ ಅರ್ಥವಾಗಿ, ಅಭ್ಯರ್ಥಿಯು ಸಮರ್ಪಕವಾದ ಉತ್ತರವನ್ನು ಬರೆಯಲು ಸಾಧ್ಯವಾಗುತ್ತದೆ. ಪರೀಕ್ಷೆಯ ಅಧಿಸೂಚನೆಯಲ್ಲಿ ಒಂದೆಡೆ, ಸ್ಥಳೀಯ ಭಾಷೆಯ ಜ್ಞಾನ ಅತ್ಯವಶ್ಯಕ ಎಂಬ ಷರಾ ಹಾಕಿ, ಇನ್ನೊಂದೆಡೆ ಸ್ಥಳೀಯ ಭಾಷೆಯಲ್ಲಿ ಪರೀಕ್ಷೆಯನ್ನೇ ನಡೆಸದಿರುವುದು ಅಕ್ಷಮ್ಯ.

ಕೋವಿಡ್‌ನ ಈ ಸಂಕಷ್ಟದ ಸ್ಥಿತಿಯಲ್ಲಿ ₹ 750 ಪರೀಕ್ಷಾ ಶುಲ್ಕ ದುಬಾರಿ ಎನಿಸಿದ್ದು ನಿರುದ್ಯೋಗಿಗಳು, ಉದ್ಯೋಗ ಆಕಾಂಕ್ಷಿಗಳಿಗೆ ಭರಿಸಲು ಕಷ್ಟವಾಗುತ್ತದೆ. ಹೀಗಾಗಿ ರಾಜ್ಯ ಭಾಷೆಯಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡುವುದರ ಜೊತೆಗೆ ಪರೀಕ್ಷಾ ಶುಲ್ಕವನ್ನು ಕಡಿಮೆ ಮಾಡುವುದು ಒಳ್ಳೆಯದು.

ಸರ್ದಾರ್ ಎಂ. ತನಾಝ್, ಅರಸೀಕೆರೆ

ಜನ ಸುಮ್ಮನೆ ಯಾಕೆ ಗುಳೆ ಹೋಗುತ್ತಾರೆ?

ಸಾಮಾನ್ಯ ಜನ ಸುಮ್ಮ ಸುಮ್ಮನೆ ಯಾಕೆ ಗುಳೆ ಹೋಗುತ್ತಾರೆ?– ಪ್ರತೀ ಸರ್ಕಾರವೂ ಈ ಪ್ರಶ್ನೆಯನ್ನು ತುರ್ತಾಗಿ, ಪ್ರಾಮಾಣಿಕವಾಗಿ ಆಂತರ್ಯದಲ್ಲಿ ಕೇಳಿಕೊಳ್ಳಬೇಕಾಗಿದೆ. ಕಳೆದ ವರ್ಷವೂ ಕೊರೊನಾ ಧುತ್ತೆಂದು ಎರಗಿದಾಗ ಇಂಥದ್ದೇ ಪ್ರಶ್ನೆ ಉದ್ಭವಿಸಿತ್ತು. ಗ್ರಾಮಾಂತರ ಪ್ರದೇಶಗಳಿಂದ ಕೆಲಸ ಹುಡುಕಿಕೊಂಡು ಬಂದ ಜನ ತಮ್ಮ ಹೊಟ್ಟೆಪಾಡಿಗಾಗಿ ನಗರಾಂತರ್ಗತ ಜೀವನದ ಕ್ಲಿಷ್ಟಕರ ವಿಷಮ ಸನ್ನಿವೇಶಗಳಿಗೆ ಹೊಂದಿಕೊಂಡು ಬದುಕಿನ ನಿರ್ವಹಣೆ ಮಾಡುತ್ತಾ ಹೇಗೆ ಹೇಗೋ ಮುಂದು ಸಾಗಿದ್ದರು. ಇಂಥ ಪ್ರಶಾಂತವಾದ ಮಾಮೂಲಿನ ಪರಿಸರಕ್ಕೆ ಕಂಡರಿಯದ ಕೇಳರಿಯದ ಸೋಂಕೊಂದು ಧುತ್ತೆಂದು ಬಂದು ಈಗ ತಲ್ಲಣ. ಉಗುಳುವ ಹಾಗಿಲ್ಲ; ನುಂಗುವ ಹಾಗೂ ಇಲ್ಲ.

ಹಳ್ಳಿಗಾಡಿನ ಕಡೆಯಿಂದ ಅಲ್ಪಸ್ವಲ್ಪ ವಿದ್ಯಾವಂತ, ಅವಿದ್ಯಾವಂತ ಜನ ಪಟ್ಟಣಕ್ಕೆ ಬಂದದ್ದೇ ಜಾಸ್ತಿ. ಈ ಬೃಹತ್ ಶಹರಗಳು ತಮ್ಮ ಕಬಂಧ ಬಾಹುಗಳಿಂದ ಬಂಧಿಸಿ ಅನ್ನ, ಅಕ್ಷರ, ಆರೋಗ್ಯ, ಆಶ್ರಯಗಳನ್ನೇ ತಕ್ಕಮಟ್ಟಿಗೆ ಸಹಸ್ರ ಸಹಸ್ರ ಜನಕ್ಕೆ ನೀಡಿದ್ದು ಸುಳ್ಳಲ್ಲ. ಅವರವರ ಆಶೋತ್ತರಗಳಿಗೆ ಅನುಗುಣವಾಗಿ ಅಲ್ಲದಿದ್ದರೂ ಅವರವರ ಯೋಗ್ಯತಾನುಸಾರ ಅವರೆಲ್ಲರೂ ತಮ್ಮನ್ನು ತಾವು ಇಲ್ಲಿ ತೊಡಗಿಸಿಕೊಂಡಿದ್ದರು. ಇಲ್ಲಿ ಕೊಂಚಮಟ್ಟಿಗೆ 'ಆನಂದದ ಜಿಂದಗಿ'ಯನ್ನೇ ದಕ್ಕಿಸಿಕೊಂಡಿದ್ದರು. ಇಂಥ ಸನ್ನಿವೇಶಕ್ಕೆ ಧುತ್ತೆಂದು ಎರಗಿದ್ದು ಕೊರೊನಾ ಸೋಂಕು. ಆ ಆಕ್ರಮಣಕ್ಕೆ ತನ್ಮೂಲಕ ಸಂಭವಿಸುತ್ತಿರುವ ಸಾವುಗಳಿಗೆ ತತ್ತರಿಸಿದರು ನಮ್ಮ ಜನ.

ಈ ವಿಪತ್ಕಾಲಕ್ಕೆ ಸರ್ಕಾರ ಅನಿವಾರ್ಯವಾಗಿ ಕಳೆದ ವರ್ಷ ಲಾಕ್‌ಡೌನ್ ಮಾಡಬೇಕಾಯಿತು. ಈಗಲೂ ಲಾಕ್‌ಡೌನ್ ಪದ ಬಳಸದೇ ಹೋದರೂ ವಿಧಿಸಿರುವ ನಿರ್ಬಂಧಗಳು ಲಾಕ್‌ಡೌನ್‌ನಷ್ಟೇ ಬಿಗಿಯಾಗಿವೆ. ಇದರಿಂದ ಶ್ರೀಸಾಮಾನ್ಯರ ಬದುಕಿನ ದುಡಿಮೆಗೆ ಪೆಟ್ಟು ಬಿತ್ತು. ಕೂಲಿನಾಲಿ ಮಾಡಿ ಬದುಕಲು ಜನರ ವ್ಯಾವಹಾರಿಕ ಬದುಕಿಗೇ ಬೀಗ ಬಿದ್ದಿದೆ.

ಇಂಥ ಅಸಾಮಾನ್ಯ ಸನ್ನಿವೇಶದ ವಿಕಟ ಸಂದರ್ಭದಲ್ಲಿ ಮಾಡುವುದೇನಿದೆ? ಹೊಟ್ಟೆ ಕೇಳಬೇಕಲ್ಲ. ನವ್ಯಕವಿ ಪ್ರೊ. ಗೋಪಾಲಕೃಷ್ಣ ಅಡಿಗರು ಹೇಳಿರುವಂತೆ 'ಹೊಟ್ಟೆಯೇ ಕೇಂದ್ರವಾಗಿದೆ ನರನ ಜೀವಿತಕ್ಕೆ'. ಬಡವರಿಗೆ ದುಡಿಮೆಗೆ ಅವಕಾಶಗಳಿಲ್ಲ. ಎಲ್ಲಿಗೆ ಹೋಗಬೇಕು?

ಪ್ರೊ. ದೊಡ್ಡರಂಗೇಗೌಡ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿ ಮುಂದೂಡಿಕೆಯ ಸುತ್ತಮುತ್ತ



ಒಡೆದ ಬಯೊಬಬಲ್ ಮುಂದೇನು?



• ಗಿರೀಶ ದೊಡ್ಡಮನಿ

‘ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಜಾರಿ ಮಾಡಿರುವ ಕ್ಲಸ್ಟರ್ ಕ್ಯಾರವಾನ್ ಮಾದರಿಯು ಉತ್ತಮವಾಗಿದೆ. ಎಂಟು ತಂಡಗಳು ಆರು ತಾಣಗಳಲ್ಲಿ ಪಂದ್ಯಗಳನ್ನು ಆಡಲಿವೆ. ಈ ತಾಣಗಳ ನಡುವೆ ಪ್ರಯಾಣಿಸುವ ಮತ್ತು ಪಂದ್ಯಗಳ ದಿನಾಂಕವನ್ನು ಯೋಜಿಸಿರುವ ರೀತಿ ಅನನ್ಯವಾಗಿದೆ. ಇದೇ ಮಾದರಿಯನ್ನು ಭಾರತದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಗೂ ಅನ್ವಯಿಸುವ ಬಗ್ಗೆ ಪರಿಶೀಲಿಸಬಹುದು’

–ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್‌ನ (ಐಸಿಸಿ) ಜೀವ ಸುರಕ್ಷತಾ ನಿಯಮ ಅನುಷ್ಠಾನ ವಿಭಾಗದ ಮುಖ್ಯಸ್ಥ ಡೇವ್ ಮಸ್ಕರ್ ಏಪ್ರಿಲ್ 22ರಂದು ನೀಡಿದ್ದ ಹೇಳಿಕೆ ಇದು.

‘ಪರಿಸ್ಥಿತಿಯ ಮೇಲೆ ನಿಗಾ ಇಟ್ಟಿದ್ದೇವೆ. ಐಸಿಸಿಯೊಂದಿಗೆ ಸಂಪರ್ಕದಲ್ಲಿದ್ದೇವೆ. ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ಪರಿಸ್ಥಿತಿ ಹೇಗಿರಬಹುದು ಎಂಬ ಅವಲೋಕನ ಮಾಡುತ್ತಿದ್ದೇವೆ. ಕೊನೆಯ ಆಯ್ಕೆಯಾಗಿ ಅರಬ್ ಸಂಯುಕ್ತ ಸಂಸ್ಥಾನಕ್ಕೆ (ಯುಎಇ) ಸ್ಥಳಾಂತರದ ಬಗ್ಗೆ ಯೋಚಿಸುತ್ತೇವೆ’ ಎಂದು ಬಿಸಿಸಿಐ ಕ್ರಿಕೆಟ್ ಚಟುವಟಿಕೆಗಳ ಮುಖ್ಯ ವ್ಯವಸ್ಥಾಪಕ ಧೀರಜ್ ಮಲ್ಹೋತ್ರಾ ಮಂಗಳವಾರ ಹೇಳಿದ್ದಾರೆ.

ಈ ಎರಡು ಹೇಳಿಕೆಗಳ ನಡುವಿನ ಅಂತರ 13 ದಿನಗಳು. ವಿಶ್ವದ ಅತ್ಯಂತ ಶ್ರೀಮಂತ ಕ್ರೀಡಾಸಂಸ್ಥೆಗಳಲ್ಲಿ ಒಂದಾಗಿರುವ ಬಿಸಿಸಿಐಗೆ ಮುಜುಗರ ತಂದ ದಿನಗಳು ಇವು. ಏಕೆಂದರೆ ಐಸಿಸಿಯ ಮೇಲೆ ಯಾವುದೇ ಸಂದರ್ಭದಲ್ಲಿಯೂ ಪ್ರಭಾವ ಬೀರುವ ಶಕ್ತಿ ಬಿಸಿಸಿಐಗೆ ಇರುವುದು ಹಲವು ವಿಷಯಗಳಲ್ಲಿ ಸಾಬೀತಾಗಿದೆ. ಆದರೆ ಇದೀಗ ಬಯೊಬಬಲ್ (ಜೀವ ಸುರಕ್ಷಾ) ನಿಯಮದ ನಿರ್ವಹಣೆಯಲ್ಲಿ ಆಗಿರುವ ವೈಫಲ್ಯದಿಂದ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಮಂಡಳಿಗೆ ಮುಜುಗರವಾಗಿರುವುದು ಸತ್ಯ. ಇದೆಲ್ಲದರ ಜೊತೆಗೆ ಎರಡು ಸಾವಿರ ಕೋಟಿ ರೂಪಾಯಿಗೂ ಹೆಚ್ಚಿನ ನಷ್ಟವನ್ನೂ ಅನುಭವಿಸುತ್ತಿದೆ. ಇವುಗಳಿಂದ ತಪ್ಪಿಸಿಕೊಳ್ಳುವ ಅವಕಾಶವನ್ನು ಬಿಸಿಸಿಐ ಕಳೆದುಕೊಂಡಿರುವುದಂತೂ ದಿಟ.

ಈ ವರ್ಷ ಐಪಿಎಲ್ ಮುಂದುವರಿಕೆ ಸಾಧ್ಯವೇ?: ತಾತ್ಕಾಲಿಕವಾಗಿ ಸ್ಥಗಿತಗೊಂಡಿರುವ ಐಪಿಎಲ್‌ನಲ್ಲಿ ಇನ್ನೂ 31 ಪಂದ್ಯಗಳು ಬಾಕಿ ಇವೆ. ಆದರೆ ಸೆಪ್ಟೆಂಬರ್‌ನಲ್ಲಿ ಅವುಗಳನ್ನು ನಡೆಸಲು ಪ್ರಯತ್ನಿಸಲಾಗುವುದು ಎಂದು ಐಪಿಎಲ್ ಆಡಳಿತ ಸಮಿತಿ ಮುಖ್ಯಸ್ಥ ಬ್ರಿಜೇಶ್ ಪಟೇಲ್ ಹೇಳಿದ್ದಾರೆ. ಆದರೆ ಭಾರತದಲ್ಲಿಯೇ ಆಯೋಜಿಸುವ ಬಗ್ಗೆ ಅವರು ಸ್ಪಷ್ಟಪಡಿಸಿಲ್ಲ. ಏಕೆಂದರೆ ಅದೇ ವೇಳೆಗೆ ಕೋವಿಡ್ ಮೂರನೇ ಅಲೆ ಅಪ್ಪಳಿಸಬಹುದು ಎಂಬ ಎಚ್ಚರಿಕೆಯನ್ನು ತಜ್ಞರು ಈಗಾಗಲೇ ನೀಡಿದ್ದಾರೆ.

ವಿದೇಶಿ ಆಟಗಾರರು ಮತ್ತು ನಮ್ಮ ಆಟಗಾರರನ್ನು ಸುರಕ್ಷಿತವಾಗಿ ಅವರ ಮನೆಗಳಿಗೆ ತಲುಪಿಸುವುದು ನಮ್ಮ ಕರ್ತವ್ಯ. ಐಪಿಎಲ್ ಆಯೋಜನೆಯಲ್ಲಿ ತೊಡಗಿಕೊಂಡಿರುವವರೆಲ್ಲರ ಆರೋಗ್ಯ ಮತ್ತು ಸುರಕ್ಷತೆಗೆ ಆದ್ಯತೆ

ಬ್ರಿಜೇಶ್ ಪಟೇಲ್, ಐಪಿಎಲ್ ಆಡಳಿತ ಸಮಿತಿ ಮುಖ್ಯಸ್ಥ

ಏಪ್ರಿಲ್ 9ರಂದು ಐಪಿಎಲ್ ಆರಂಭವಾಗುವ ಮುನ್ನವೇ ದೇಶದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಲೇ ಇತ್ತು. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ದೇವದತ್ತ ಪಡಿಕ್ಕಲ್, ಕೋಲ್ಕತ್ತ ನೈಟ್ ರೈಡರ್ಸ್ ತಂಡದ ನಿತೀಶ್ ರಾಣಾ, ಎನ್ರಿಚ್ ನೊಕಿಯ, ಡೆಲ್ಲಿ ಕ್ಯಾಪಿಟಲ್ಸ್ ತಂಡದ ಅಕ್ಷರ್ ಪಟೇಲ್ ಅವರು ಟೂರ್ನಿ ಆರಂಭಕ್ಕೂ ಮುನ್ನವೇ ಕೊರೊನಾ ಸೋಂಕಿಗೆ ಒಳಗಾಗಿ ಚೇತರಿಸಿಕೊಂಡಿದ್ದರು. ಕಡ್ಡಾಯ ಪ್ರತ್ಯೇಕವಾಸ ನಿಯಮಗಳನ್ನು ಮುಗಿಸಿ ತಮ್ಮ ತಂಡಗಳನ್ನು ಸೇರಿಕೊಂಡಿದ್ದರು.

ಆದರೂ ಬಿಸಿಸಿಐ ಹೆಜ್ಜೆ ಹಿಂದೆ ಇಟ್ಟಿರಲಿಲ್ಲ. ಆ್ಯಡಂ ಜಂಪಾ, ಆ್ಯಂಡ್ರ್ಯೂ ಟೈ ಮತ್ತು ಕೇನ್ ರಿಚರ್ಡ್ಸನ್ ಅವರು ಹೋದ ವಾರ ಇಲ್ಲಿಯ ಸ್ಥಿತಿಗೆ ಆತಂಕ ವ್ಯಕ್ತಪಡಿಸಿ ತಮ್ಮ ದೇಶಗಳಿಗೆ ಮರಳಿದ್ದರು. ಆಗಲೇ ಟೂರ್ನಿಗೆ ತಡೆಯೊಡ್ಡಿದ್ದರೆ ಇಂದಿನ ಮುಜುಗರವನ್ನೂ ತಪ್ಪಿಸಿಕೊಳ್ಳಬಹುದಿತ್ತೇನೋ...

ಆದ್ದರಿಂದ ಬಾಕಿ ಉಳಿದಿರುವ ಪಂದ್ಯಗಳ ಆಯೋಜನೆಯಲ್ಲಿ ಈಗ ಆಗಿರುವ ಲೋಪಗಳನ್ನು ತಿದ್ದಿಕೊಂಡು ಮುಂದೆ ಹೆಜ್ಜೆ ಇಡುವ ಸಾಧ್ಯತೆಯೇ ಹೆಚ್ಚು. ಅದಕ್ಕಾಗಿಯೂ ಯುಎಇಯತ್ತಲೇ ಮಂಡಳಿ ಮುಖ ಮಾಡಿದೆ. ದಿನದಿಂದ ದಿನಕ್ಕೆ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಬಹಳಷ್ಟು ದೇಶಗಳು ಭಾರತದ ವಿಮಾನಗಳಿಗೆ ನಿರ್ಬಂಧ ಹೇರಿವೆ. ಕಠಿಣ ನಿಯಮಗಳನ್ನೂ ವಿಧಿಸಿವೆ.

ಬಯೊಬಬಲ್ ನಿಯಮದಲ್ಲಿ ಬದಲು?: ಹೋದ ವರ್ಷ ಮಾರ್ಚ್‌ನಿಂದ ಸುಮಾರು ನಾಲ್ಕು ತಿಂಗಳು ವಿಶ್ವದೆಲ್ಲೆಡೆಯೂ ಕ್ರೀಡಾ ಚಟುವಟಿಕೆಗಳು ಸ್ಥಗಿತವಾಗಿದ್ದವು. ಐಸಿಸಿ ರೂಪಿಸಿದ ಜೀವ ಸುರಕ್ಷಾ ನಿಯಮಗಳನ್ನು ಮೊದಲಿಗೆ ಜಾರಿ ಮಾಡಿದ ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿಯು ವೆಸ್ಟ್ ಇಂಡೀಸ್ ವಿರುದ್ಧ ಸರಣಿ ನಡೆಸಿತು. ಐರ್ಲೆಂಡ್, ಪಾಕಿಸ್ತಾನ ಎದುರೂ ಟೂರ್ನಿಗಳು ಅಲ್ಲಿ ನಡೆದವು. ಆದರೂ ಆಸ್ಟ್ರೇಲಿಯಾಕ್ಕೆ ಧೈರ್ಯ ಸಾಲಲಿಲ್ಲ. ಅಕ್ಟೋಬರ್‌ನಲ್ಲಿ ತಾನು ಆತಿಥ್ಯ ವಹಿಸಬೇಕಿದ್ದ ಟಿ20 ವಿಶ್ವಕಪ್ ಟೂರ್ನಿಯನ್ನು ಆ ದೇಶವು ಮುಂದೂಡಿತ್ತು.

ಅದೇ ಆಸ್ಟ್ರೇಲಿಯಾ ನವೆಂಬರ್–ಡಿಸೆಂಬರ್‌ನಲ್ಲಿ ಭಾರತದ ಎದುರು ದ್ವಿಪಕ್ಷೀಯ ಸರಣಿಗಳನ್ನು ಯಶಸ್ವಿಯಾಗಿ ಆಯೋಜಿಸಿತ್ತು. ಬಹುತಂಡಗಳು ಸ್ಪರ್ಧಿಸುವ ಟೂರ್ನಿಯನ್ನು ಆಯೋಜಿಸಲು ಯಾವುದೇ ದೇಶವೂ ಇದುವರೆಗೆ ಧೈರ್ಯ ಮಾಡಿಲ್ಲ. ಆದರೆ, ಬಿಸಿಸಿಐ ಅದಕ್ಕೆ ಮುನ್ನುಡಿ ಬರೆಯುವ ಗುರಿಯೊಂದಿಗೆ ಐಪಿಎಲ್ ಆಯೋಜಿಸಿತ್ತು. ಒಂದೊಮ್ಮೆ ಯಶಸ್ವಿಯಾಗಿದ್ದರೆ ಏಷ್ಯಾಕಪ್ ಟೂರ್ನಿ, ವಿಶ್ವಕಪ್ ಟೂರ್ನಿಗಳನ್ನು ನಡೆಸಲು ಆಯೋಜಕರಿಗೆ ಹುಮ್ಮಸ್ಸು ಬರುತ್ತಿತ್ತು.

ಆದರೆ ಈ ಸಲದ ಐಪಿಎಲ್‌ನಲ್ಲಿ ನಿಗದಿಪಡಿಸಲಾಗಿದ್ದ ಆರು ತಾಣಗಳ ಪೈಕಿ ನಾಲ್ಕರಲ್ಲಿ ಮಾತ್ರ ಪಂದ್ಯಗಳು ನಡೆದಿದ್ದವು. ತಂಡಗಳು ಈ ನಗರಗಳ ನಡುವೆ ಮಾತ್ರ ಪ್ರಯಾಣ ಮಾಡಿದ್ದವು. ಆಟಗಾರರು, ನೆರವು ಸಿಬ್ಬಂದಿ, ಅಧಿಕಾರಿಗಳು ಮತ್ತು ಆಟಗಾರರ ಕುಟುಂಬ ಸದಸ್ಯರು ನಿರಂತರವಾಗಿ ಬಯೊಬಬಲ್ ವ್ಯವಸ್ಥೆಯಲ್ಲಿದ್ದರು. ಆದರೂ ನಾಲ್ಕು ತಂಡಗಳ ಕೆಲವು ಆಟಗಾರರು ಮತ್ತು ಸಿಬ್ಬಂದಿಗೆ ಕೊರೊನಾ ಸೋಂಕು ತಗುಲಿರುವುದು ಬಯೊಬಬಲ್ ಲೋಪವನ್ನು ಎತ್ತಿ ತೋರಿಸಿದೆ.

ಇದು, ಎರಡು–ಮೂರಕ್ಕಿಂತ ಹೆಚ್ಚು ತಂಡಗಳು ಮತ್ತು ಬೇರೆ ಬೇರೆ ತಾಣಗಳಲ್ಲಿ ಪಂದ್ಯ ನಡೆಯುವಾಗ ವಿಭಿನ್ನವಾದ ಶಿಷ್ಟಾಚಾರಗಳನ್ನು ರೂಪಿಸುವ ಅಗತ್ಯವಿದೆಯೇ ಎಂಬ ಪ್ರಶ್ನೆಯನ್ನೂ ಹುಟ್ಟುಹಾಕಿದೆ. ಬಾಕಿ ಉಳಿದಿರುವ ಐಪಿಎಲ್ ಮತ್ತು ವಿಶ್ವಕಪ್ ಟೂರ್ನಿಗಳನ್ನು ಆಯೋಜಿಸುವ ಮುನ್ನ ಬಿಸಿಸಿಐ ಮತ್ತು ಐಸಿಸಿ ಒಟ್ಟಿಗೆ ಕುಳಿತು ಈ ಬಗ್ಗೆ ಒಮ್ಮತಕ್ಕೆ ಬರುವ ಅಗತ್ಯವಿದೆ.

‘ಹೋದ ಬಾರಿ ಯುಎಇಯಲ್ಲಿ ಐಪಿಎಲ್ ಆಯೋಜನೆ ಅಚ್ಚುಕಟ್ಟಾಗಿತ್ತು. ಈ ಬಾರಿ ಅಲ್ಲಿಯಷ್ಟು ಪರಿಣಾಮಕಾರಿಯಾದ ಬಯೊಬಬಲ್ ವ್ಯವಸ್ಥೆ ಇದ್ದಂತೆ ಕಾಣಲಿಲ್ಲ’ ಎಂದು ಆ್ಯಡಂ ಜಂಪಾ ಹೇಳಿದ್ದ ಮಾತನ್ನೂ ಗಂಭೀರವಾಗಿ ಪರಿಗಣಿಸಬೇಕು.

ಜೀವ ಸುರಕ್ಷಾ ನಿಯಮ ಪಾಲನೆಯಲ್ಲಿ ಆಗುವ ಮಾನಸಿಕ ಒತ್ತಡದ ಕುರಿತು ಈ ಹಿಂದೆ ವಿರಾಟ್ ಕೊಹ್ಲಿ, ಜಯದೇವ್ ಉನದ್ಕತ್ ಮತ್ತಿತರ ಆಟಗಾರರು ಹೇಳಿದ್ದರು. ಆ ವಿಷಯವನ್ನು ಪರಿಗಣಿಸಬೇಕು. ಏಕೆಂದರೆ ಬಿಸಿಸಿಐ ಮತ್ತು ಕ್ರಿಕೆಟ್ ಬೆಳವಣಿಗೆಗೆ ಆಟಗಾರರೇ ಮುಖ್ಯ. ಅವರ ಭಾವನೆಗಳಿಗೆ ಮತ್ತು ಸುರಕ್ಷತೆಗೆ ಮೊದಲ ಆದ್ಯತೆ ಕೊಡಬೇಕು.



ದೇವದತ್ತ ಪಡಿಕ್ಕಲ್ | ವರುಣ್ ಚಕ್ರವರ್ತಿ | ವೃದ್ಧಿಮಾನ್ ಸಹಾ | ಜಸ್‌ಪ್ರೀತ್ ಬೂಮ್ರಾ

ನಿಯಮಗಳು

- ಫ್ರ್ಯಾಂಚೈಸಿಗಳಿಗೆ ಪ್ರತ್ಯೇಕ ಬಯೊಬಬಲ್
- ತಂಡಗಳಿಗಾಗಿ ನಿಗದಿಯಾದ ಹೋಟೆಲ್‌ಗಳಿಗೆ ಬೇರೆ ಯಾರಿಗೂ ಪ್ರವೇಶವಿಲ್ಲ
- ಹೋಟೆಲ್, ಊಟದ ವ್ಯವಸ್ಥೆಯಲ್ಲಿ ಇರುವ ಸಿಬ್ಬಂದಿಗೂ ನಿಯಮಪಾಲನೆ ಕಡ್ಡಾಯ. ಪ್ರತಿದಿನವೂ ಕೋವಿಡ್ ಪರೀಕ್ಷೆ
- ಆಟಗಾರರು, ನೆರವು ಸಿಬ್ಬಂದಿ ಮತ್ತು ಅಧಿಕಾರಿಗಳೊಂದಿಗೆ ಹೋಟೆಲ್ ಸಿಬ್ಬಂದಿಯ ನೇರ ಸಂಪರ್ಕವಿಲ್ಲ
- ಅಭ್ಯಾಸ ಮತ್ತು ಪಂದ್ಯಗಳು ನಡೆಯುವ ಕ್ರೀಡಾಂಗಣಗಳ ಸಿಬ್ಬಂದಿಗೆ ಪ್ರತ್ಯೇಕವಾಸ ಕೋಣೆಗಳು. ನಿಯಮಿತವಾಗಿ ಕೋವಿಡ್ ಟೆಸ್ಟ್
- ಆಟಗಾರರ ಕ್ರಿಕೆಟ್ ಕಿಟ್ ಮತ್ತು ಸಲಕರಣೆಗಳಿಗೆ ಸ್ಯಾನಿಟೈಸೇಷನ್
- ನಗರಗಳ ನಡುವಣ ಪ್ರಯಾಣಕ್ಕಾಗಿ ಖಾಸಗಿ ವಿಮಾನಗಳ ಬಳಕೆ. ರಸ್ತೆ ಮಾರ್ಗದಲ್ಲಿ ಸಂಚರಿಸಲು ತಂಡಗಳಿಗೆ ಪ್ರತ್ಯೇಕ ಬಸ್‌ಗಳ ವ್ಯವಸ್ಥೆ
- ಸಾರಿಗೆ ಸಿಬ್ಬಂದಿಗೂ ಕೋವಿಡ್ ಪತ್ತೆ ಪರೀಕ್ಷೆ
- ಆಟಗಾರರೊಂದಿಗೆ ಪ್ರಯಾಣಿಸುವ ಕುಟುಂಬ ಸದಸ್ಯರಿಗೂ ಬಯೊಬಬಲ್ ನಿಯಮ ಕಡ್ಡಾಯ
- ಆಟಗಾರರು, ಸಿಬ್ಬಂದಿಗಳ ಚಲನವಲನದ ಮೇಲೆ ನಿಗಾವಹಿಸಲು ಜಿಪಿಎಸ್ ತಂತ್ರಜ್ಞಾನ ಬಳಕೆ
- ಟೂರ್ನಿ ಆರಂಭಕ್ಕೂ ಮುನ್ನ ಎಲ್ಲರಿಗೂ ಏಳು ದಿನಗಳ ಕ್ವಾರಂಟೈನ್ ಕಡ್ಡಾಯ
- ಟೂರ್ನಿಯ ಮಧ್ಯದಲ್ಲಿ ತಂಡವನ್ನು ಸೇರಿಕೊಳ್ಳುವ ಆಟಗಾರರಿಗೂ ಆರು ದಿನಗಳ ಕ್ವಾರಂಟೈನ್ ಕಡ್ಡಾಯ

ವಿದೇಶ ಪ್ರಯಾಣ ನಿಬಂಧನೆಗಳು

- **ಆಸ್ಟ್ರೇಲಿಯಾ:** ವಿಮಾನಯಾನ ರದ್ದು
- **ಇಂಗ್ಲೆಂಡ್:** ಇಲ್ಲಿಗೆ ಬರುವ ತನ್ನ ದೇಶವಾಸಿಗಳು ಹತ್ತು ದಿನಗಳ ಕ್ವಾರಂಟೈನ್‌ನಲ್ಲಿರಬೇಕು. ಈ ಅವಧಿಯಲ್ಲಿ ಎರಡು ಬಾರಿ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಬೇಕು
- **ನ್ಯೂಜಿಲೆಂಡ್:** ಇಲ್ಲಿಗೆ ಬರುವವರಿಗೆ 14 ದಿನಗಳ ಕ್ವಾರಂಟೈನ್ ಕಡ್ಡಾಯ. ನೆಗೆಟಿವ್ ವರದಿಯ ನಂತರ ಪ್ರವೇಶ.
- **ದಕ್ಷಿಣ ಆಫ್ರಿಕಾ:** ಎಲ್ಲ ಪ್ರಯಾಣಿಕರಿಗೂ ಪ್ರವೇಶ
- **ಬಾಂಗ್ಲಾದೇಶ:** ವಿಮಾನಯಾನವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ. ಭೂಮಾರ್ಗದ ಮೂಲಕ ಹೋದವರಿಗೆ 14 ದಿನಗಳ ಕಡ್ಡಾಯ ಪ್ರತ್ಯೇಕವಾಸ
- **ಯುಎಇ:** ಭಾರತದಿಂದ ಬರುವ ಎಲ್ಲ ವಿಮಾನಗಳಿಗೂ ತಡೆಯೊಡ್ಡಲಾಗಿದೆ

ಉತ್ತರ ಪ್ರದೇಶ ಪಂಚಾಯಿತಿ ಚುನಾವಣೆ ಫಲಿತಾಂಶ

ಬಿಜೆಪಿಗೆ ಹಿನ್ನಡೆ ಎಸ್‌ಪಿಗೆ ಹುರುಪು

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದ ಪಂಚಾಯಿತಿಗಳಿಗೆ ನಡೆದ ಚುನಾವಣೆಯ ಫಲಿತಾಂಶ ಪ್ರಕಟವಾಗಿದ್ದು, ಆಡಳಿತಾರೂಢ ಬಿಜೆಪಿಯ ಭದ್ರಕೋಟೆಗಳಲ್ಲಿಯೂ ಸಮಾಜವಾದಿ ಪಕ್ಷಕ್ಕೆ ಮುನ್ನಡೆ ಸಿಕ್ಕಿದೆ. ಫಲಿತಾಂಶವು ಬಿಜೆಪಿಗೆ ಎಚ್ಚರಿಕೆ ಗಂಟೆ ಎಂದು ವಿಶ್ಲೇಷಿಸಲಾಗುತ್ತಿದೆ.

ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯಲು ಹತ್ತು ತಿಂಗಳಷ್ಟೇ ಉಳಿದಿರುವ ಈ ಸಂದರ್ಭದಲ್ಲಿ ಬಂದಿರುವ ಫಲಿತಾಂಶವು ಸಮಾಜವಾದಿ ಪಕ್ಷದಲ್ಲಿ (ಎಸ್‌ಪಿ) ಭಾರಿ ಹುರುಪು ತುಂಬಿದೆ. ಜಿಲ್ಲಾ ಪಂಚಾಯಿತಿಗಳ 3,050 ಸ್ಥಾನಗಳ ಪೈಕಿ 760ರಲ್ಲಿ ಎಸ್‌ಪಿ ಬೆಂಬಲಿತ ಅಭ್ಯರ್ಥಿಗಳು ಗೆದ್ದಿದ್ದಾರೆ.

ಬಿಜೆಪಿ ಬೆಂಬಲಿತ ಅಭ್ಯರ್ಥಿಗಳ ಪೈಕಿ 750 ಮಂದಿ ಗೆದ್ದಿದ್ದಾರೆ. ಬಿಎಸ್‌ಪಿ ಬೆಂಬಲದ 381 ಮತ್ತು ಕಾಂಗ್ರೆಸ್ ಬೆಂಬಲದ 76 ಅಭ್ಯರ್ಥಿಗಳು ಗೆಲುವು ಪಡೆದಿದ್ದಾರೆ. ಪಕ್ಷೇತರರು 1,083 ಸ್ಥಾನಗಳನ್ನು ಗೆದ್ದಿದ್ದಾರೆ.

ಪಂಚಾಯಿತಿಯ ಬಹುತೇಕ ಎಲ್ಲ ಸ್ಥಾನಗಳನ್ನು ಗೆಲ್ಲಲಾಗುವುದು ಎಂದು ಫಲಿತಾಂಶಕ್ಕೆ ಮುನ್ನ ಬಿಜೆಪಿ ಹೇಳಿತ್ತು. ಈಗಿನ ಫಲಿತಾಂಶವು ಆ ಪಕ್ಷಕ್ಕೆ ಆಘಾತ ನೀಡಿದೆ. ಬಿಜೆಪಿಯ ಭದ್ರಕೋಟೆಗಳಾದ ಕಾಶಿ, ಮಥುರಾ, ಅಯೋಧ್ಯೆ, ಲಖನೌ, ಕಾನ್ಪುರ, ಆಗ್ರಾ ಜಿಲ್ಲೆಗಳಲ್ಲಿಯೇ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಸೋತಿದ್ದಾರೆ.



ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಭಾರಿ ಸಂಖ್ಯೆಯಲ್ಲಿ ಗೆದ್ದಿದ್ದಾರೆ ಎಂದು ಆ ಪಕ್ಷದ ನಾಯಕರು ಬಹಿರಂಗವಾಗಿ ಹೇಳಿಕೊಳ್ಳುತ್ತಿದ್ದಾರೆ. ಆದರೆ, ಪರಿಸ್ಥಿತಿ ಹಾಗೆ ಇಲ್ಲ ಎಂದು ಪಕ್ಷದ ಮೂಲಗಳು ಹೇಳಿವೆ. ಕೋವಿಡ್–19ರ ಎರಡನೇ ಅಲೆಯನ್ನು ಕೆಟ್ಟದಾಗಿ ನಿರ್ವಹಿಸಿರುವುದು ಪಕ್ಷಕ್ಕೆ ದುಬಾರಿಯಾಗಿದೆ ಎಂಬುದು ಮೂಲಗಳ ಅಭಿಪ್ರಾಯವಾಗಿದೆ.

ಆಸ್ಪತ್ರೆಗಳಲ್ಲಿ ವೈದ್ಯಕೀಯ ಆಮ್ಲಜನಕದ ಕೊರತೆಯು ರಾಜ್ಯದ ಪೂರ್ವ ಮತ್ತು ಕೇಂದ್ರ ಭಾಗಗಳ ಜನರ ಅಸಮಾಧಾನಕ್ಕೆ ಕಾರಣ. ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ರೈತರಲ್ಲಿ ಇರುವ ಅತೃಪ್ತಿಯು ರಾಜ್ಯದ ಪಶ್ಚಿಮ ಭಾಗದಲ್ಲಿ ಬಿಜೆಪಿಗೆ ಮುಳುವಾಗಿದೆ ಎಂದು ಉತ್ತರ ಪ್ರದೇಶ ಬಿಜೆಪಿಯ ಹಿರಿಯ ಮುಖಂಡರೊಬ್ಬರು ತಿಳಿಸಿದ್ದಾರೆ.

ಪಕ್ಷದ ಚುನಾವಣಾ ಕಾರ್ಯತಂತ್ರವನ್ನು ಬದಲಾಯಿಸಲೇಬೇಕಾದ ಅನಿವಾರ್ಯ ಈಗ ಸೃಷ್ಟಿಯಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆಯ ಹೀನಾಯ ಸೋಲಿನ ಬಳಿಕ ಬಹುತೇಕ ನಿಷ್ಕ್ರಿಯವೇ ಆಗಿದ್ದ ಸಮಾಜವಾದಿ ಪಕ್ಷದಲ್ಲಿ ಈಗಿನ ಗೆಲುವು ಭಾರಿ ಉತ್ಸಾಹ ಮೂಡಿಸಿದೆ. ವಿಧಾನಸಭೆಗೆ ಮುಂದಿನ ವರ್ಷ ನಡೆಯಲಿರುವ ಚುನಾವಣೆಯಲ್ಲಿ ಬಿಜೆಪಿಯನ್ನು ಅಧಿಕಾರದಿಂದ ಇಳಿಸಲು ಸಾಧ್ಯ ಎಂಬ ಭರವಸೆ ಮೂಡಿಸಿದೆ.

ಕಾಂಗ್ರೆಸ್ ಪಕ್ಷಕ್ಕೆ ಭಾರಿ ಮುನ್ನಡೆ ದೊರೆಯದೇ ಇದ್ದರೂ ಸ್ಥಿತಿ ಉತ್ತಮಗೊಂಡಿದೆ. ಕಳೆದ ಬಾರಿಗೆ ಹೋಲಿಸಿದರೆ, ಪಂಚಾಯಿತಿಗಳಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳ ಸಂಖ್ಯೆ ದುಪ್ಪಟ್ಟಾಗಿದೆ. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಲೋಕಸಭೆಯಲ್ಲಿ ಪ್ರತಿನಿಧಿಸುತ್ತಿರುವ ರಾಯಬರೇಲಿಯಲ್ಲಿ ಪಕ್ಷವು ಉತ್ತಮ ಸಾಧನೆ ಮಾಡಿದೆ.

ಪಂಚಾಯಿತಿ ಚುನಾವಣೆಯಲ್ಲಿ ಮತದಾರರು ಎಸ್‌ಪಿಗೆ ಆದ್ಯತೆ ಕೊಟ್ಟಿದ್ದಾರೆ. ಎಸ್‌ಪಿ ಬೆಂಬಲಿತ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಮೂಲಕ ಪ್ರಜಾಪ್ರಭುತ್ವ ಉಳಿಸುವ ದಿಸೆಯಲ್ಲಿ ಜನರು ಅದ್ಭುತವಾದ ಕೆಲಸ ಮಾಡಿದ್ದಾರೆ ಎಂದು ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಹೇಳಿದ್ದಾರೆ.

ರಾಜ್ಯದಾದ್ಯಂತ ಪಕ್ಷಕ್ಕೆ ಭಾರಿ ಗೆಲುವು ಸಿಕ್ಕಿದೆ ಎಂದು ಬಿಜೆಪಿಯ ರಾಜ್ಯ ಮಟ್ಟದ ನಾಯಕರು ಹೇಳಿದ್ದಾರೆ. ಆದರೆ, ಪಂಚಾಯಿತಿ ಚುನಾವಣೆಯಲ್ಲಿ ಭಾರಿ ಹಿನ್ನಡೆ ಆಗಿದೆ ಎಂದು ಬಿಜೆಪಿಯ ಅಯೋಧ್ಯೆ ಘಟಕವು ಸೋಲೊಪ್ಪಿಕೊಂಡಿದೆ.



ಬಿಜೆಪಿ ಈಗ ಮುಳುಗುವ ಹಡಗು. 2022ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ನಾಮಾವಶೇಷವಾಗಲಿದೆ ಎಂಬ ಸೂಚನೆಗಳನ್ನು ಪಂಚಾಯಿತಿ ಚುನಾವಣೆ ಫಲಿತಾಂಶ ನೀಡಿದೆ

ಅಖಿಲೇಶ್ ಯಾದವ್, ಎಸ್‌ಪಿ ಅಧ್ಯಕ್ಷ

ಫಲಿತಾಂಶವು ನಿರಾಶಾದಾಯಕ. ಅಯೋಧ್ಯೆ ಜಿಲ್ಲೆಯ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿಯೂ ಬಿಜೆಪಿ ಶಾಸಕರೇ ಇದ್ದಾರೆ. ಹಾಗಿದ್ದರೂ 40 ಸ್ಥಾನಗಳ ಪೈಕಿ 8ರಲ್ಲಿ ಮಾತ್ರ ನಮಗೆ ಗೆಲುವು ಸಿಕ್ಕಿದೆ

ದಿವಾಕರ್ ಸಿಂಗ್, ಬಿಜೆಪಿ ಅಯೋಧ್ಯೆ ಜಿಲ್ಲಾ ಘಟಕದ ಅಧ್ಯಕ್ಷ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಪಶ್ಚಿಮ ಬಂಗಾಳದಲ್ಲಿ ಚುನಾವಣೋತ್ತರ ಹಿಂಸಾಚಾರ ಭುಗಿಲೆದ್ದಿದೆ. ಫಲಿತಾಂಶ ಪ್ರಕಟವಾದ ಬಳಿಕ ಈವರೆಗೆ 14 ಮಂದಿ ಮೃತಪಟ್ಟಿದ್ದಾರೆ. ಆಡಳಿತ ಹಾಗೂ ವಿರೋಧ ಪಕ್ಷಗಳ ಕಾರ್ಯಕರ್ತರು ಘರ್ಷಣೆಯಲ್ಲಿ ತೊಡಗಿದ್ದು, ಪಕ್ಷದ ಕಚೇರಿಗೆ ಬೆಂಕಿ ಹಚ್ಚಲಾಗಿದೆ. ಈ ಪೈಕಿ ಯುವಕರು ಪೊಲೀಸ್ ಜೀಪ್‌ಗೆ ಬೆಂಕಿ ಹಚ್ಚುತ್ತಿರುವ ವಿಡಿಯೊ ವೈರಲ್ ಆಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಪ್ರಮಾಣದಲ್ಲಿ ಈ ವಿಡಿಯೊವನ್ನು ಹಂಚಿಕೊಳ್ಳಲಾಗುತ್ತಿದೆ. ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರಪತಿ ಆಡಳಿತ ಹೇರುವಂತೆ ಹಲವರು ಟ್ವಿಟರ್‌ನಲ್ಲಿ ಒತ್ತಾಯಿಸಿದ್ದಾರೆ.



ವಿಡಿಯೊದ ಮೂಲ ಹುಡುಕಿದ ಆಲ್ಟ್ ನ್ಯೂಸ್ ತಂಡಕ್ಕೆ ಅದು ಬಂಗಾಳಕ್ಕೆ ಸಂಬಂಧಿಸಿದ್ದು ಅಲ್ಲ ಎಂಬುದು ದೃಢಪಟ್ಟಿದೆ. 2021ರ ಜನವರಿ 31ರಂದು ಒಡಿಶಾದಲ್ಲಿ ಯುವಕನ ಸಾವು ಖಂಡಿಸಿ ಸ್ಥಳೀಯರು ಪೊಲೀಸರನ್ನು ಗುರಿಯಾಗಿಸಿ ದಾಳಿ ನಡೆಸಿದಾಗ ಚಿತ್ರೀಕರಿಸಿದ ವಿಡಿಯೊ ಅದು ಎಂದು ಆಲ್ಟ್ ನ್ಯೂಸ್ ಸ್ಪಷ್ಟಪಡಿಸಿದೆ. ಈ ವಿಡಿಯೊ ಕಳಿಂಗ ಟಿ.ವಿಯಲ್ಲಿ ಪ್ರಸಾರವಾಗಿದೆ. ಇಂಡಿಯನ್ ಎಕ್ಸ್‌ಪ್ರೆಸ್ ಸೇರಿದಂತೆ ಕೆಲವು ಪತ್ರಿಕೆಗಳು ಈ ವರದಿಯನ್ನು ಪ್ರಕಟಿಸಿದ್ದು, ಈ ವಿಡಿಯೊಗೂ, ಬಂಗಾಳದ ಹಿಂಸಾಚಾರಕ್ಕೂ ಸಂಬಂಧವಿಲ್ಲ ಎಂಬುದು ಸ್ಪಷ್ಟವಾಗಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಋಣಾನುಬಂಧ

ಅಳೆವರಾರ್ ಪೆಣ್ ಗಂಡುಗಳನೆಳೆವ ನೂಲುಗಳ ? |
ಕೆಳೆಪಗೆಗಳೆಲ್ಲವಾಳದಲಿ ಬಲು ತೊಡರಿ ||
ಇಳೆಯ ಋಣಗಳ ಲೆಕ್ಕವಿಹುದು ವಿಧಿಯಕ್ಕರದಿ |
ತಿಳಿಯಗೊಡನದ ನಮಗೆ – ಮಂಕುತಿಮ್ಮ
|| **414** ||

ಪದ-ಅರ್ಥ: ಅಳೆವರಾರ್ = ಅಳೆಯುವವರು ಯಾರು, ಪೆಣ್‌ಗಂಡುಗಳನೆಳೆವ = ಪೆಣ್(ಹೆಣ್ಣು) + ಗಂಡುಗಳನು + ಎಳೆವ, ಕೆಳೆಪಗೆಗಳೆಲ್ಲವಾಳದಲಿ = ಕೆಳೆ(ಸ್ನೇಹ) + ಪಗೆಗಳು(ಹಗೆತನ) + ಎಲ್ಲ + ಆಳದಲಿ, ವಿಧಿಯಕ್ಕರದಿ = ವಿಧಿ + ಅಕ್ಕರದಿ(ಪ್ರೀತಿಯಿಂದ), ತಿಳಿಯಗೊಡನದ = ತಿಳಿಯಗೊಡನು + ಅದ.

ವಾಚ್ಯಾರ್ಥ: ಹೆಣ್ಣು-ಗಂಡುಗಳನ್ನು ಎಳೆವ ನೂಲುಗಳನ್ನು ಅಳೆಯುವವರಾರು? ಇದರ ಆಳದಲ್ಲಿರುವ ಸ್ನೇಹ, ಹಗೆತನಗಳು ಬಲು ತೊಡಕಿನವು. ಅದಕ್ಕೆ ಪ್ರಪಂಚದ ಋಣಗಳ ಲೆಕ್ಕವಿದೆ. ಆದರೆ ವಿಧಿ ಅದನ್ನು ಪ್ರೀತಿಯಿಂದ ನಮಗೆ ತಿಳಿಯಗೊಡದಂತೆ ಮಾಡಿದ್ದಾನೆ.

ವಿವರಣೆ: ನನ್ನ ಸ್ನೇಹಿತರ ಮಗಳು ಇಲ್ಲಿ ವಿದ್ಯೆ ಕಲಿತು ಹೆಚ್ಚಿನ ಶಿಕ್ಷಣಕ್ಕೆಂದು ಅಮೆರಿಕಕ್ಕೆ ಹೋದಳು. ಕಲಿಕೆಯ ನಂತರ ಅಲ್ಲಿಯೇ ಬಂದು ಒಳ್ಳೆಯ ಕೆಲಸ ಸಿಕ್ಕಿತು. ಒಂದು ವರ್ಷದ ಕಾರ್ಯದ ಮೇಲೆ ಆಕೆಯನ್ನು ಆರು ತಿಂಗಳು ಮಟ್ಟಿಗೆ ಯುರೋಪಿನ ಆಸ್ಟ್ರಿಯಾ ದೇಶಕ್ಕೆ ಕಳುಹಿಸಿದರು. ಆಕೆ ಅಲ್ಲಿಯ ಕಚೇರಿಯಲ್ಲಿ ಕೆಲಸ ಮಾಡುವಾಗ ಒಬ್ಬ ಜರ್ಮನ್ ಹುಡುಗನೊಂದಿಗೆ ಪ್ರೇಮವಾಗಿ ಮದುವೆಯಾದರು. ಇಂಥ ಸುದ್ದಿಗಳು ಈಗ ಹೊಸದೇನಲ್ಲ. ಆದರೆ ಭಾರತದಲ್ಲಿ ಬೆಳೆದ ಹುಡುಗಿ, ಕಲಿತದ್ದು ಅಮೆರಿಕ, ತಾತ್ಕಾಲಿಕ ಕೆಲಸಕ್ಕೆ ಹೋದದ್ದು ಆಸ್ಟ್ರಿಯಾಕ್ಕೆ, ಮದುವೆಯಾದದ್ದು ಜರ್ಮನಿಯ ಹುಡುಗ. ಎಲ್ಲಿಂದೆಲ್ಲಿಯ ಸಂಬಂಧ!

ಇತಿಹಾಸ, ಪುರಾಣಗಳನ್ನು ನೋಡಿದರೆ ಅನೇಕ ಮದುವೆಗಳು ವ್ಯವಹಾರಗಳಾಗಿದ್ದವು. ಇಬ್ಬರು ರಾಜರುಗಳ ನಡುವೆ ಸಂಬಂಧ ಬೆಸೆಯುವುದಾಗಿದ್ದರೆ ಅವರ ಮಕ್ಕಳ ಮದುವೆ ನಡೆಯುತ್ತಿತ್ತು. ಅವರಿಬ್ಬರೂ ಹೇಗೆ ಬದುಕಿದರೋ ತಿಳಿಯದು, ಆದರೆ ಎರಡು ರಾಜ್ಯಗಳ ನಡುವಿನ ವ್ಯವಹಾರ ನಡೆಯುತ್ತಿತ್ತು. ಕೆಲವೊಂದು ಬಾರಿ ದ್ವೇಷದಿಂದ ಬೇರೆ ದೇಶದ, ಮನೆತನದ ಹೆಣ್ಣನ್ನು ಎತ್ತಿಕೊಂಡು ಬಂದು, ತಮ್ಮ ಮನೆಯಲ್ಲಿ ಸೇರಿಸಿಕೊಂಡು ಆಕೆ ಬದುಕಿರುವವರೆಗೂ ಚಿತ್ರಹಿಂಸೆ ಕೊಟ್ಟ ಪ್ರಸಂಗಗಳೂ ಇವೆ. ಹೀಗೆ ಸ್ನೇಹ, ದ್ವೇಷಗಳ ಒಳಸುಳಿಗಳು ತುಂಬ ಆಳವಾದವುಗಳು, ತಿಳಿಯಲಸಾಧ್ಯವಾದವುಗಳು. ಗಂಡು-ಹೆಣ್ಣುಗಳನ್ನು ಎಳೆಯುವ ನೂಲುಗಳು ಕಣ್ಣಿಗೆ ಕಾಣದಂತೆ ಗೂಢವಾಗಿದ್ದು, ಆ ನೂಲುಗಳು ಬಿಗಿದು ಸೆಳೆಯುವ ಪರಿಯನ್ನು ಅರಿಯುವುದು ಕಷ್ಟ.

ಇದನ್ನೇ ಋಣಾನುಬಂಧವೆನ್ನುವುದು. ಯಾವ ಋಣಗೋಸುಗವೋ, ಯಾವ ಕಾರ್ಯ ಸಾಧನೆಗೋ, ಯಾರ ಸಂತೋಷಕ್ಕೋ, ಕೋಪಕ್ಕೋ ಗಂಡು-ಹೆಣ್ಣುಗಳು ಹೀಗೆ ಕೂಡುವುದು ಅನೂಹ್ಯವಾದದ್ದು. ಅದಕ್ಕೇ ‘ಋಣಾನುಬಂಧ ರೂಪೇಣ ಪಶು ಪತ್ನಿ ಸುತಾಲಯ’ ಎಂಬ ಲೋಕೋಕ್ತಿ ಬಂದದ್ದು. ಅದು ಯಾವ ಋಣವೋ, ವಿಧಿ, ಅದನ್ನು ಮರೆಯದೆ ಲೆಕ್ಕವಿಟ್ಟು, ದಾಖಲಿಸಿ, ಕಾಪಾಡಿ, ಎಳೆತಂದು ಗಂಟುಹಾಕುತ್ತದಂತೆ. ನಮಗೆ ವಿಧಿಯ ಬರಹ ಕಾಣುವುದಿಲ್ಲ. ಆದರೆ ವಿಧಿಯ ನಿರ್ಧಾರದಂತೆ ನಡೆದ ಕಾರ್ಯ ಕಾಣುತ್ತದೆ. ❖

ದಿನ ಭವಿಷ್ಯ

ಗುರುವಾರ 6 ಮೇ 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಭರಣಿ ದಶಮಿ ಗಂ. 26-57 (ಹ. 4-52) ಗುರುವಾರ ನಿತ್ಯ ನಕ್ಷತ್ರ ಶತಭಿಷ ಗಂ. 17-30 (ಹ. 1-05) ಐಂದ್ರ ನಾಮ ಯೋಗ ಗಂ 39-31 ಭದ್ರೆ ಕರಣ ಗಂ. 26-57 ವಿಷ ಗಂ. 34-7 ಅಮೃತ ಶೇಷ ಗಂ. 3-48 ಅಮೃತ ಗಂ. 59-3 : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 ಸೂರ್ಯೋದಯ: 6-02 ಸೂರ್ಯಾಸ್ತ: 6-31 ಅದೃಷ್ಟ ಸಂಖ್ಯೆ 5, 7

ಮೇಷ: ಕುಲ ಕಸುಬುದಾರರಿಗೆ ಉತ್ತಮ ವ್ಯವಹಾರದಿಂದಾಗಿ ಲಾಭ ಪ್ರಾಪ್ತಿ. ಪಾರಂಪರಿಕವಾಗಿ ನಡೆದು ಬಂದ ವ್ಯವಹಾರವನ್ನು ಕೈ ಬಿಡುವುದು ಬೇಡ. ಮಾಡಿದ ಕೆಲಸಗಳ ಬಗ್ಗೆ ಮತ್ತೊಮ್ಮೆ ಯೋಚಿಸುವುದು ಉತ್ತಮ.

ವೃಷಭ: ನಿಮ್ಮ ಕೆಲಸವನ್ನು ಬೇರೆಯವರೊಂದಿಗೆ ಮಾಡುವುದು ಉತ್ತಮ. ಆರ್ಥಿಕ ಪ್ರಗತಿಯತ್ತ ದಾಪುಗಾಲು. ಬೇರೆಯವರ ಮಾತಿನ ಬಗ್ಗೆ ತಲೆ ಕೆಡಿಸಿಕೊಳ್ಳದಿರಿ. ಉನ್ನತ ವಿಚಾರಗಳತ್ತ ಒಲವು ತೋರಲಿದ್ದೀರಿ.

ಮಿಥುನ: ಕೈಗಾರಿಕೋದ್ಯಮಿಗಳಿಗೆ ಪ್ರಗತಿ. ಹೊಸ ಉದ್ಯಮದಲ್ಲಿ ಯಶಸ್ಸು. ಮನೆಯಲ್ಲಿ ಬಹಳ ದಿನಗಳ ನಂತರ ನಗುವನ್ನು ಕಾಣಲಿದ್ದೀರಿ. ಬಂಧುಗಳ ಆಗಮನದ ಜೊತೆಗೆ ವ್ಯವಹಾರ ಸಂಬಂಧಗಳ ಬಗ್ಗೆ ಚರ್ಚೆ.

ಕರ್ಕಾಟಕ: ಆದಾಯದ ಹೊಸ ದಾರಿ ಗೋಚರಿಸಲಿದೆ. ಹಾಗಂತ ಅತಿಯಾದ ಖರ್ಚನ್ನು ನಿಯಂತ್ರಣದಲ್ಲಿಡುವುದು ಒಳ್ಳೆಯದು. ಯಂತ್ರಾಗಾರದಲ್ಲಿ ಅಗ್ನಿ ಭಯ ಸಾಧ್ಯತೆ. ಹೊಸ ಹೊಸ ಸಂಬಂಧಗಳು ಹುಡುಕಿಕೊಂಡು ಬರಲಿವೆ.

ಸಿಂಹ: ಶೀಘ್ರದಲ್ಲಿ ಉದ್ಯೋಗದಲ್ಲಿ ಉನ್ನತಿ. ನಿಮ್ಮ ಪ್ರಾಮಾಣಿಕತೆಯ ಫಲವು ನಿಮ್ಮನ್ನು ಅರಸಿ ಬರಲಿದೆ. ಆರ್ಥಿಕ ಅಭಿವೃದ್ಧಿ. ವೃಥಾ ಆರೋಪಗಳ ಬಗ್ಗೆ ಗಮನ ಬೇಡ. ಭೂಮಿ, ಆಸ್ತಿ ಖರೀದಿ ಸಾಧ್ಯತೆ.

ಕನ್ಯಾ: ಸಾಂಸಾರಿಕ ನೆಮ್ಮದಿಯೊಂದಿಗೆ ಆರ್ಥಿಕ ಸಮಸ್ಯೆ ಪರಿಹಾರವಾಗಲಿದೆ. ಮಕ್ಕಳ ವಿದ್ಯಾಭ್ಯಾಸದ ಕುರಿತು ಚಿಂತಿಸಲಿದ್ದೀರಿ. ಮಾನಸಿಕ ನೋವನ್ನು ಇತರರಲ್ಲಿ ಹಂಚಿಕೊಳ್ಳಿ. ಸಾಮಾಜಿಕ ಕಾರ್ಯಗಳಲ್ಲಿ ಭಾಗಿಯಾಗುವಿರಿ.

ತುಲಾ: ಉದ್ಯೋಗ ಕ್ಷೇತ್ರದಲ್ಲಿ ಅತಿಯಾದ ಒತ್ತಡ ಕಾಣಿಸಿದರೂ ಸ್ನೇಹಿತರ ಸಹಕಾರದಿಂದ ನಿರಾಳವಾಗಲಿದ್ದೀರಿ. ಆರ್ಥಿಕ ಪ್ರಗತಿಗಾಗಿ ಕೈಗೊಳ್ಳುವ ಯೋಜನೆಗಳು ಕೈಗೂಡುವವು. ಮಕ್ಕಳ ಯೋಗಕ್ಷೇಮದ ಬಗ್ಗೆ ನಿಗಾ ಇರಲಿ.

ವೃಶ್ಚಿಕ: ಪರಿಶ್ರಮಕ್ಕೆ ಯೋಗ್ಯವಾದ ಪ್ರತಿಫಲ ದೊರೆತು ಉತ್ತಮ ಅವಕಾಶ ನಿಮ್ಮದಾಗಲಿದೆ. ರಾಜಕೀಯ ಮುಖಂಡರುಗಳಿಗೆ ಮುಖಭಂಗ ಅನುಭವಿಸುವ ಸಾಧ್ಯತೆ. ಪತ್ರಿಕೋದ್ಯಮದವರಿಗೆ ವಿಫಲತೆ ಕಂಡುಬರುತ್ತಿದೆ.

ಧನು: ಬಹುದಿನಗಳ ದುಡಿಮೆಯ ನಡುವೆ ವಿಶ್ರಾಂತಿಯ ಅಗತ್ಯತೆ. ಒತ್ತಡದಿಂದ ಹೊರಬರುವ ಸಾಧ್ಯತೆ. ನೌಕಾಯಾನಿಗಳಿಗೆ ಒಳ್ಳೆಯ ಸಮಯ. ವಿದ್ಯಾರ್ಥಿಗಳಲ್ಲಿ ಖಿನ್ನತೆ. ದೇವತಾ ದರ್ಶನ ಭಾಗ್ಯದಿಂದಾಗಿ ನೆಮ್ಮದಿ.

ಮಕರ: ಯಾವುದೋ ಧನಾಗಮನದ ನಿರೀಕ್ಷೆಯಲ್ಲಿದ್ದ ನಿಮಗೆ ಹಣಕಾಸಿನ ಅನುಕೂಲ ದೊರೆಯುವ ಸಾಧ್ಯತೆ. ಆತಂಕದ ಕ್ಷಣಗಳು ದೂರವಾಗುವ ಸಾಧ್ಯತೆ. ಬೆಂಕಿ, ವಿದ್ಯುತ್ ಮುಂತಾದವುಗಳ ಬಗ್ಗೆ ವಿಶೇಷ ಎಚ್ಚರಿಕೆ ಅಗತ್ಯ.

ಕುಂಭ: ಕಠಿಣ ಪರಿಶ್ರಮದ ಫಲದಿಂದ ಉತ್ತಮ ಸಫಲತೆ. ಯೋಜನೆಯನ್ನು ರೂಪಿಸುವ ಮುನ್ನ ಪುನಃ ಅವಲೋಕನ ಅಗತ್ಯ. ಸಾಮಾಜಿಕ ಕ್ಷೇತ್ರದಲ್ಲಿ ಹಿನ್ನಡೆಯ ಸಾಧ್ಯತೆ. ಮಕ್ಕಳ ಮನಸ್ಸಿಗೆ ನೋವಾಗದಂತೆ ಎಚ್ಚರಿಕೆ ವಹಿಸಿ.

ಮೀನ: ಅನಾರೋಗ್ಯದಿಂದ ಚೇತರಿಕೆ. ಹಣಕಾಸಿನ ಅನುಕೂಲದ ನಿರೀಕ್ಷೆಯಲ್ಲಿರುವ ನಿಮಗೆ ಶೀಘ್ರಪ್ರಗತಿಯಲ್ಲಿ ಕೈಗೂಡಲಿದೆ. ಬಂಧುಗಳಿಂದ ಸಹಕಾರ. ಮಕ್ಕಳ ಪ್ರಗತಿಯಿಂದ ನೆಮ್ಮದಿ. ದೂರಪ್ರಯಾಣ ತರವಲ್ಲ.


ನಿಮ್ಮ ಜನ್ಮದಿನ 6-ಮೇ ಈ ದಿನ ಅತ್ಯಂತ ಶುಭಕರ. ವೈದ್ಯಕೀಯ ಮತ್ತು ಎಂಜಿನಿಯರಿಂಗ್ ವೃತ್ತಿಯವರಿಗೆ ವಿಶೇಷ ಸಹಕಾರ ದೊರೆಯಲಿದೆ. ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳು ದೊರಕಲಿವೆ. ವ್ಯವಹಾರ ಉದ್ಯೋಗಗಳು ಕೈಗೂಡಿ ಉತ್ತಮ ಭವಿಷ್ಯವನ್ನು ನಿರೂಪಿಸಿಕೊಳ್ಳುವಲ್ಲಿ ಸಹಕಾರಿಯಾಗಲಿದೆ.

ಪದಬಂಧ 4588

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2. ವಿವೇಚನೆಯಿಲ್ಲದ ಶ್ರದ್ಧೆ (5)
4. ಕುದುರೆ ಗಾಡಿಯಿದು (3)
5. ಆನೆಯನ್ನು ಹತೋಟಿಯಲ್ಲಿಡಲು ಬಳಸುವ ಸಾಧನ (3)
9. ಅತ್ತಿತ್ತ ಕಣ್ಣು ಹಾಯಿಸಿದರೆ ಮೊಟ್ಟೆ ಕಂಡೀತೇ? (2)
10. ಅವಳಿಗೋಸ್ಕರ ಧರಿಸಿದ ಬಟ್ಟೆ! (3)
11. ಜಳಕವನ್ನು ಹೀಗೆನ್ನಿ (2)
12. ಈತ ಪಕ್ಕಾ ಹಳ್ಳಿಯವ (3)
15. ಜಗಳಕ್ಕೊಂದು ಪರ್ಯಾಯ ಪದ (3)
16. ಪರಸ್ಪರ ವಿರೋಧವಾಗಿರುವಂತೆ ತೋರುವುದು (5)

ಮೇಲಿಂದ ಕೆಳಕ್ಕೆ
1. ಅನಂತರದಲ್ಲಿ ಕಾಣಿಸಿರುವ ವಿಷ್ಣು (3)
2. ಮಾತು ಬಾರದಿರುವವ (2)
3. ಹತೋಟಿಯೇ ತಿರುವು ಮುರುವಾಗಿದೆ! (2)
4. ನೀರಿನ ಅಲೆ ಜೊತೆಗಿದ್ದಾಗಿನ ವಾದ್ಯ (5)
6. ಮಲಗುವ ಕೋಣೆ (5)
7. ಒಳ್ಳೆಯತನ ಇಲ್ಲಿ ಕಾಣುತ್ತಿದೆ (3)
8. ತೆಗಳಿಕೆಯಲ್ಲಿಯೇ ಸಂಪಾದನೆ! (3)
13. ವಿರಮಿಸುತ್ತಿರುವಾಗ ಕಾಣಿಸಿದ ಸೂರ್ಯ (2)
14. ಸನ್ನಿಧಾನದಲ್ಲಿ ನಡೆದ ರಾಜಿ (3)
15. ಕಳಸದ ಹತ್ತಿರದಲ್ಲಿರುವ ಕೊಳೆ (2)



4587ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮೌನ 3.ಕಾಕಂಬಿ 5.ನಮೂನೆ 7.ರಸಾಭಾಸ 9.ಪ್ರತೀಕ 10.ಗಣಪ 11.ರಕ್ತಸ್ರಾವ 13.ಉಳಿವು 15.ನಸುಕು 16.ಹಣ್ಣು

ಮೇಲಿಂದ ಕೆಳಕ್ಕೆ: 2.ನವೀನ 3.ಕಾಮನೆ 4.ಬಿಡಾರ 6.ಮೂಷಿಕ 8.ಸಮೀಪ 9.ಪ್ರಚಾರ 10.ಗಯ್ಯಾಳಿ 12.ವಪನ 13.ಉಸುಕು 14.ವುಗೇಹ

ಸುಡೊಕು 4974

			5		6		4	7
				4				
7		4	9			5		3
9	1							8
		7		9			1	
5	2							4
8		1					6	
	5		1		4	8		9
4		9		6			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4973 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4



ಸೋಮವಾರಪೇಟೆ ಸಮೀಪದ ಬಜೆಗುಂಡಿ ಗ್ರಾಮದ ರಸ್ತೆಯಲ್ಲಿ ಮನು ಶವ

ರಸ್ತೆಯಲ್ಲೇ ನರಳಿ ಯುವಕ ಸಾವು

ಪ್ರಜಾವಾಣಿ ವಾರ್ತೆ

ಸೋಮವಾರಪೇಟೆ (ಕೊಡಗು): ಸಮೀಪದ ಬಜೆಗುಂಡಿ ಗ್ರಾಮದಲ್ಲಿ ಬುಧವಾರ ಆಂಬುಲೆನ್ಸ್‌ಗಾಗಿ ಕಾದಿದ್ದ ಯುವಕ ಮನು (23) ಎಂಬಾತ ರಸ್ತೆಮಧ್ಯೆದಲ್ಲಿ ಬಿದ್ದು ಮೃತಪಟ್ಟಿದ್ದಾನೆ.

ಕೆಲವು ದಿನಗಳಿಂದ ಜ್ವರದಿಂದ ಬಳಲುತ್ತಿದ್ದ ಮನು, ಮಂಗಳವಾರ ಸೋಮವಾರಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಕೋವಿಡ್ ಪರೀಕ್ಷೆಗಾಗಿ ಗಂಟಲು ದ್ರವದ ಮಾದರಿ ಕೊಟ್ಟು ಬಂದಿದ್ದ. ಬುಧವಾರ ಜ್ವರದಿಂದ ನಿತ್ರಾಣಗೊಂಡು ಮಧ್ಯಾಹ್ನ 12.30ಕ್ಕೆ ಆಂಬುಲೆನ್ಸ್‌ಗೆ ಕರೆ ಮಾಡಿದ್ದಾನೆ.



ಮನು

ಆಂಬುಲೆನ್ಸ್ ಬರುವ ಮುನ್ನವೇ ರಸ್ತೆ ಮೇಲೆ ಬಿದ್ದು ನರಳಿದ್ದಾನೆ. ಅಷ್ಟೊತ್ತಿಗೆ ಆಂಬುಲೆನ್ಸ್ ಬಂದಿದೆ. ಆ ವೇಳೆಗೆ ಯುವಕ ರಸ್ತೆಯಲ್ಲೇ ಮೃತಪಟ್ಟಿದ್ದ.

'ಜಿಲ್ಲಾ ಆಸ್ಪತ್ರೆಯಲ್ಲಿ ಮೃತದೇಹವಿದ್ದು, ಶವಪರೀಕ್ಷೆಯ ನಂತರ ಸಾವಿಗೆ ನಿಖರ ಮಾಹಿತಿ ತಿಳಿಯಲಿದೆ. ಕೊರೊನಾ ಸೋಂಕು ತಗುಲಿತ್ತೇ ಇಲ್ಲವೇ ಎಂಬುದನ್ನು ಕೋವಿಡ್ ಪರೀಕ್ಷೆ ವರದಿ ಬರುವವರೆಗೆ ಹೇಳಲಾಗುವುದಿಲ್ಲ' ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಶ್ರೀನಿವಾಸ್ ಪ್ರತಿಕ್ರಿಯಿಸಿದ್ದಾರೆ.

ಕೋವಿಡ್‌ನಿಂದ ತಂದೆ ಸಾವು: ಉರಿಯುತ್ತಿದ್ದ ಚಿತೆಗೆ ಹಾರಿದ ಮಗಳು

ಜೈಪುರ (ಪಿಟಿಐ): ಕೋವಿಡ್‌ನಿಂದ ಮೃತಪಟ್ಟ ವ್ಯಕ್ತಿಯ 34 ವರ್ಷದ ಪುತ್ರಿಯೊಬ್ಬಳು ಅಂತ್ಯಕ್ರಿಯೆ ವೇಳೆ ಚಿತೆ ಮೇಲೆ ಹಾರಿ ಪ್ರಾಣ ಕಳೆದುಕೊಳ್ಳಲು ಯತ್ನಿಸಿರುವ ಘಟನೆ ರಾಜಸ್ಥಾನದ ಬರ್ಮರ್‌ನಲ್ಲಿ ನಡೆದಿದೆ.

ಮಹಿಳೆಗೆ ಶೇ 70ರಷ್ಟು ಸುಟ್ಟ ಗಾಯವಾಗಿದ್ದು, ಜೋಧಪುರ ಆಸ್ಪತ್ರೆಗೆ ದಾಖಲಿಸಲಾಗಿದೆ.

'74 ವರ್ಷದ ದಾಮೋದರ್ ದಾಸ್ ಶಾರದಾ ಎಂಬ ವ್ಯಕ್ತಿ ಕೋವಿಡ್‌ನಿಂದ ಮೃತಪಟ್ಟಿದ್ದರು. ಅವರ ಮೃತದೇಹದ ಅಂತ್ಯಕ್ರಿಯೆ ನಡೆಸುವ ವೇಳೆ ಮೂವರು ಹೆಣ್ಣು ಮಕ್ಕಳ ಪೈಕಿ ಕಿರಿಯವಳಾದ ಚಂದ್ರ ಶಾರದಾ ಅವರು ಅಪ್ಪನ ಅಗಲಿಕೆಯ ನೋವಿನಲ್ಲಿ ಉರಿಯುತ್ತಿದ್ದ ಚಿತೆ ಮೇಲೆ ಹಾರಿದ್ದರು. ದಾಸ್ ಅವರ ಪತ್ನಿ ಕೆಲ ಸಮಯದ ಹಿಂದೆ ನಿಧನರಾಗಿದ್ದರು' ಎಂದು ಕೊತ್ವಾಲಿ ಪೊಲೀಸ್ ಠಾಣಾಧಿಕಾರಿ ಪ್ರೇಮ್ ಪ್ರಕಾಶ್ ಹೇಳಿದ್ದಾರೆ.

'ಪ್ರಜಾವಾಣಿ ಕೋವಿಡ್–19 ಕೈಪಿಡಿ' ಪ್ರತಿಕ್ರಿಯೆಗಳು





'ಪ್ರಜಾವಾಣಿ' ಹೊರತಂದಿರುವ ಕೋವಿಡ್–19 ಮಾರ್ಗದರ್ಶಿಯು ಕೋವಿಡ್ ಕುರಿತಾದ ಎಲ್ಲ ಮಾಹಿತಿ ನೀಡುತ್ತದೆ. ಇದು, ತುಂಬಾ ಉಪಯುಕ್ತವಾಗಿದ್ದು, ಕೋವಿಡ್–19 ರ ಕುರಿತು ಜನರಲ್ಲಿರುವ ಗೊಂದಲಗಳಿಗೆ ಸ್ಪಷ್ಟ ಉತ್ತರಗಳನ್ನು ನೀಡುತ್ತದೆ. ಇದಕ್ಕಾಗಿ ಪತ್ರಿಕೆಗೆ ಅಭಿನಂದನೆಗಳು.
ಡಾ.ಸಿ.ಎನ್.ಮಂಜುನಾಥ್, ಜಯದೇವ ಹೃದ್ರೋಗ ಹಾಗೂ ಸಂಶೋಧನಾ ಸಂಸ್ಥೆಯ ನಿರ್ದೇಶಕ



'ಕೋವಿಡ್–19'ರ ಕುರಿತು ಕೈಪಿಡಿ ನೀಡಿರುವ 'ಪ್ರಜಾವಾಣಿ'ಗೆ ಅಭಿನಂದನೆಗಳು. ಕೈಪಿಡಿ ಜನರಿಗೆ ಉಪಯುಕ್ತವಾಗಲಿದ್ದು, ಸಂಪೂರ್ಣ ಮಾಹಿತಿಯನ್ನು ಒಳಗೊಂಡಿದೆ.
ಕೆ.ಎಸ್.ರವೀಂದ್ರನಾಥ್, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ



ಕೈಪಿಡಿಯಲ್ಲಿ ಕೋವಿಡ್ ಬಗ್ಗೆ ಕೂಲಂಕಷವಾಗಿ ಮಾಹಿತಿ ನೀಡಿದ್ದಾರೆ. ಕೋವಿಡ್ ವಿರುದ್ಧ ಹೋರಾಡಲು, ಜನರ ಭೀತಿ ಹೋಗಲಾಡಿಸಲು ಹಾಗೂ ಜಾಗೃತಿ ಮೂಡಿಸಲು ಕೈಪಿಡಿ ಸಹಾಯಕಾರಿ. ಮಿಥ್ಯೆಗಳ ಸಂದರ್ಭದಲ್ಲಿ ಸತ್ಯ ದರ್ಶನ ಮಾಡಿಸಿದೆ. ಇದನ್ನು ಹೊರತಂದ 'ಪ್ರಜಾವಾಣಿ' ಬಳಗಕ್ಕೆ ಧನ್ಯವಾದ.
ರುದ್ರೇಶ್ ಅದರಂಗಿ, ಕನ್ನಡ ಸಹಾಯಕ ಪ್ರಾಧ್ಯಾಪಕ, ಸರ್ಕಾರಿ ಕಲಾ ಕಾಲೇಜು, ಬೆಂಗಳೂರು

'ಪ್ರಜಾವಾಣಿ' ಸಿದ್ಧಪಡಿಸಿರುವ 'ಕೋವಿಡ್–19 ಕೈಪಿಡಿ'ಯು ಬಹಳ ಉಪಯುಕ್ತವಾಗಿದೆ.
ಎಂ.ಕೆ.ನಾಗರಾಜ್
ನಿವೃತ್ತ ಐಜಿಪಿ

'ಪ್ರಜಾವಾಣಿ' ಕೋವಿಡ್ ಕೈಪಿಡಿಯು ಸಂಕಷ್ಟ ಕಾಲದಲ್ಲಿ ಜನರಿಗೆ ಬಹಳ ಉಪಯುಕ್ತವಾದ ಮಾಹಿತಿಯನ್ನು ನೀಡಿರುವುದು ಏಕಕಾಲಕ್ಕೆ ಅಚ್ಚರಿ ಮತ್ತು ಸಂತೋಷವನ್ನು ತಂದಿದೆ.
ಸಿದ್ದರಾಮೇಶ್ವರ ಗೌಡ, ಲೆಕ್ಕಪರಿಶೋಧಕರು, ಬಳ್ಳಾರಿ

'ಕೋವಿಡ್ ಕೈಪಿಡಿ' ತುಂಬಾ ಉಪಯುಕ್ತ ಮಾಹಿತಿ ಕೊಡುತ್ತದೆ. ಇಂಗ್ಲೆಂಡಿನಲ್ಲಿ ಇಂತಹ ಕೈಪಿಡಿಗಳು ಸಾಮಾನ್ಯ . ನಮ್ಮ ಕರುನಾಡಿನಲ್ಲೂ ಇಂತಹ ಉತ್ತಮ ಕೈಪಿಡಿ ಹೊರ ತಂದ 'ಪ್ರಜಾವಾಣಿ' ತಂಡಕ್ಕೆ ಅಭಿನಂದನೆಗಳು . ಜನರು ಇದರ ಸಂಪೂರ್ಣ ಲಾಭ ಪಡೆದು, ಕೋವಿಡ್ ರೋಗವನ್ನು ಸಂಪೂರ್ಣವಾಗಿ ತಡೆಗಟ್ಟಬೇಕು ಎನ್ನುವುದೇ ನಮ್ಮ ಆಸೆ .
ಡಾ.ಉಮೇಶ ನಾಗಲೋಟಿಮಠ, ಹಿರಿಯ ಶಸ್ತ್ರಚಿಕಿತ್ಸಕ, ಲಂಡನ್ (ಇಂಗ್ಲೆಂಡ್)

ಸಮಯ ಸ್ಪಷ್ಟವಿಲ್ಲ: ಸರ್ಕಾರದ ವೈಜ್ಞಾನಿಕ ಸಲಹೆಗಾರ ರಾಘವನ್

ಮೂರನೇ ಅಲೆ ಖಚಿತ: ಸಿದ್ಧತೆಗೆ ಕರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್‌ಗೆ ಕಾರಣವಾಗುವ ಸಾರ್ಸ್–ಕೋವ್–2 ವೈರಾಣು ವ್ಯಾಪಕವಾಗಿ ಹರಡಿರುವುದರಿಂದ ಕೋವಿಡ್–19ರ ಮೂರನೇ ಅಲೆಯಿಂದ ತಪ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ ಎಂದು ಕೇಂದ್ರ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರ ಕೆ. ವಿಜಯರಾಘವನ್ ಹೇಳಿದ್ದಾರೆ.

ಆದರೆ, ಮೂರನೇ ಯಾವಾಗ ಅಪ್ಪಳಿಸಬಹುದು ಎಂಬುದು ಸ್ಪಷ್ಟವಿಲ್ಲ. ಮೂರನೇ ಅಲೆಯನ್ನು ವೈಜ್ಞಾನಿಕವಾಗಿ ಎದುರಿಸಲು ದೇಶವು ಸಜ್ಜಾಗಬೇಕಾಗಿದೆ ಎಂದು ಅವರು ತಿಳಿಸಿದ್ದಾರೆ.

'ವೈರಾಣುವಿನಲ್ಲಿ ಏನೆಲ್ಲ ಪರಿವರ್ತನೆಗಳು ಆಗಬಹುದು, ಅವು ರೋಗ ನಿರೋಧಕ ಶಕ್ತಿ ಮತ್ತು ಲಸಿಕೆಯ ಪರಿಣಾಮದಿಂದ ಹೇಗೆ ತಪ್ಪಿಸಿಕೊಳ್ಳಬಹುದು ಎಂಬುದನ್ನು ವಿಜ್ಞಾನಿಗಳು ಪಟ್ಟಿ ಮಾಡಬೇಕು. ಹೀಗೆ ಮಾಡುವುದರಿಂದ ವೈರಾಣುವಿನಲ್ಲಿನ ಬದಲಾವಣೆಯನ್ನು ಎದುರಿಸಲು ನಾವು ತಾತ್ವಿಕವಾಗಿ ಮತ್ತು ಪ್ರಾಯೋಗಿಕವಾಗಿ ಸಿದ್ಧಾರಾಗುವುದು ಸಾಧ್ಯವಾಗುತ್ತದೆ' ಎಂದು ಅವರು ಹೇಳಿದ್ದಾರೆ.

ವೈರಾಣುವಿನ ಹೊಸ ರೂಪಾಂತರಗಳನ್ನು ಕೂಡ ನಿರ್ವಹಿಸಲು ಸಾಧ್ಯವಾಗುವಂತೆ ಲಸಿಕೆಯನ್ನು ಪರಿಷ್ಕರಿಸುವ ಕೆಲಸವೂ ಆಗಬೇಕು ಎಂದು ಅವರು ಸೂಚಿಸಿದ್ದಾರೆ.



ಕೋವಿಡ್–19 ರೋಗಿಗಳ ಕುಟುಂಬದ ಸದಸ್ಯರು ಖಾಲಿಯಾಗಿರುವ ಆಮ್ಲಜನಕ ಸಿಲಿಂಡರ್ ಭರ್ತಿ ಮಾಡಿಕೊಳ್ಳಲು ಕಾನ್ಪುರದ ಆಮ್ಲಜನಕ ಘಟಕವೊಂದರ ಎದುರು ಸಾಲುಗಟ್ಟಿರುವುದು —ಪಿಟಿಐ ಚಿತ್ರ

ವೈರಾಣುವಿನ ರೂಪಾಂತರ ತಳಿಗಳ ವರ್ತನೆಯಲ್ಲಿ ಹೆಚ್ಚಿನ ಬದಲಾವಣೆ ಇರುವುದಿಲ್ಲ. ಹಾಗಾಗಿ, ಜನರು ಕೋವಿಡ್ ತಡೆ ವರ್ತನೆಯನ್ನು ಅನುಸರಿಸುವುದು ಬಹಳ ಮುಖ್ಯ ಎಂದು ವಿಜಯರಾಘವನ್ ಅವರು ಸಲಹೆ ಕೊಟ್ಟಿದ್ದಾರೆ.

ಹೊಸ ಹೊಸ ರೂಪಾಂತರ ತಳಿಗಳೇ ಕೋವಿಡ್ ವ್ಯಾಪಕವಾಗಿ ಹರಡಲು ಮತ್ತು ಅದರ ಶಕ್ತಿ ಹೆಚ್ಚಲು ಕಾರಣ. ದೇಹದಲ್ಲಿ ರೂಪುಗೊಂಡ ರೋಗನಿರೋಧಕತೆಯು ಕುಗ್ಗುತ್ತದೆ. ಹಾಗಾಗಿ, ಸೋಂಕು ತಗಲಿದ ವ್ಯಕ್ತಿಗೆ ಮತ್ತೆ ಸೋಂಕು ತಗಲಬಹುದು. ಕುಗ್ಗಿದ ರೋಗನಿರೋಧಕತೆ ಮತ್ತು ವರ್ತನೆಯಲ್ಲಿ ನಿರ್ಲಕ್ಷ್ಯವೇ ಎರಡನೇ ಅಲೆಯನ್ನು ತೀವ್ರವಾಗಿಸಿದೆ ಎಂದು ಅವರು ವಿಶ್ಲೇಷಿಸಿದ್ದಾರೆ.

ಮುಖ್ಯಾಂಶಗಳು

- ಭಾರತೀಯ ರೂಪಾಂತರ ತಳಿಯ ಹರಡುವಿಕೆಯೇ ವ್ಯಾಪಕ
- ಬ್ರಿಟನ್ ತಳಿಯ ಹರಡುವಿಕೆ ಭಾರತದಲ್ಲಿ ನಿಧಾನವಾಗಿದೆ
- ಬೆಂಗಳೂರು, ಎರ್ನಾಕುಲಂ, ಕಣ್ಣೂರು, ಕಾನ್ಪುರ ನಗರಗಳ ಸ್ಥಿತಿ ಈಗ ಕಳವಳಕಾರಿ

ದೇಶದಲ್ಲಿ ಒಂದೇ ದಿನ 3,780 ಸಾವು

ನವದೆಹಲಿ (ಪಿಟಿಐ): 'ದೇಶದಲ್ಲಿ ಒಂದೇ ದಿನ ಕೋವಿಡ್‌ನಿಂದ 3,780 ಮಂದಿ ಮೃತಪಟ್ಟಿದ್ದು, ಒಟ್ಟು ಸಾವಿನ ಸಂಖ್ಯೆ 2,26,188ಕ್ಕೆ ಏರಿಕೆಯಾಗಿದೆ. ಹೊಸದಾಗಿ 3,82,315 ಪ್ರಕರಣಗಳು ವರದಿಯಾಗಿವೆ' ಎಂದು ಕೇಂದ್ರ ಆರೋಗ್ಯ ಸಚಿವಾಲಯ ಬುಧವಾರ ತಿಳಿಸಿದೆ. ಒಟ್ಟು ಪ್ರಕರಣಗಳ ಸಂಖ್ಯೆ 2,06,65,148ಕ್ಕೆ ಹೆಚ್ಚಿದೆ. ಸಕ್ರಿಯ ಪ್ರಕರಣಗಳು 34,87,229ಕ್ಕೆ ಏರಿಕೆಯಾಗಿದ್ದು, ಒಟ್ಟು ಪ್ರಕರಣಗಳ ಪೈಕಿ ಶೇಕಡ 16.87ರಷ್ಟು ಇದೆ.

ಪೂರೈಕೆ ವಿಳಂಬ: ಕೋವಿಡ್ ಲಸಿಕೆ 'ನೋ ಸ್ಟಾಕ್'!

ಒಂದನೇ ಪುಟದಿಂದ...

18 ವರ್ಷ ದಾಟಿದವರಿಗೆ ಲಸಿಕೆ ನೀಡುವ ಉದ್ದೇಶದಿಂದ 2 ಕೋಟಿ ಡೋಸ್ ಕೋವಿಶೀಲ್ಡ್ ಖರೀದಿಗೆ ವಾರದ ಹಿಂದೆಯೇ ಉತ್ಪಾದಕ ಕಂಪನಿಗೆ ಸರ್ಕಾರ ಹಣ ಪಾವತಿಸಿದೆ. ಆದರೆ, ಅದರಲ್ಲಿ ಈವರೆಗೆ ಕೇವಲ 3 ಲಕ್ಷ ಮಾತ್ರ ಸರಬರಾಜು ಆಗಿದೆ. ಹೀಗಾಗಿ, ಬೆಂಗಳೂರಿನಲ್ಲಿ ಮಾತ್ರ 18ರಿಂದ 44 ವರ್ಷದ 5,136 ಜನರಿಗೆ ಲಸಿಕೆ ಹಾಕಲಾಗಿದೆ.

'ಯುವ ಸಮೂಹಕ್ಕೆ ಲಸಿಕೆ ನೀಡುವ ಉದ್ದೇಶದಿಂದ ಸೋಮವಾರ (ಮೇ 3) ಮತ್ತೆ 1 ಕೋಟಿ ಕೋವ್ಯಾಕ್ಸಿನ್ ಡೋಸ್ ಖರೀದಿಸಲು ಸರ್ಕಾರ ಉತ್ಪಾದಕ ಕಂಪನಿಗೆ ಹಣ ಪಾವತಿಸಿದೆ. ಹೀಗೆ, ಈವರೆಗೆ ಒಟ್ಟು 3 ಕೋಟಿ ಡೋಸ್ ಕೋವಿಡ್ ಲಸಿಕೆ ಖರೀದಿಗೆ ಹಣ ಪಾವತಿಸಲಾಗಿದೆ. ಆದರೆ, ಕೇವಲ 3 ಲಕ್ಷ ಕೋವಿಶೀಲ್ಡ್ ಮಾತ್ರ ಪೂರೈಕೆ ಆಗಿದೆ. ಸದ್ಯ ಅದನ್ನು ಮಾತ್ರ 18 ವರ್ಷ ದಾಟಿದವರಿಗೆ ನೀಡುತ್ತಿದ್ದೇವೆ' ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಮಾಹಿತಿ ನೀಡಿದರು.

'ಮುಂದಿನ ವಾರದಲ್ಲಿ ಸುಮಾರು 7 ಲಕ್ಷ ಕೋವಿ ಶೀಲ್ಡ್ ಕಳುಹಿಸುವುದಾಗಿ ಕಂಪನಿಯವರು ಭರವಸೆ ನೀಡಿದ್ದಾರೆ. ಕೋವ್ಯಾಕ್ಸಿನ್‌ಗೆ ₹ 400, ಕೋವಿಶೀಲ್ಡ್‌ಗೆ ₹ 300 ದರ ನೀಡಿ ಸರ್ಕಾರ ಖರೀದಿಸುತ್ತಿದೆ. 45 ವರ್ಷ ದಾಟಿದವರಿಗೆ ನೀಡಲು ಕೇಂದ್ರ ಸರ್ಕಾರ ಸೋಮವಾರ 5 ಲಕ್ಷ ಕೋವಿಶೀಲ್ಡ್ ಪೂರೈಸಿದೆ. ಜಿಲ್ಲೆಗಳಲ್ಲಿ ಈಗಾಗಲೇ ಲಸಿಕೆ ಪಡೆದವರ ಸರಾಸರಿ ಆಧರಿಸಿ, ಬಂದ ಡೋಸ್‌ಗಳನ್ನು ವಿವಿಧ ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗುತ್ತಿದೆ. ಕೋವ್ಯಾಕ್ಸಿನ್ ಲಸಿಕೆ 2–3 ದಿನಗಳಲ್ಲಿ ಪೂರೈಕೆ ಆಗಬಹುದು' ಎಂದರು.

'ನಮ್ಮಲ್ಲಿ ಸದ್ಯ 5.75 ಲಕ್ಷ ಕೋವಿಶೀಲ್ಡ್ ಲಸಿಕೆ ಇದೆ. ಕೋವ್ಯಾಕ್ಸಿನ್ ಕೇವಲ 30 ಸಾವಿರ ಡೋಸ್ ಮಾತ್ರ ಇದೆ. ಆರಂಭದಲ್ಲಿ ಲಸಿಕೆ ಹಾಕಿಸಿಕೊಳ್ಳಲು ಜನರು ನಿರುತ್ಸಾಹ ತೋರಿಸಿದ್ದರು. ಈಗ ಹೆಚ್ಚಿನ ಸಂಖ್ಯೆಯಲ್ಲಿ ಮುಂದೆ ಬರುತ್ತಿದ್ದಾರೆ. ಉತ್ಪಾದಕ ಕಂಪನಿಗಳು ಸರ್ಕಾರಿ ವಲಯಕ್ಕೆ ನಿರೀಕ್ಷಿತ ಪ್ರಮಾಣದಲ್ಲಿ ಪೂರೈಕೆ ಮಾಡದೇ ಇರುವುದರಿಂದ ಸಮಸ್ಯೆ ಆಗಿದೆ. 3 ದಿನಗಳಿಗೊಮ್ಮೆ ಕೇಂದ್ರದಿಂದ 4 ಲಕ್ಷದಿಂದ 5 ಲಕ್ಷ ಡೋಸ್ ಪೂರೈಕೆ ಆಗುತ್ತಿದೆ. ಆರೋಗ್ಯ ಇಲಾಖೆಯಿಂದ ಗುರುತಿಸಿದ್ದ ಖಾಸಗಿ ಲಸಿಕಾ ಕೇಂದ್ರಗಳಿಗೆ ಈವರೆಗೆ ಸರ್ಕಾರಕ್ಕೆ ಬಂದ ಡೋಸ್‌ಗಳನ್ನೇ ಕಳುಹಿಸುತ್ತಿದ್ದೆವು. ಇನ್ನು ಮುಂದೆ ಖಾಸಗಿಯವರು ನೇರವಾಗಿ ಉತ್ಪಾದಕ ಕಂಪನಿಗಳಿಂದ ಖರೀದಿಸಿ ಲಸಿಕೆ ವಿತರಿಸಬೇಕು' ಎಂದರು.

24 ಗಂಟೆ: 50 ಸಾವಿರ ದಾಟಿದ ಕೋವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪೀಡಿತರ ಸಂಖ್ಯೆ ಹಾಗೂ ಸೋಂಕಿನ ತೀವ್ರತೆಗೆ ಮೃತಪಡುವವರ ಸಂಖ್ಯೆ ಗಣನೀಯ ಏರಿಕೆ ಕಂಡಿದೆ. ಕೇವಲ 24 ಗಂಟೆಗಳ ಅವಧಿಯಲ್ಲಿ 50,112 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ಸೋಂಕು ದೃಢ ಪ್ರಮಾಣವು ಶೇ 32.28ಕ್ಕೆ ಏರಿಕೆಯಾಗಿದೆ. ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ 161 ಮಂದಿ ಸೇರಿದಂತೆ ರಾಜ್ಯದಲ್ಲಿ 346 ಮಂದಿ ಮೃತಪಟ್ಟಿರುವುದು ಖಚಿತಪಟ್ಟಿದೆ. 14ರಿಂದ 93 ವರ್ಷದವರೆಗಿನವರು ಮರಣ ಹೊಂದಿದ್ದು, ಬಹುತೇಕರು ಉಸಿರಾಟದ ಸಮಸ್ಯೆ ಎದುರಿಸಿದ್ದಾರೆ. ಈ ತಿಂಗಳು ಕೇವಲ 5 ದಿನಗಳಲ್ಲಿಯೇ 1,361 ಮಂದಿ ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 16,884ಕ್ಕೆ ಏರಿಕೆಯಾಗಿದೆ.

ಒಂದು ದಿನದ ಅವಧಿಯಲ್ಲಿ 1.55 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಮತ್ತೆ 18 ಮಂದಿಯಲ್ಲಿ ಬ್ರಿಟನ್ ಮಾದರಿಯ ವೈರಾಣು ಕಾಣಿಸಿಕೊಂಡಿದೆ. ಇದರಿಂದಾಗಿ ಹೊಸ ಮಾದರಿಯ ಕೋವಿಡ್ ಪ್ರಕರಣಗಳ ಸಂಖ್ಯೆ 86ಕ್ಕೆ ಏರಿಕೆಯಾಗಿದೆ. ಈ ತಿಂಗಳು ಕೇವಲ ಐದು ದಿನಗಳಲ್ಲಿಯೇ 2.17 ಲಕ್ಷ ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ. ಪರಿಣಾಮ ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಏರಿಕೆ ಕಂಡಿದ್ದು, ಸದ್ಯ 4.87 ಲಕ್ಷ ಸೋಂಕಿತರು ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಈವರೆಗ ಸೋಂಕಿತರಾದವರ ಸಂಖ್ಯೆ 17.41ಲಕ್ಷ ದಾಟಿದೆ.

ರಾಜ್ಯದ 12 ಜಿಲ್ಲೆಗಳಲ್ಲಿ ಸಾವಿರಕ್ಕೂ ಅಧಿಕ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಬೆಂಗಳೂರಿನಲ್ಲಿ 23,106 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ಮೂರು ದಿನದೊಳಗೆ ಪ್ರಕಟಣೆ: ಗೃಹ ಸಚಿವ ಬಸವರಾಜ ಬೊಮ್ಮಾಯಿ

ಹಾಸಿಗೆ ಲಭ್ಯತೆ ಕುರಿತು ನಿತ್ಯ ಬುಲೆಟಿನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯೂ ಸೇರಿದಂತೆ ರಾಜ್ಯಾದ್ಯಂತ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆಗೆ ಲಭ್ಯವಿರುವ ಹಾಸಿಗೆಗಳ (ಬೆಡ್) ಸಂಖ್ಯೆ ಕುರಿತು ನಿತ್ಯವೂ ಬುಲೆಟಿನ್‌ನಲ್ಲಿ ಮಾಹಿತಿ ನೀಡುವ ವ್ಯವಸ್ಥೆ ಜಾರಿಗೊಳಿಸಲಾಗುವುದು ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕಂದಾಯ ಸಚಿವ ಆರ್. ಅಶೋಕ ಮತ್ತು ಕೋವಿಡ್ ವಾರ್ ರೂಂ ಮುಖ್ಯಸ್ಥರೂ ಆಗಿರುವ ಅರಣ್ಯ ಸಚಿವ ಅರವಿಂದ ಲಿಂಬಾವಳಿ ಅವರೊಂದಿಗೆ ಆರೋಗ್ಯ ಸೌಧದಲ್ಲಿರುವ ಕೋವಿಡ್ ವಾರ್ ರೂಂಗೆ ಬುಧವಾರ ಭೇಟಿ ನೀಡಿ, ಅಧಿಕಾರಿಗಳ ಜತೆ ಸಭೆ ನಡೆಸಿದ ಬಳಿಕ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು.

'ಪ್ರತಿದಿನವೂ ರಾಜ್ಯದಲ್ಲಿ ಎಷ್ಟು ಹಾಸಿಗೆಗಳು ಭರ್ತಿಯಾಗಿವೆ? ಖಾಲಿ ಇವೆ? ಯಾವ ವಿಧದ ಹಾಸಿಗೆಗಳು, ಯಾವ ಪ್ರದೇಶದಲ್ಲಿ ಖಾಲಿ ಇವೆ ಎಂಬ ಮಾಹಿತಿಯನ್ನೂ ಪ್ರಕಟಿಸಲಾಗುವುದು. ಎರಡರಿಂದ ಮೂರು ದಿನಗಳೊಳಗೆ ಹಾಸಿಗೆ ಲಭ್ಯತೆ ಕುರಿತ ಬುಲೆಟಿನ್ ಪ್ರಕಟಣೆ ಆರಂಭವಾಗಲಿದೆ' ಎಂದರು.

ವೈದ್ಯರಿಂದಲೇ ನಿರ್ಧಾರ

ಆರ್. ಅಶೋಕ ಮಾತನಾಡಿ, 'ಕೋವಿಡ್ ರೋಗಿ ತನಗೆ ಇಂತಹದ್ದೇ ಆಸ್ಪತ್ರೆಯಲ್ಲಿ ಹಾಸಿಗೆ ನೀಡಬೇಕು ಎಂದು ಬೇಡಿಕೆ ಇಡುವಂತಿಲ್ಲ. ಇನ್ನು ಮುಂದೆ ಕೋವಿಡ್ ಕೇಂದ್ರಗಳ ವೈದ್ಯರೇ ರೋಗಿ ಯಾವ ಆಸ್ಪತ್ರೆಗೆ ದಾಖಲಾಗಬೇಕು ಎಂಬುದನ್ನು ನಿರ್ಧರಿಸುತ್ತಾರೆ' ಎಂದು ಹೇಳಿದರು.

ಅಗತ್ಯವಿರುವ ಹಾಸಿಗೆಗಳ ಸಂಖ್ಯೆ, ಲಭ್ಯವಿರುವ ಹಾಸಿಗೆಗಳ ಸಂಖ್ಯೆ ಕುರಿತು ಸಭೆಯಲ್ಲಿ ಚರ್ಚಿಸಲಾಗಿದೆ. ಹೆಚ್ಚಿನ ಹಾಸಿಗೆಗಳನ್ನು ಪಡೆಯುವುದು ಮತ್ತು ವ್ಯವಸ್ಥೆ ಮಾಡುವ ಸಂಬಂಧ ಗುರುವಾರ ಖಾಸಗಿ ವೈದ್ಯಕೀಯ ಕಾಲೇಜುಗಳ ಆಡಳಿತ ಮಂಡಳಿಗಳ ಪದಾಧಿಕಾರಿಗಳ ಸಭೆ ಕರೆಯಲಾಗಿದೆ. ಹಾಸಿಗೆ ಒದಗಿಸುವುದು, ಊಟದ ವ್ಯವಸ್ಥೆ ಸೇರಿದಂತೆ ಕೋವಿಡ್ ಚಿಕಿತ್ಸೆಯಲ್ಲಿ ಸುಧಾರಣೆ ತರುವ ಕುರಿತು ಚರ್ಚಿಸಲಾಗುವುದು ಎಂದರು.

ಆಮ್ಲಜನಕ ಪೂರೈಕೆ ಸರ್ಕಾರದ ಹೊಣೆ: ಸಿದ್ದರಾಮಯ್ಯ

ಬೆಂಗಳೂರು: 'ರಾಜ್ಯದಲ್ಲಿ ಆಮ್ಲಜನಕ ಕೊರತೆ ಸಂಭವಿಸದಂತೆ ನೋಡಿಕೊಳ್ಳುವುದು ಸರ್ಕಾರದ ಜವಾಬ್ದಾರಿ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಮುಖ್ಯ ಕಾರ್ಯದರ್ಶಿ ಮತ್ತು ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಜೊತೆ ಬುಧವಾರ ಚರ್ಚಿಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಸಂಭವಿಸಿದ ಘಟನೆಯ ಬಗ್ಗೆ ಅಧಿಕಾರಿಗಳೊಂದಿಗೆ ಮಾತನಾಡಿದ್ದೇನೆ. ಜಿಲ್ಲೆಗಳಿಗೆ ಅಗತ್ಯಕ್ಕೆ ಅನುಗುಣವಾಗಿ ಆಮ್ಲಜನಕ ಒದಗಿಸಲು ಕ್ರಮ ಕೈಗೊಳ್ಳುವಂತೆ ಹೇಳಿದ್ದೇನೆ' ಎಂದರು.

'ಕರ್ನಾಟಕದಲ್ಲಿ ಉತ್ಪಾದನೆ ಆಗುವ ಆಮ್ಲಜನಕವನ್ನು ಕೇಂದ್ರ ಸರ್ಕಾರ ರಾಜ್ಯದ ಬಳಕೆಗೇ ಮೀಸಲಿಡಬೇಕು. ಈ ಬಗ್ಗೆ ಮುಖ್ಯಮಂತ್ರಿ ಮತ್ತು ರಾಜ್ಯದ ಸಂಸದರು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು' ಎಂದು ಆಗ್ರಹಿಸಿದರು.

ದಿನವೂ 1,200 ಟನ್ ಕೊಡಿ

ಒಂದನೇ ಪುಟದಿಂದ...

'ಒಂದು ವಾರದ ಅವಧಿಯಲ್ಲೇ 1.60 ಲಕ್ಷದಷ್ಟು ಹೊಸ ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ. ಮಂಗಳವಾರದ (ಮೇ 4) ವೇಳೆಗೆ ರಾಜ್ಯದಲ್ಲಿನ ಸಕ್ರಿಯ ಕೋವಿಡ್ ಪ್ರಕರಣಗಳ ಸಂಖ್ಯೆ 4.64 ಲಕ್ಷ ದಾಟಿದೆ' ಎಂಬ ಮಾಹಿತಿಯನ್ನು ನ್ಯಾಯಪೀಠ ವಿಚಾರಣೆ ವೇಳೆ ಉಲ್ಲೇಖಿಸಿತು.

'ರಾಜ್ಯದಲ್ಲೇ ಆಮ್ಲಜನಕ ಉತ್ಪಾದನಾ ಘಟಕಗಳಿವೆ. ಆದರೂ, ವಿಶಾಖಪಟ್ಟಣ, ಒಡಿಶಾ ಮತ್ತು ಕೇರಳದಿಂದ ಆಮ್ಲಜನಕ ತರಿಸಿಕೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಲಾಗಿದೆ' ಎಂದು ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವಡಗಿ ತಿಳಿಸಿದರು. 'ಕೇಂದ್ರ ಸರ್ಕಾರ ರಾಜ್ಯದಲ್ಲಿನ ಪರಿಸ್ಥಿತಿಯ ಗಂಭೀರತೆಯನ್ನು ಮನಗಂಡು, ಇಲ್ಲಿ ಉತ್ಪಾದನೆಯಾಗುವ ಆಮ್ಲಜನಕವನ್ನೇ ಬಳಸಿಕೊಳ್ಳಲು ಅವಕಾಶ ನೀಡಬಹುದು' ಎಂದು ವಿಭಾಗೀಯ ಪೀಠ ಹೇಳಿತು.

ಸಕಾರಾತ್ಮಕ ನಿರ್ಧಾರಕ್ಕೆ ಸೂಚನೆ: ಕೋವಿಡ್ ರೋಗಿಗಳಲ್ಲಿ ಶ್ವಾಸಕೋಶದ ಅತಿಯಾದ ಸೋಂಕಿನಿಂದ ಬಳಲುತ್ತಿರುವವರ ಚಿಕಿತ್ಸೆಗೆ ಬಳಸುತ್ತಿರುವ ರೆಮ್‌ಡಿಸಿವಿರ್ ಚುಚ್ಚುಮದ್ದಿನ ಪೂರೈಕೆ ಬಗ್ಗೆಯೂ ವಿಚಾರಣೆ ನಡೆಯಿತು. ರಾಜ್ಯ ಸರ್ಕಾರ ಮೇ 1 ರಿಂದ 15ರವರೆಗಿನ ಅವಧಿಯಲ್ಲಿ 4 ಲಕ್ಷದಿಂದ 5 ಲಕ್ಷ ವಯಲ್ಸ್ ರೆಮ್‌ಡಿಸಿವಿರ್ ಚುಚ್ಚುಮದ್ದು ಪೂರೈಸುವಂತೆ ಕೇಂದ್ರಕ್ಕೆ ಬೇಡಿಕೆ ಸಲ್ಲಿಸಿದೆ.

'ರಾಜ್ಯ ಸರ್ಕಾರದ ಬೇಡಿಕೆಯ ಮೂರನೇ ಒಂದರಷ್ಟು ರೆಮ್‌ಡಿಸಿವಿರ್ ಚುಚ್ಚುಮದ್ದು ಮಾತ್ರ ಪೂರೈಕೆಯಾಗುತ್ತಿದೆ. ಕೇಂದ್ರ ಸರ್ಕಾರ ಈ ವಿಚಾರದಲ್ಲಿ ಸಕಾರಾತ್ಮಕವಾಗಿ ನಿರ್ಧಾರ ಕೈಗೊಳ್ಳಬೇಕು' ಎಂದು ನ್ಯಾಯಪೀಠ ಸೂಚಿಸಿತು.

ನಟ ದೊಡ್ಡಣ್ಣ ಆರೋಗ್ಯದ ಕುರಿತು ವದಂತಿ



ಬೆಂಗಳೂರು: ಕೋವಿಡ್ ಎರಡನೇ ಅಲೆಯ ಈ ಸಂದರ್ಭದಲ್ಲಿ ಕಳೆದ ಕೆಲ ದಿನಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳ ಹಾವಳಿ ಹೆಚ್ಚಾಗಿದೆ. ಬುಧವಾರ ಹಿರಿಯ ನಟ ದೊಡ್ಡಣ್ಣ ಅವರ ಚಿತ್ರದ ಜೊತೆಗೆ 'ಕನ್ನಡ ಚಿತ್ರರಂಗದ ಹಾಸ್ಯ ನಟ ದೊಡ್ಡಣ್ಣ ಇನ್ನಿಲ್ಲ. ಭಾವಪೂರ್ಣ ಶ್ರದ್ಧಾಂಜಲಿ' ಎನ್ನುವ ಅಡಿಬರಹವಿರುವ ಪೋಸ್ಟ್ ಹರಿದಾಡಿತ್ತು.

ಈ ವದಂತಿಯಿಂದ ಸಾಕಷ್ಟು ಅಭಿಮಾನಿಗಳು ಹಾಗೂ ಕುಟುಂಬ ಸದಸ್ಯರು ಒಂದು ಕ್ಷಣ ಆಘಾತಕ್ಕೊಳಗಾಗಿದ್ದರು. ಸೂಕ್ತ ಮಾಹಿತಿ ಅರಿಯದ ಹಲವರು ದೊಡ್ಡಣ್ಣ ಅವರ ಚಿತ್ರವನ್ನು ಹಾಕಿ ಶ್ರದ್ಧಾಂಜಲಿ ಅರ್ಪಿಸಿದ್ದರು. ತಕ್ಷಣದಲ್ಲೇ ಈ ಕುರಿತು ಸ್ಪಷ್ಟನೆ ನೀಡಿದ ನಟ ದೊಡ್ಡಣ್ಣ, 'ಸಾಮಾಜಿಕ ಜಾಲತಾಣಗಳಲ್ಲಿ ನನ್ನ ಫೋಟೊ ಹಾಕಿ, ನಾನು ಮೃತಪಟ್ಟಿದ್ದೇನೆ ಎಂದು ಹಾಕಿದ್ದಾರೆ. ನನಗೆ ನೂರಾರು ಕರೆಗಳು ಬಂದಿದೆ. ನಾನು ಮನೆಯಲ್ಲೇ ಇದ್ದೀನಿ, ಆರೋಗ್ಯವಾಗಿದ್ದೇನೆ. ಯಾರೂ ಭಯಪಡುವ ಅವಶ್ಯಕತೆ ಇಲ್ಲ. ಕನ್ನಡ ನಾಡಿನ ಜನರ ಆಶೀರ್ವಾದ ಇರುವವರೆಗೂ ನನಗೆ ಏನೂ ಆಗುವುದಿಲ್ಲ. ಆಯಸ್ಸು ಜಾಸ್ತಿಯಾಯಿತು, ಕಂಟಕ ಬಗೆಹರಿಯಿತು' ಎಂದು ವಿಡಿಯೊದಲ್ಲಿ ಉಲ್ಲೇಖಿಸಿದ್ದಾರೆ.

ಕೇಂದ್ರದ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕ್ರಿಯೆಗೆ 'ಸುಪ್ರೀಂ' ತಡೆ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ನಿರ್ದೇಶನಗಳನ್ನು ಪಾಲಿಸಿಲ್ಲ ಎಂಬ ಆರೋಪದಲ್ಲಿ ಕೇಂದ್ರ ಸರ್ಕಾರದ ಅಧಿಕಾರಿಗಳ ವಿರುದ್ಧ ದೆಹಲಿ ಹೈಕೋರ್ಟ್ ಆರಂಭಿಸಿದ್ದ ನ್ಯಾಯಾಂಗ ನಿಂದನೆ ಪ್ರಕ್ರಿಯೆಗೆ ಸುಪ್ರೀಂ ಕೋರ್ಟ್ ಬುಧವಾರ ತಡೆ ನೀಡಿದೆ. ಜತೆಗೆ, ದೆಹಲಿಗೆ ಪ್ರತಿ ದಿನ 700 ಟನ್ ವೈದ್ಯಕೀಯ ಆಮ್ಲಜನಕ ಪೂರೈಸಲು ಮಾಡಿಕೊಂಡಿರುವ ಯೋಜನೆಯನ್ನು ಗುರುವಾರ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

'ಅಧಿಕಾರಿಗಳನ್ನು ಜೈಲಿಗೆ ಹಾಕಿದರೆನಗರಕ್ಕೆಆಮ್ಲಜನಕಪೂರೈಕೆಆಗುವುದಿಲ್ಲ. ಮೊದಲಿಗೆ, ಜನರ ಜೀವಗಳು ಸುರಕ್ಷಿತ ಎಂಬುದನ್ನು ಖಾತರಿಪಡಿಸೋಣ' ಎಂದು ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಎಂ.ಆರ್. ಶಾ ಅವರ ಪೀಠವು ಹೇಳಿದೆ.

ಕೋವಿಡ್–19ರ ಎರಡನೇ ಅಲೆಯು 'ಅಖಿಲ ಭಾರತ' ವ್ಯಾಪ್ತಿಯ ಪಿಡುಗು. ಈ ಪಿಡುಗು ನಿಭಾಯಿಸಲು ಕೇಂದ್ರ ಸರ್ಕಾರವು ಏನನ್ನೂ ಮಾಡುತ್ತಿಲ್ಲ ಎಂಬುದನ್ನು ಯಾರೂ ಅಲ್ಲಗಳೆಯಲಾಗದು ಎಂದು ಪೀಠವು ಹೇಳಿದೆ.

ನ್ಯಾಯಾಂಗ ನಿಂದನೆ ಪ್ರಕ್ರಿಯೆ ಏಕೆ ನಡೆಸಬಾರದು ಎಂದು ಪ್ರಶ್ನಿಸಿ ನೀಡಿದ್ದ ನೋಟಿಸ್ ವಿರುದ್ಧ ಕೇಂದ್ರ ಸರ್ಕಾರ ಸಲ್ಲಿಸಿದ್ದ ಅರ್ಜಿಯ ತುರ್ತು ವಿಚಾರಣೆಯನ್ನು ಪೀಠವು ನಡೆಸಿತು. ಕೇಂದ್ರದ ಇಬ್ಬರು ಹಿರಿಯ ಅಧಿಕಾರಿಗಳು ಖುದ್ದು ಹಾಜರಾಗಬೇಕು ಎಂದೂ ಹೈಕೋರ್ಟ್ ಸೂಚಿಸಿತ್ತು. ದೆಹಲಿಗೆ ಪ್ರತಿ ದಿನ 700 ಟನ್ ಆಮ್ಲಜನಕ ಪೂರೈಸಬೇಕು ಎಂದು ಸುಪ್ರೀಂ ಕೋರ್ಟ್ ನೀಡಿದ್ದ ನಿರ್ದೇಶವನ್ನು ಈ ಅಧಿಕಾರಿಗಳು ಪಾಲಿಸಿಲ್ಲ ಎಂದು ಹೈಕೋರ್ಟ್ ಹೇಳಿತ್ತು. ಬುಧವಾರವೂ ದೆಹಲಿಗೆ 555 ಟನ್ ಆಮ್ಲಜನಕ ಮಾತ್ರ ಪೂರೈಕೆ ಆಗಿದೆ.

'ಆಮ್ಲಜನಕ ಪೂರೈಕೆಗೆ ಏನಾದರೂ ವ್ಯವಸ್ಥೆ ಮಾಡಿಕೊಳ್ಳಲೇಬೇಕು. ನಾವು ದೆಹಲಿಯ ಜನರಿಗೆ ಉತ್ತರದಾಯಿಗಳು' ಎಂದು ಪೀಠ ಹೇಳಿದೆ.

'ನಾವೂ ದೆಹಲಿಯಲ್ಲಿಯೇ ಇದ್ದೇವೆ. ಅಸಹಾಯಕರಾಗಿದ್ದೇವೆ ಮತ್ತು ಸದಾ ದೂರವಾಣಿಯಲ್ಲಿ ಮಾತನಾಡುತ್ತಿರುವ ಸ್ಥಿತಿ ನಿರ್ಮಾಣ ಆಗಿದೆ. ಪೌರರ ಪರಿಸ್ಥಿತಿ ಏನು ಎಂಬುದನ್ನು ನಾವು ಊಹಿಸಬಹುದಾಗಿದೆ. ವಕೀಲರು ಸೇರಿದಂತೆ ಜನರು ನೆರವಿಗಾಗಿ ತಮ್ಮ ಕಚೇರಿಗೆ ಕರೆ ಮಾಡುತ್ತಿದ್ದಾರೆ' ಎಂದು ಚಂದ್ರಚೂಡ್ ಅವರು ಹೇಳಿದ್ದಾರೆ.

'ಸಿ.ಡಿ ಪ್ರಕರಣದಿಂದ ಹಿಂದೆ ಸರಿಯಲು ವಕೀಲರಿಗೆ ಆಮಿಷ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿ.ಡಿ ಪ್ರಕರಣದಿಂದ ಹಿಂದೆ ಸರಿಯುವಂತೆ ನನ್ನ ವಕೀಲರಿಗೆ ಶಾಸಕ ರಮೇಶ ಜಾರಕಿಹೊಳಿ ಕಡೆಯವರು ಒತ್ತಡ ಹೇರುತ್ತಿದ್ದು, ಇದಕ್ಕಾಗಿ ಕೋಟ್ಯಂತರ ಹಣ ನೀಡುವುದಾಗಿ ಆಮಿಷವೊಡ್ಡುತ್ತಿದ್ದಾರೆ' ಎಂದು ಆರೋಪಿಸಿ ಸಂತ್ರಸ್ತ ಯುವತಿ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಪತ್ರ ಬರೆದಿದ್ದಾರೆ.

'ಕೊರೊನಾ ನೆಪ ನೀಡಿ ಪ್ರಕರಣದ ವಿಚಾರಣೆಗೆ ರಮೇಶ ಜಾರಕಿಹೊಳಿ ಗೈರಾಗುತ್ತಿದ್ದಾರೆ. ಈ ಸಂದರ್ಭ ದುರುಪಯೋಗ ಮಾಡಿಕೊಂಡು, ಸಾಕ್ಷ್ಯ ನಾಶ ಹಾಗೂ ಪ್ರಕರಣದಿಂದ ಹಿಂದೆ ಸರಿಸಲು ಒತ್ತಡ ತರುತ್ತಿದ್ದಾರೆ. ನನ್ನ ವಕೀಲ ಕೆ.ಎನ್.ಜಗದೀಶ್ ಅವರಿಗೆ ಪ್ರಕರಣದಿಂದ ಹಿಂದೆ ಸರಿಯಲು 15 ದಿನಗಳಿಂದ ಅನಾಮಧೇಯ ವ್ಯಕ್ತಿಗಳು ಆಮಿಷ ನೀಡುತ್ತಿದ್ದಾರೆ. ಈ ವಿಚಾರವನ್ನು ವಕೀಲರು ನನ್ನ ಗಮನಕ್ಕೆ ತಂದಿದ್ದಾರೆ' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

'ಮತ್ತೊಬ್ಬ ವಕೀಲ ಸೂರ್ಯ ಮುಕುಂದರಾಜ್ ಅವರಿಗೆ ಸೋಮವಾರ ವಾಟ್ಸ್‌ಆ್ಯಪ್ ಮೂಲಕ ಒಬ್ಬರು ಕರೆ ಮಾಡಿದ್ದು, 'ನಾನು ಪ್ರದೀಪ್. ಅಮರನಾಥ್ ಜಾರಕಿಹೊಳಿ ಅವರ ಸ್ನೇಹಿತ. ನೀವು ಯುವತಿಗೆ ಪ್ರಕರಣ ವಾಪಸ್ ಪಡೆಯಲು ತಿಳಿಸಿದರೆ, ನಿಮಗೆ ದೊಡ್ಡ ಕೊಡುಗೆ ನೀಡಲಾಗುವುದು' ಎಂದು ಆಮಿಷವೊಡ್ಡಿದ್ದಾರೆ. ಅನುಮಾನದಿಂದ ಕರೆ ಮಾಡಿದ ವ್ಯಕ್ತಿಯ ಮೂಲ ಪರಿಶೀಲಿಸಿದಾಗ ಆತನ ಹೆಸರು ಪ್ರಭು ಪಾಟೀಲ್ ಎಂದು ಪತ್ತೆಯಾಗಿದೆ'.

'ಈ ಕೇಸ್ ವಾಪಸ್ ಪಡೆಯಲು ವಕೀಲರ ಮುಖಾಂತರ ನನ್ನ ಮೇಲೆ ಒತ್ತಡ ತರಲು ರಮೇಶ ಮುಂದಾಗಿದ್ದಾರೆ. ಆಮಿಷ ನೀಡಲು ಕರೆ ಮಾಡಿದ್ದ ವ್ಯಕ್ತಿಯ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು. ಸಾಕ್ಷ್ಯ ನಾಶ ಹಾಗೂ ಪ್ರಕರಣದ ಮೇಲೆ ಪ್ರಭಾವ ಬೀರುತ್ತಿರುವ ರಮೇಶ ಅವರನ್ನು ಕೂಡಲೇ ಬಂಧಿಸಬೇಕು. ನನಗೆ ರಕ್ಷಣೆ ಒದಗಿಸಬೇಕು' ಎಂದೂ ಪತ್ರದಲ್ಲಿ ಮನವಿ ಮಾಡಿದ್ದಾರೆ.

ಪಶ್ಚಿಮ ಬಂಗಾಳದ 21ನೇ ಮುಖ್ಯಮಂತ್ರಿಯಾಗಿ ಅಧಿಕಾರಕ್ಕೆ • ಆಮ್ಲಜನಕ ಕೊರತೆ ಬಗ್ಗೆ ಪ್ರಧಾನಿಗೆ ಪತ್ರ

ಸತತ 3ನೇ ಅವಧಿಗೆ ಮಮತಾ ಪ್ರಮಾಣ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ 21ನೇ ಮುಖ್ಯಮಂತ್ರಿಯಾಗಿ (8ನೇ ವ್ಯಕ್ತಿ) ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು ಬುಧವಾರ ಪ್ರಮಾಣವಚನ ಸ್ವೀಕರಿಸಿದರು.

ಸತತ ಮೂರನೇ ಅವಧಿಗೆ ಮುಖ್ಯಮಂತ್ರಿಯಾಗಿರುವ ಮಮತಾ ಅವರಿಗೆ ರಾಜ್ಯಪಾಲ ಜಗದೀಪ್ ಧನ್‌ಕರ್ ಅವರು ಪ್ರಮಾಣವಚನ ಬೋಧಿಸಿದರು. ರಾಜಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಬಂಗಾಳಿ ಭಾಷೆಯಲ್ಲಿ ಅವರು ಪ್ರಮಾಣವಚನ ಸ್ವೀಕರಿಸಿದರು.

ಮಮತಾ ಒಬ್ಬರೇ ಬುಧವಾರ ಪ್ರಮಾಣವಚನ ಸ್ವೀಕರಿಸಿದ್ದಾರೆ. ಬಂಗಾಳಿ ಸಂಸ್ಕೃತಿಯ ಮೇರು ಪ್ರತೀಕವಾಗಿರುವ ರವೀಂದ್ರನಾಥ ಟ್ಯಾಗೋರ್ ಅವರ ಜನ್ಮದಿನವಾದ ಮೇ 9ರಂದು ಸಂಪುಟ ವಿಸ್ತರಣೆ ನಡೆಯಲಿದೆ ಎಂದು ಟಿಎಂಸಿ ಮೂಲಗಳು ಹೇಳಿವೆ.

ಟಿಎಂಸಿ ಮುಖಂಡರಾದ ಪಾರ್ಥ ಚಟರ್ಜಿ, ಸುಬ್ರತ ಮುಖರ್ಜಿ, ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್, ಮಮತಾ ಅವರ ಸೋದರಳಿಯ ಅಭಿಷೇಕ್ ಬ್ಯಾನರ್ಜಿ ಮುಂತಾದವರು ಪಾಲ್ಗೊಂಡಿದ್ದರು. ಬಿಜೆಪಿ, ಎಡಪಕ್ಷ ಅಥವಾ ಕಾಂಗ್ರೆಸ್‌ನ ಯಾವೊಬ್ಬ ಮುಖಂಡರೂ ಹಾಜರಿರಲಿಲ್ಲ.

ಪ್ರಧಾನಿಗೆ ಪತ್ರ: ಪ್ರಮಾಣವಚನ ಸ್ವೀಕರಿಸಿದ ಕೆಲವೇ ಗಂಟೆಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿರುವ ಮಮತಾ, ರಾಜ್ಯಗಳಿಗೆ ಬೇಕಾದಷ್ಟು ಪ್ರಮಾಣದಲ್ಲಿ ಕೋವಿಡ್ ಲಸಿಕೆ ಲಭ್ಯವಾಗುತ್ತಿಲ್ಲ. ಪಾರದರ್ಶಕ ಮತ್ತು ಸಮಯಮಿತಿ ಆಧಾರದಲ್ಲಿ ಎಲ್ಲರಿಗೂ ಉಚಿತವಾಗಿ ಲಸಿಕೆ ವಿತರಿಸುವ ವ್ಯವಸ್ಥೆ ಮಾಡುವಂತೆ ಮನವಿ ಮಾಡಿದ್ದಾರೆ.

ಬಂಗಾಳದಲ್ಲಿ ಆಮ್ಲಜನಕದ ಸಿಲಿಂಡರ್‌ಗಳ ಕೊರತೆ ಇರುವುದನ್ನು ಪ್ರಧಾನಿಯ ಗಮನಕ್ಕೆ ತಂದಿದ್ದು, ಈಗಿನ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸುವ ಅಗತ್ಯವಿದೆ ಎಂದು ಅವರು ಸಲಹೆ ನೀಡಿದ್ದಾರೆ.

ರಾಜ್ಯಪಾಲರಿಂದ ಸಲಹೆ: ಸಂವಿಧಾನದ ಆಶಯಗಳು ಹಾಗೂ ದೇಶದ ಕಾನೂನುಗಳಿಗೆ ಅನುಗುಣವಾಗಿ ಆಡಳಿತ ನಡೆಸುವಂತೆ ರಾಜ್ಯಪಾಲ ಜಗದೀಪ್ ಧನ್‌ಕರ್ ಅವರು ಮಮತಾಗೆ ಸಲಹೆ ನೀಡಿದ್ದಾರೆ.

'ನಾವು ಅತ್ಯಂತ ಸಂಕಷ್ಟದ ಪರಿಸ್ಥಿತಿ ಎದುರಿಸುತ್ತಿದ್ದೇವೆ. ಚುನಾವಣೋತ್ತರ ಹಿಂಸಾಚಾರದ ವಿಚಾರಗಳನ್ನು ನಾನು ಮುಖ್ಯಮಂತ್ರಿಯ ಗಮನಕ್ಕೆ ತಂದಿದ್ದೇನೆ. ಭಯಂಕರ ಮತ್ತು ಅರ್ಥಹೀನ ಹಿಂಸಾಚಾರವನ್ನು ನಿಲ್ಲಿಸುವುದು ನಮ್ಮ ಮೊದಲ ಆದ್ಯತೆ. ಪ್ರತೀಕಾರದ ಹಿಂಸಾಚಾರವು ಪ್ರಜಾಪ್ರಭುತ್ವಕ್ಕೆ ಮಾರಕವಾದುದು. ಇದನ್ನು ತಡೆಯಲು ಮುಖ್ಯಮಂತ್ರಿ ತುರ್ತಾಗಿ ಗಮನಹರಿಸುತ್ತಾರೆ ಎಂದು ಭಾವಿಸುತ್ತೇನೆ' ಎಂದರು.

ವಿಧಾನಸಭಾ ಚುನಾವಣೆಗೂ ಮುನ್ನ ಮಮತಾ ಬ್ಯಾನರ್ಜಿ ಹಾಗೂ ಧನ್‌ಕರ್ ಅವರು ಹಲವು ಬಾರಿ ವಾಕ್ಸಮರ ನಡೆಸಿದ್ದು ದೊಡ್ಡ ಸುದ್ದಿಯಾಗಿತ್ತು.



ಮುಖ್ಯಮಂತ್ರಿಯಾಗಿ ಪ್ರಮಾಣ ಸ್ವೀಕರಿಸಿದ ಬಳಿಕ ಮಮತಾ ಬ್ಯಾನರ್ಜಿ ಅವರು ರಾಜ್ಯಪಾಲ ಜಗದೀಪ್ ಧನ್‌ಕರ್ ಜತೆಗೆ —ಪಿಟಿಐ ಚಿತ್ರ

ಕೋವಿಡ್, ಹಿಂಸಾಚಾರ ತಡೆಗೆ ಆದ್ಯತೆ

ಪ್ರಮಾಣವಚನ ಸ್ವೀಕರಿಸಿದ ನಂತರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಮಮತಾ, 'ಕೋವಿಡ್ ನಿಯಂತ್ರಣ ನಮ್ಮ ಸರ್ಕಾರದ ಆದ್ಯತೆ ಆಗಿರುತ್ತದೆ. ಹಿಂಸಾಚಾರ ತಡೆ ಹಾಗೂ ಹಿಂಸಾಚಾರದಲ್ಲಿ ತೊಡಗಿದವರ ವಿರುದ್ಧ ಕ್ರಮ ಕೈಗೊಳ್ಳುವುದಕ್ಕೂ ಮಹತ್ವ ನೀಡಲಾಗುವುದು ಎಂದರು.

'ನಾನು ಈಗಷ್ಟೇ ಅಧಿಕಾರ ಸ್ವೀಕರಿಸಿದ್ದೇನೆ. ಕಳೆದ ಮೂರು ತಿಂಗಳಿಂದ ರಾಜ್ಯದ ಪೊಲೀಸ್ ವ್ಯವಸ್ಥೆಯನ್ನು ಚುನಾವಣಾ ಆಯೋಗ ತನ್ನ ಸುಪರ್ದಿಗೆ ತೆಗೆದುಕೊಂಡಿತ್ತು. ಕಾನೂನು ಸುವ್ಯವಸ್ಥೆಯ ವಿಚಾರವಾಗಿ ಇಂದಿನಿಂದಲೇ ಕಾರ್ಯಪ್ರವೃತ್ತಳಾಗುತ್ತೇನೆ. ಹಿಂಸಾಚಾರದಲ್ಲಿ ತೊಡಗಿದವರು ಅಥವಾ ಅದಕ್ಕೆ ಪ್ರಚೋದನೆ ನೀಡಿದ ಯಾರೊಬ್ಬರನ್ನೂ ಬಿಡುವುದಿಲ್ಲ. ಕೆಲವು ರಾಜಕೀಯ ಪಕ್ಷಗಳು ತಾವು ಗೆದ್ದಿರುವ ಕ್ಷೇತ್ರಗಳಲ್ಲಿ ಹಿಂಸಾಚಾರ ನಡೆಸುತ್ತಿವೆ' ಎಂದರು. ಶಾಂತಿ ಸ್ಥಾಪನೆಗೆ ನೆರವಾಗುವಂತೆ ಅವರು ಎಲ್ಲಾ ರಾಜಕೀಯ ಪಕ್ಷಗಳಲ್ಲಿ ಮನವಿ ಮಾಡಿದ್ದಾರೆ.

ಪೊಲೀಸ್ ವ್ಯವಸ್ಥೆಯಲ್ಲೂ ಬದಲಾವಣೆಗಳನ್ನು ಮಾಡುವ ಸೂಚನೆ ನೀಡಿದ ಅವರು, 'ನಾನು ಹೊಸ ವ್ಯವಸ್ಥೆಯನ್ನು ರೂಪಿಸಿ, ತಪ್ಪಿತಸ್ಥರು ಕಾನೂನು ಕ್ರಮದಿಂದ ತಪ್ಪಿಸಿಕೊಳ್ಳಲಾರದಂತೆ ನೋಡಿಕೊಳ್ಳುತ್ತೇನೆ' ಎಂದರು.

ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಚುನಾವಣಾ ಆಯೋಗವು ಹಲವು ಜಿಲ್ಲೆಗಳ ಪೊಲೀಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿತ್ತು.



ಕೋಲ್ಕತ್ತದ ಬಿಜೆಪಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಮಾತನಾಡಿದರು —ಪಿಟಿಐ ಚಿತ್ರ

ಹಿಂಸೆಯಿಂದ ರಕ್ಷಣೆ: ನಡ್ಡಾ ಪ್ರತಿಜ್ಞೆ

ಕೋಲ್ಕತ್ತ: ರಾಜಭವನದಲ್ಲಿ ಮಮತಾ ಅವರು ಪ್ರಮಾಣವಚನ ಸ್ವೀಕರಿಸುತ್ತಿದ್ದರೆ, ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಪಕ್ಷದ ಮುಖಂಡರಿಗೆ ರಾಜಕೀಯ ಹಿಂಸಾಚಾರದಿಂದ ಪ್ರಜಾಪ್ರಭುತ್ವವನ್ನು ರಕ್ಷಿಸುವ ಮತ್ತು ಬಂಗಾಳದ ಜನರಿಗೆ ರಕ್ಷಣೆ ಒದಗಿಸುವ ಪ್ರಮಾಣವಚನ ಬೋಧಿಸಿದರು.

ಚುನಾವಣೋತ್ತರ ಹಿಂಸಾಚಾರವನ್ನು ಖಂಡಿಸಿ ಬಿಜೆಪಿ ಕಾರ್ಯಕರ್ತರು ರಾಜ್ಯದ ವಿವಿಧೆಡೆ ಬುಧವಾರ ಪ್ರತಿಭಟನೆಗಳನ್ನು ನಡೆಸಿದ್ದಾರೆ. ಕೋಲ್ಕತ್ತದಲ್ಲಿ ಗಾಂಧಿಪ್ರತಿಮೆ ಮುಂದೆ ನಡೆದ ಪ್ರತಿಭಟನೆಯಲ್ಲಿ ನಡ್ಡಾ ಹಾಗೂ ಇತರ ಮುಖಂಡರು ಪಾಲ್ಗೊಂಡಿದ್ದರು.

ಬಳಿಕ ಪಕ್ಷದ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡುತ್ತಾ, ಟಿಎಂಸಿ ಕಾರ್ಯಕರ್ತರು ನಡೆಸಿದ ಚುನಾವಣೋತ್ತರ ಹಿಂಸಾಚಾರದಲ್ಲಿ ಒಬ್ಬ ಮಹಿಳೆಯೂ ಸೇರಿದಂತೆ ಪಕ್ಷದ ಕನಿಷ್ಠ 6 ಮಂದಿ ಸತ್ತಿದ್ದಾರೆ. ಪಕ್ಷದ ಕಚೇರಿಗೆ ಬೆಂಕಿ ಹಚ್ಚಿ ಧ್ವಂಸ ಮಾಡಲಾಗಿದೆ ಎಂದು ಹೇಳಿದರು.

'ನಮ್ಮ ಕಾರ್ಯಕರ್ತರಿಗೆ ಬೆಂಬಲ ಸೂಚಿಸಲು, ಹಿಂಸಾಚಾರಕ್ಕೆ ಒಳಗಾಗಿರುವ ಉತ್ತರ 24 ಪರಗಣದಂಥ ಜಿಲ್ಲೆಗಳಿಗೆ ನಾನು ಭೇಟಿನೀಡುತ್ತೇನೆ. ಸ್ವತಂತ್ರ ಭಾರತದಲ್ಲಿ ಈವರೆಗೆ ನಡೆದಿಲ್ಲದ ರೀತಿಯ ಭೀಕರ ಹಿಂಸಾಚಾರಗಳು ನಮ್ಮ ಕಾರ್ಯಕರ್ತರ ಮೇಲೆ ನಡೆದಿವೆ. ಅದನ್ನು ನಾವು ಇಡೀ ದೇಶಕ್ಕೆ ತಿಳಿಸಲು ಬಯಸುತ್ತೇವೆ' ಎಂದು ನಡ್ಡಾ ಹೇಳಿದ್ದಾರೆ.

'ಮಾಧ್ಯಮದ ವಿರುದ್ಧ 'ಸುಪ್ರೀಂ'ಗೆ ಹೋಗಿಲ್ಲ'

ನವದೆಹಲಿ: 'ಚುನಾವಣಾ ಆಯೋಗಕ್ಕೆ ಸಂಬಂಧಿಸಿದ ವರದಿಗಳನ್ನು ಪ್ರಕಟಿಸುವುದಕ್ಕೆ ನಿರ್ಬಂಧ ವಿಧಿಸುವಂತೆ ಆಯೋಗವು ಸುಪ್ರೀಂ ಕೋರ್ಟ್‌ಗೆ ಯಾವುದೇ ಮನವಿ ಸಲ್ಲಿಸಿಲ್ಲ. ಈ ವಿಚಾರದಲ್ಲಿ ಆಯೋಗವು ಸರ್ವಾನುಮತದಿಂದಲೇ ನಿರ್ಧಾರ ಕೈಗೊಂಡಿತ್ತು' ಎಂದು ಚುನಾವಣಾ ಆಯೋಗ ಬುಧವಾರ ಹೇಳಿದೆ.

ವಿಚಾರಣೆಯ ವೇಳೆ ನ್ಯಾಯಮೂರ್ತಿಗಳು ಮೌಖಿಕವಾಗಿ ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ವರದಿ ಮಾಡುವುದರ ಮೇಲೆ ನಿರ್ಬಂಧ ಹೇರಬೇಕು ಎಂದು ಆಯೋಗ ಮಾಡಿದ್ದ ಮನವಿ ಯನ್ನು ಸುಪ್ರೀಂ ಕೋರ್ಟ್ ಸೋಮವಾರ ತಳ್ಳಿಹಾಕಿತ್ತು.

ಈ ಬಗ್ಗೆ ಬುಧವಾರ ಪ್ರಕಟಣೆ ನೀಡಿರುವ ಆಯೋಗವು, 'ಚುನಾವಣೆಗಳನ್ನು ನಡೆಸುವುದರಲ್ಲಿ ಮತ್ತು ಚುನಾವಣಾ ಪ್ರಜಾಪ್ರಭುತ್ವವನ್ನು ಬಲಪಡಿಸುವಲ್ಲಿ ಮಾಧ್ಯಮಗಳು ವಹಿಸಿರುವ ಸಕಾರಾತ್ಮಕ ಪಾತ್ರವನ್ನು ಆಯೋಗವು ಗುರುತಿಸಿ ಗೌರವಿಸುತ್ತದೆ' ಎಂದಿದೆ.

ಆಯೋಗದ ಕಾರ್ಯವೈಖರಿಯ ಬಗ್ಗೆ ಏಪ್ರಿಲ್ 26ರಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದ ಮದ್ರಾಸ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ, 'ಕೋವಿಡ್–19 ಎರಡನೇ ಅಲೆಯು ಇಷ್ಟೊಂದು ತೀವ್ರಗೊಳ್ಳಲು ಚುನಾವಣಾ ಆಯೋಗವೇ ಕಾರಣ. ಕೋವಿಡ್ ತಡೆಯಲು ಅಗತ್ಯವಿರುವ ಮುಂಜಾಗ್ರತಾ ಕ್ರಮಗಳನ್ನು ಜಾರಿ ಮಾಡುವಲ್ಲಿ ಆಯೋಗ ವಿಫಲವಾಗಿದೆ. ಆಯೋಗದ ಅಧಿಕಾರಿಗಳ ವಿರುದ್ಧ ಕೊಲೆ ಆರೋಪದ ದೂರು ದಾಖಲಿಸಬೇಕು' ಎಂದಿದ್ದರು. ಆದರೆ ಈ ಅಭಿಪ್ರಾಯವು ಅವರು ನೀಡಿದ್ದ ಲಿಖಿತ ತೀರ್ಪಿನಲ್ಲಿ ಇರಲಿಲ್ಲ.

ನ್ಯಾಯಮೂರ್ತಿಗಳು ನೀಡುವ ಇಂಥ ಮೌಖಿಕ ಹೇಳಿಕೆಯನ್ನು ವರದಿಮಾಡುವುದರ ಮೇಲೆ ನಿರ್ಬಂಧ ಹೇರಬೇಕು ಎಂಬ ಆಯೋಗದ ಮನವಿಯನ್ನು ಮದ್ರಾಸ್ ಹೈಕೋರ್ಟ್ ತಿರಸ್ಕರಿಸಿತ್ತು. ಅದಾದನಂತರ ಆಯೋಗವು ಸುಪ್ರೀಂ ಕೋರ್ಟ್ ಮೊರೆಹೋಗಿತ್ತು.

ಮಾಧ್ಯಮ ವರದಿಗಾರಿಕೆಯ ವಿರುದ್ಧ ನ್ಯಾಯಾಲಯದ ಮೊರೆ ಹೋಗುವ ವಿಚಾರದಲ್ಲಿ ಆಯೋಗದ ಸದಸ್ಯರಲ್ಲಿ ಒಮ್ಮತವಿರಲಿಲ್ಲ ಎಂದೂ ಕೆಲವು ಮಾಧ್ಯಮಗಳು ವರದಿ ಮಾಡಿದ್ದವು. ಇದಕ್ಕೆ ಪ್ರತಿಕ್ರಿಯೆ ನೀಡಿರುವ ಆಯೋಗವು, 'ಮುಕ್ತ ಮಾಧ್ಯಮದ ಮೇಲಿನ ತನ್ನ ನಂಬಿಕೆಗೆ ಚುನಾವಣಾ ಆಯೋಗವು ಬದ್ಧವಾಗಿದೆ' ಎಂದಿದೆ.

ಸರ್ಕಾರ ರಚನೆಗೆ ಸ್ಟಾಲಿನ್‌ಗೆ ಆಹ್ವಾನ

ಪ್ರಜಾವಾಣಿ ವಾರ್ತೆ

ಚೆನ್ನೈ: ಡಿಎಂಕೆ ಮುಖ್ಯಸ್ಥ ಹಾಗೂ ಶಾಸಕಾಂಗ ಪಕ್ಷದ ನಾಯಕ ಎಂ.ಕೆ. ಸ್ಟಾಲಿನ್ ಅವರು ತಮಿಳುನಾಡಿನ ನೂತನ ಮುಖ್ಯಮಂತ್ರಿಯಾಗಿ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ರಾಜಭವನದಲ್ಲಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಸ್ಪಷ್ಟ ಬಹುಮತ ಪಡೆದಿರುವ ಡಿಎಂಕೆ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಅವರನ್ನು ಸರ್ಕಾರ ರಚಿಸುವಂತೆ ರಾಜ್ಯಪಾಲ ಬನ್ವಾರಿಲಾಲ್ ಪುರೋಹಿತ್ ಅವರು ಬುಧವಾರ ಆಹ್ವಾನಿಸಿದರು.

ಸರಳ ಸಮಾರಂಭದಲ್ಲಿ ಪುರೋಹಿತ್ ಅವರು ಪ್ರಮಾಣವಚನ ಬೋಧಿಸಲಿದ್ದಾರೆ.

ತಮ್ಮನ್ನು ಡಿಎಂಕೆ ಶಾಸಕಾಂಗ ಪಕ್ಷದ ನಾಯಕನ್ನಾಗಿ ಆಯ್ಕೆ ಮಾಡಿರುವ ಪತ್ರದೊಂದಿಗೆ ರಾಜ್ಯಪಾಲರನ್ನು ಭೇಟಿಯಾದ ಸ್ಟಾಲಿನ್ ನೇತೃತ್ವದ ನಿಯೋಗ, ಸರ್ಕಾರ ರಚಿಸುವ ಪ್ರಸ್ತಾವ ಮಂಡಿಸಿತು.

ಮರಾಠಾ ಮೀಸಲು: ಸಂವಿಧಾನ ತಿದ್ದುಪಡಿಗೆ ಮೋದಿಗೆ ಮೊರೆ

ಮಹಾರಾಷ್ಟ್ರ: ರಾಜಕೀಯ ಪಕ್ಷಗಳ ನಡುವೆ ಆರೋಪ– ಪ್ರತ್ಯಾರೋಪ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದಲ್ಲಿ ಮರಾಠಾ ಸಮುದಾಯದವರಿಗೆ ಮೀಸಲಾತಿ ನೀಡುವ ಕಾನೂನನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದೆ. ಇದಾಗುತ್ತಿದ್ದಂತೆಯೇ ಮಹಾರಾಷ್ಟ್ರ ಸರ್ಕಾರವು ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗದ ಮುಂದೆ ಹೋಗಲು ತೀರ್ಮಾನಿಸಿದೆ. ಜತೆಗೆ ಮೀಸಲಾತಿಯ ಕಾನೂನುಬದ್ಧ ಹೋರಾಟವನ್ನು ಮುಂದುವರಿಸಲು ನಿರ್ಧರಿಸಿದೆ.

ಈ ವಿಚಾರದಲ್ಲಿ ಮಧ್ಯಪ್ರವೇಶ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಹಾಗೂ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರಿಗೆ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಮನವಿ ಮಾಡಿದ್ದಾರೆ. ಸುಪ್ರೀಂ ಕೋರ್ಟ್ ತೀರ್ಮಾನಕ್ಕೆ ಎಲ್ಲಾ ರಾಜಕೀಯ ಪಕ್ಷಗಳೂ ಬೇಸರ ವ್ಯಕ್ತಪಡಿಸಿವೆ.

'ಮೀಸಲಾತಿ ನಿರ್ಧರಿಸುವ ಹಕ್ಕು ರಾಜ್ಯ ಸರ್ಕಾರಗಳಿಗಿಲ್ಲ, ಬದಲಿಗೆ ಕೇಂದ್ರ ಸರ್ಕಾರ ಹಾಗೂ ರಾಷ್ಟ್ರಪತಿಗೆ ಮಾತ್ರ ಇದೆ ಎಂದು ಸುಪ್ರೀಂ ಕೋರ್ಟ್ ಹೇಳಿದಂತಾಗಿದೆ. ಆದ್ದರಿಂದ ಮರಾಠಾ ಸಮುದಾಯಕ್ಕೆ ಮೀಸಲಾತಿ ನೀಡುವ ವಿಚಾರವಾಗಿ ಅತಿ ಶೀಘ್ರದಲ್ಲಿ ತೀರ್ಮಾನ ಕೈಗೊಳ್ಳಬೇಕು ಎಂದು ಪ್ರಧಾನಿ ಹಾಗೂ ರಾಷ್ಟ್ರಪತಿಯನ್ನು ವಿನಂತಿಸುತ್ತೇನೆ. ಈ ಹಿಂದೆ ಶಾಬಾನೊ ಪ್ರಕರಣ ಸೇರಿ ಹಲವು ಪ್ರಕರಣಗಳಲ್ಲಿ ಕೇಂದ್ರ ಸರ್ಕಾರವು ಸಂವಿಧಾನಕ್ಕೆ ತಿದ್ದುಪಡಿ ಮಾಡಿದೆ. ಮರಾಠಾ ಮೀಸಲು ವಿಚಾರದಲ್ಲೂ ಸರ್ಕಾರವು ಇಷ್ಟೇ ತುರ್ತಾಗಿ ಕ್ರಮ ಕೈಗೊಳ್ಳಬೇಕಾಗಿದೆ' ಎಂದು ಉದ್ಧವ್ ಠಾಕ್ರೆ ಮನವಿ ಮಾಡಿದ್ದಾರೆ.

ಮುಖ್ಯಾಂಶಗಳು

- ಕಾನೂನು ರದ್ದುಪಡಿಸಿದ ಸುಪ್ರೀಂ ಕೋರ್ಟ್
- ಇದು ಸರ್ಕಾರದ ವೈಫಲ್ಯ– ಫಡಣವೀಸ್ ಆರೋಪ
- ಮಧ್ಯಪ್ರವೇಶಕ್ಕೆ ಪ್ರಧಾನಿ, ರಾಷ್ಟ್ರಪತಿಗೆ ಉದ್ಧವ್ ಮನವಿ

ಒಂದೆಡೆ, ಮರಾಠಾ ಸಮುದಾಯವನ್ನು ಸಮಾಧಾನಪಡಿಸುವ ಕೆಲಸವನ್ನು ಶಿವಸೇನಾ ಮಾಡುತ್ತಿದ್ದರೆ, ಇನ್ನೊಂದೆಡೆ ಈ ವಿಚಾರದಲ್ಲಿ ರಾಜಕೀಯ ವಾಕ್ಸಮರವೂ ಆರಂಭವಾಗಿದೆ. ವಿರೋಧಪಕ್ಷಗಳು ಮಹಾ ವಿಕಾಸ ಅಘಾಡಿ (ಎಂವಿಎ) ಸರ್ಕಾರದ ವಿರುದ್ಧ ಟೀಕೆಗಳನ್ನು ಮಾಡಲಾರಂಭಿಸಿದೆ. 'ಎಂವಿಎ ಸರ್ಕಾರದ ನಿರ್ಲಕ್ಷ್ಯ ಹಾಗೂ ಸಮನ್ವಯದ ಕೊರತೆಯಿಂದಾಗಿ ಸುಪ್ರೀಂ ಕೋರ್ಟ್ ಈ ಕಾನೂನನ್ನು ರದ್ದುಪಡಿಸಿದೆ' ಎಂದು ವಿರೋಧ ಪಕ್ಷದ ನಾಯಕ ದೇವೇಂದ್ರ ಫಡಣವೀಸ್ ಆರೋಪಿಸಿದ್ದಾರೆ.

'ಫಡಣವೀಸ್ ಅವರು ಮುಖ್ಯಮಂತ್ರಿಯಾಗಿದ್ದಾಗ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಿ, ವರದಿಯನ್ನು ತರಿಸಿ, ಅದರ ಆಧಾರದಲ್ಲಿ ಕಾನೂನು ರೂಪಿಸಿ ವಿಧಾನಸಭೆಯಲ್ಲಿ ಅಂಗೀಕಾರವಾಗುವಂತೆ ಮಾಡಿದ್ದರು. ಆ ನಂತರ ಹೈಕೋರ್ಟ್‌ಗೂ ಮನವರಿಕೆ ಮಾಡಿಕೊಟ್ಟಿದ್ದರು. ಪರಿಣಾಮವಾಗಿ ಹೈಕೋರ್ಟ್ ಈ ಕಾನೂನನ್ನು ಎತ್ತಿಹಿಡಿದಿತ್ತು. ಆದರೆ, ಸುಪ್ರೀಂ ಕೋರ್ಟ್‌ಗೆ ಈ ವಿಚಾರವನ್ನು ಮನವರಿಕೆ ಮಾಡಿಕೊಡಲು ಎಂವಿಎ ಸರ್ಕಾರ ವಿಫಲವಾಗಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಚಂದ್ರಕಾಂತ ಪಾಟೀಲ್ ಹೇಳಿದ್ದಾರೆ.

'ಸುಪ್ರೀಂ ಕೋರ್ಟ್ ತೀರ್ಪು ಅನಿರೀಕ್ಷಿತ ಮತ್ತು ನಿರಾಶಾದಾಯಕ' ಎಂದು ಉಪಮುಖ್ಯಮಂತ್ರಿ, ಎನ್‌ಸಿಪಿ ನಾಯಕ ಅಜಿತ್ ಪವಾರ್ ಹೇಳಿದ್ದಾರೆ. 'ಫಡಣವೀಸ್ ಅವರು ಮುಖ್ಯಮಂತ್ರಿಯಾಗಿದ್ದಾಗ ವಿಧಾನಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಿದ್ದ ಕಾನೂನೇ ಇದು. ಯಾವ ಬದಲಾವಣೆಯನ್ನೂ ಮಾಡಿಲ್ಲ. ಆ ಸರ್ಕಾರ ನೇಮಿಸಿದ್ದ ವಕೀಲರುಗಳನ್ನೇ ಈ ಸರ್ಕಾರವೂ ಮುಂದುವರಿಸಿದೆ' ಎಂದು ಲೋಕೋಪಯೋಗಿ ಸಚಿವ, ಮರಾಠಾ ಮೀಸಲಾತಿ ಉಪ ಸಮಿತಿಯ ಮುಖ್ಯಸ್ಥ ಅಶೋಕ್ ಚವ್ಹಾಣ್ ಹೇಳಿದ್ದಾರೆ.

'ಸಂಭಾಜಿ ಛತ್ರಪತಿ ಅವರು ಪ್ರಧಾನಿಯ ಭೇಟಿಗಾಗಿ ಹಲವು ದಿನಗಳಿಂದ ಪ್ರಯತ್ನಿಸುತ್ತಿದ್ದಾರೆ. ಅವರಿಗೆ ಪ್ರಧಾನಿ ಯಾಕೆ ಸಮಯ ನೀಡುತ್ತಿಲ್ಲ' ಎಂದು ಉದ್ಧವ್ ಠಾಕ್ರೆ ಪ್ರಶ್ನಿಸಿದ್ದಾರೆ.

ಮೀಸಲು ಮಿತಿ ತೀರ್ಪು ಮರುಪರಿಶೀಲನೆ ಇಲ್ಲ

ಒಂದನೇ ಪುಟದಿಂದ...

ಈ ಆದೇಶಕ್ಕೆ 2020ರ ಸೆಪ್ಟೆಂಬರ್‌ನಲ್ಲಿ ಸುಪ್ರೀಂ ಕೋರ್ಟ್ ತಡೆ ಕೊಟ್ಟಿತ್ತು. ಈ ನಡುವಣ ಅವಧಿಯಲ್ಲಿ (ಬಾಂಬೆ ಹೈಕೋರ್ಟ್‌ನ ತೀರ್ಪು ಮತ್ತು ಸುಪ್ರೀಂ ಕೋರ್ಟ್‌ನ ತಡೆ) ಹುದ್ದೆಗಳಿಗೆ ಮಾಡಿದ ನೇಮಕಾತಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕೆ ಪಡೆದುಕೊಂಡ ಮೀಸಲಾತಿಯನ್ನು ಈಗಿನ ತೀರ್ಪು ಬಾಧಿಸದು ಎಂದು ಪೀಠವು ಹೇಳಿದೆ. ಬಾಂಬೆ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸಲ್ಲಿಕೆಯಾದ ಹಲವು ಅರ್ಜಿಗಳ ವಿಚಾರಣೆ ನಡೆಸಿ ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದೆ.

ಮಂಡಲ್ ತೀರ್ಪು ಮರುಪರಿಶೀಲನೆ ಹಿನ್ನೆಲೆ

ಸಂವಿಧಾನದ 102ನೇ ತಿದ್ದುಪಡಿಯನ್ನು ವ್ಯಾಖ್ಯಾನಿಸುವುದು ಮಹತ್ವದ್ದು ಎಂದು ಸುಪ್ರೀಂ ಕೋರ್ಟ್ ಮಾರ್ಚ್ 8ರಂದು ಪರಿಗಣಿಸಿತ್ತು. ಇದಕ್ಕೆ ಸಂಬಂಧಿಸಿದಂತೆ ಪರಿಶೀಲಿಸಲು ಆರು ಪ್ರಶ್ನೆಗಳನ್ನು ರೂಪಿಸಿತ್ತು.

'ನಂತರ, ಸಂವಿಧಾನಕ್ಕೆ ಆಗಿರುವ ತಿದ್ದುಪಡಿಗಳು, ಬಂದಿರುವ ತೀರ್ಪುಗಳು ಮತ್ತು ಸಾಮಾಜಿಕ ಸ್ಥಿತಿಯಲ್ಲಿನ ಬದಲಾವಣೆ'ಯ ಹಿನ್ನೆಲೆಯಲ್ಲಿ ಇಂದಿರಾ ಸಾಹ್ನಿ ಪ್ರಕರಣದ ತೀರ್ಪಿನ ಮರುಪರಿಶೀಲನೆಯ ಅಗತ್ಯ ಇದೆಯೇ ಎಂಬುದಕ್ಕೆ ಪ್ರತಿಕ್ರಿಯೆ ನೀಡುವಂತೆ ರಾಜ್ಯಗಳಿಗೆ ಸೂಚಿಸಲಾಗಿತ್ತು.

342ಎ ವಿಧಿಯು ಯಾವುದೇ ಜಾತಿಯನ್ನು ಹಿಂದುಳಿದ ವರ್ಗ ಎಂದು ಗುರುತಿಸಿ, ಶಾಸನ ರಚಿಸುವ ರಾಜ್ಯಗಳ ಅಧಿಕಾರವನ್ನು ಮೊಟಕುಗೊಳಿಸುತ್ತದೆಯೇ ಮತ್ತು ಆ ಮೂಲಕ ಒಕ್ಕೂಟ ನೀತಿ ಹಾಗೂ ಸಂವಿಧಾನದ ನಿಯಮಗಳನ್ನು ಉಲ್ಲಂಘಿಸುತ್ತದೆಯೇ ಎಂಬುದು ಆರು ಪ್ರಶ್ನೆಗಳಲ್ಲಿ ಒಂದಾಗಿತ್ತು.

ಮಹಾರಾಷ್ಟ್ರ ಸರ್ಕಾರ ರೂಪಿಸಿದ್ದ ಮರಾಠಾ ಮೀಸಲಾತಿ ಕಾಯ್ದೆಯನ್ನು ಪರಿಶೀಲನೆಗೆ ಒಳಪಡಿಸುವುದು ಇನ್ನೊಂದು ಅಂಶವಾಗಿತ್ತು.

102ನೇ ತಿದ್ದುಪಡಿಯು ಒಕ್ಕೂಟ ವ್ಯವಸ್ಥೆಯ ಉಲ್ಲಂಘನೆ ಅಲ್ಲ ಮತ್ತು ಮಹಾರಾಷ್ಟ್ರದ ಮರಾಠಾ ಮೀಸಲು ಕಾಯ್ದೆಯು ಸಾಂವಿಧಾನಿಕವೇ ಆಗಿದೆ ಎಂದು ಕೇಂದ್ರ ಸರ್ಕಾರವು ವಿಚಾರಣೆಯ ಸಂದರ್ಭದಲ್ಲಿ ವಾದಿಸಿತ್ತು.

ಮರಾಠಾ ಸಮುದಾಯಕ್ಕೆ ಶೇ 16ರಷ್ಟು ಮೀಸಲಾತಿ ನೀಡುವ ಎಸ್‌ಇಬಿಸಿ ಕಾಯ್ದೆಯನ್ನು ಮಹಾರಾಷ್ಟ್ರ 2018ರಲ್ಲಿ ಅಂಗೀಕರಿಸಿತ್ತು. 2019ರ ಜೂನ್‌ನಲ್ಲಿ ಬಾಂಬೆ ಹೈಕೋರ್ಟ್ ಅದನ್ನು ಎತ್ತಿ ಹಿಡಿದಿತ್ತು. ಆದರೆ ನೇಮಕಾತಿಯಲ್ಲಿನ ಮೀಸಲಾತಿಯನ್ನು ಶೇ 12ಕ್ಕೆ ಮತ್ತು ಶಿಕ್ಷಣ ಸಂಸ್ಥೆ ಪ್ರವೇಶಾತಿ ಮೀಸಲಾತಿಯನ್ನು ಶೇ 13ಕ್ಕೆ ಇಳಿಸಿತ್ತು.

ತೊಡಕು ನಿವಾರಿಸಿ, ನೆರವಿಗೆ ಬರುತ್ತೇವೆ: ವೈದ್ಯರ ಪತ್ರ

ವಾಷಿಂಗ್ಟನ್ (ಪಿಟಿಐ): 'ಭಾರತದಲ್ಲಿನ ಕೋವಿಡ್–19 ರೋಗಿಗಳಿಗೆ ಸ್ವಯಂ ಪ್ರೇರಿತವಾಗಿ ಸೇವೆ ಒದಗಿಸಲು ಸಿದ್ಧರಿದ್ದೇವೆ. ಆದರೆ, ಈಗಿರುವ ತೊಡಕುಗಳನ್ನು ತೆಗೆದುಹಾಕಬೇಕು' ಎಂದು ಭಾರತ-ಅಮೆರಿಕನ್ನರ ವೈದ್ಯಕೀಯ ತಜ್ಞರು ಆಗ್ರಹಿಸಿದ್ದಾರೆ.

ಭಾರತೀಯ ಮೂಲದ ತಜ್ಞ ವೈದ್ಯರ ಅಮೆರಿಕ ಸಂಘಟನೆ (ಎಎಪಿಐ) ವತಿಯಿಂದ ಈ ಬಗ್ಗೆ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಮತ್ತು ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಅವರಿಗೆ ಪತ್ರ ಬರೆಯಲಾಗಿದೆ.

ಮುಖ್ಯಾಂಶಗಳು

- ವರ್ಚುವಲ್ ಇಲ್ಲವೇ ದೇಶಕ್ಕೆ ಬಂದು ಸೇವೆಗೆ ಸಿದ್ಧ
- ಕಾನೂನು ತೊಡಕು ನಿವಾರಿಸಿಸಲು ಮನವಿ
- ದೇಶಕ್ಕಾಗಿ ₹19.23 ಕೋಟಿ ಸಂಗ್ರಹ

'ವರ್ಚುವಲ್ ಮೂಲಕ ಅಥವಾ ತವರಿಗೆ ಬಂದು ಕೋವಿಡ್–19 ರೋಗಿಗಳಿಗೆ ಸೇವೆ ಒದಗಿಸಲು ಸಿದ್ಧ' ಎಂದು ಈ ವೈದ್ಯರು ತಿಳಿಸಿದ್ದಾರೆ.

'ಇದರಿಂದಾಗಿ, ಸಾವಿರಾರು ತಜ್ಞ ವೈದ್ಯರು ಭಾರತಕ್ಕೆ ಲಭ್ಯರಾಗುತ್ತಾರೆ. ಆದರೆ, ಕೆಲವು ಕಾನೂನು ಪ್ರಕ್ರಿಯೆಗಳು ಮತ್ತು ಲೈಸೆನ್ಸ್‌ಗೆ ಸಂಬಂಧಿಸಿದ ವಿಷಯಗಳಿವೆ. ಇಂತಹ ತೊಡಕುಗಳನ್ನು ಮೊದಲು ನಿವಾರಿಸಬೇಕು' ಎಂದೂ ವೈದ್ಯರು ಪತ್ರದಲ್ಲಿ ಬರೆದಿದ್ದಾರೆ.

ಕೋವಿಡ್–19 ನಿಯಂತ್ರಣಕ್ಕೆ ಭಾರತಕ್ಕೆ ನೆರವಾಗಲು ಎಎಪಿಐ 26 ಲಕ್ಷ ಡಾಲರ್ (₹19.23 ಕೋಟಿ) ಮೊತ್ತವನ್ನು ಸಂಗ್ರಹಿಸಿದೆ.

ಜತೆಗೆ, 1000 ಆಮ್ಲಜನಕ ಉತ್ಪಾದನಾ ಕಾನ್ಸ್‌ನ್‌ಟ್ರೇಟರ್‌ಗಳನ್ನು ಈಗಾಗಲೇ ಎಎಪಿಐ ಕಳುಹಿಸಿದೆ. ಮತ್ತೆ ಇನ್ನೂ 1,000 ಆಮ್ಲಜನಕ ಉತ್ಪಾದನಾ ಕಾನ್ಸ್‌ನ್‌ಟ್ರೇಟರ್‌ಗಳನ್ನು ಕಳುಹಿಸಲು ಸಿದ್ಧತೆ ನಡೆಸಿದೆ.

ಸಂಕ್ಷಿಪ್ತ ಸುದ್ದಿ

ಲಂಡನ್: ಜೈಶಂಕರ್ ನಿಯೋಗದಲ್ಲಿದ್ದ ಸದಸ್ಯರಿಗೆ ಕೋವಿಡ್

ಲಂಡನ್ (ಪಿಟಿಐ): ಲಂಡನ್‌ಗೆ ತೆರಳಿದ್ದ ವಿದೇಶಾಂಗ ಸಚಿವ ಎಸ್. ಜಯಶಂಕರ್ ಅವರ ನಿಯೋಗದಲ್ಲಿದ್ದ ಇಬ್ಬರಿಗೆ ಕೋವಿಡ್ ದೃಢಪಟ್ಟಿದೆ.

ಹೀಗಾಗಿ, ಜೈಶಂಕರ್ ಅವರು ನಿಗದಿತ ವೇಳಾಪಟ್ಟಿಯಲ್ಲಿ ಬದಲಾವಣೆ ಮಾಡಿಕೊಂಡಿದ್ದು, ವರ್ಚುವಲ್ ಮೂಲಕ ಸಭೆಗಳನ್ನು ನಡೆಸಿದರು.

ಸೋಮವಾರ ಜೈಶಂಕರ್ ಅವರು ಲಂಡನ್‌ಗೆ ಆಗಮಿಸಿದ್ದರು. ಬ್ರಿಟನ್‌ನ ವಿದೇಶಾಂಗ ಕಾರ್ಯದರ್ಶಿ ಡೊಮಿನಿಕ್ ರಾಬ್ ಅವರ ಆಹ್ವಾನದ ಮೇರೆಗೆ ಆಗಮಿಸಿದ್ದ 'ಜಿ7' ರಾಷ್ಟ್ರಗಳ ಸದಸ್ಯರ ಜತೆ ಸಭೆ ನಡೆಸಲಿದ್ದಾರೆ.

ಲಸಿಕೆ: ಬೌದ್ಧಿಕ ಆಸ್ತಿ ಹಕ್ಕಿನಿಂದ ವಿನಾಯಿತಿಗೆ ಡಬ್ಲ್ಯುಟಿಒ ಚಿಂತನೆ

ಜಿನಿವಾ (ಎಪಿ): ಕೋವಿಡ್ ಲಸಿಕೆಗಳನ್ನು ಬೌದ್ಧಿಕ ಆಸ್ತಿ ಹಕ್ಕುಗಳ ಕಾಯ್ದೆಯಿಂದ ವಿನಾಯಿತಿ ನೀಡುವ ಬಗ್ಗೆ ವಿಶ್ವ ವಾಣಿಜ್ಯ ಸಂಸ್ಥೆ (ಡಬ್ಲ್ಯುಟಿಒ) ಚಿಂತನೆ ನಡೆಸಿದೆ.

ಈ ಬಗ್ಗೆ ಡಬ್ಲ್ಯುಟಿಒ ಸದಸ್ಯ ರಾಷ್ಟ್ರಗಳ ರಾಯಭಾರಿಗಳು ಚರ್ಚೆ ನಡೆಸಲಿದ್ದಾರೆ. ಲಸಿಕೆಗಳ ಮೇಲಿನ ಬೌದ್ಧಿಕ ಹಕ್ಕು ಸಡಿಲಗೊಳಿಸುವಂತೆ ಶ್ರೀಮಂತ ರಾಷ್ಟ್ರಗಳ ಮೇಲೆ ಅಭಿವೃದ್ಧಿಶೀಲ ರಾಷ್ಟ್ರಗಳು ಒತ್ತಾಯಿಸುತ್ತಿವೆ. ಇದರಿಂದ, ಕೋವಿಡ್–19 ನಿಯಂತ್ರಿಸಲು ಅನುಕೂಲವಾಗುತ್ತದೆ ಎಂದು ಈ ರಾಷ್ಟ್ರಗಳು ಪ್ರತಿಪಾದಿಸಿವೆ.

ಅಕ್ಟೋಬರ್ ತಿಂಗಳಲ್ಲಿ ಮೊದಲ ಬಾರಿ ಭಾರತ ಮತ್ತು ದಕ್ಷಿಣ ಆಫ್ರಿಕಾ ಈ ವಿಷಯವನ್ನು ಪ್ರಸ್ತಾಪಿಸಿದ್ದವು. ಈ ಬೇಡಿಕೆಗೆ ಹಲವು ರಾಷ್ಟ್ರಗಳು ಬೆಂಬಲ ವ್ಯಕ್ತಪಡಿಸಿದ್ದವು. ಆದರೆ, ಹಲವು ದೇಶಗಳಲ್ಲಿನ ಪ್ರಭಾವಿ ಫಾರ್ಮಾಸ್ಯೂಟಿಕಲ್ ಉದ್ಯಮಗಳು ಈ ಪ್ರಸ್ತಾವಕ್ಕೆ ವಿರೋಧ ವ್ಯಕ್ತಪಡಿಸಿವೆ.

ನಿಯಂತ್ರಣ ತಪ್ಪಿದ ಚೀನಾ ರಾಕೆಟ್ ಭಾಗ ಭೂಮಿಗೆ ಅಪ್ಪಳಿಸುವ ಆತಂಕ

ಬೀಜಿಂಗ್ (ಪಿಟಿಐ): ಕಳೆದ ವಾರ ದೇಶದ ಬಾಹ್ಯಾಕಾಶ ಕೇಂದ್ರದ ಪ್ರಮುಖ ಮಾಡ್ಯೂಲ್ ಅನ್ನು ಉಡಾವಣೆ ಮಾಡಿದ ಚೀನಾದ ಲಾಂಗ್ ಮಾರ್ಚ್ 5 ಬಿ ರಾಕೆಟ್‌ನ ಭಗ್ನಾವಶೇಷವು ಈ ವಾರಾಂತ್ಯದಲ್ಲಿ ಭೂಮಿಗೆ ಅಪ್ಪಳಿಸುವ ಸಾಧ್ಯತೆ ಇದೆ.

ಈ ರಾಕೆಟ್ ಎಲ್ಲಿ ಬೀಳಬಹುದು ಮತ್ತು ಉಂಟುಮಾಡುವ ಹಾನಿಯ ಕುರಿತು ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಇದರ ಬಗ್ಗೆ ಮುನ್ನೆಚ್ಚರಿಕೆ ತೆಗೆದುಕೊಳ್ಳಲಾಗಿದೆ ಎಂದು ಅಮೆರಿಕದ ಪೆಂಟಗನ್ ಮಂಗಳವಾರ ಹೇಳಿದೆ ಎಂದು ಸಿಎನ್‌ಎನ್ ವರದಿ ಮಾಡಿದೆ.

ರಾಕೆಟ್ ಮೇ 8ರ ವೇಳೆಗೆ ಭೂಮಿಗೆ ಅಪ್ಪಳಿಸುವ ಸಾಧ್ಯತೆ ಇದೆ ಎಂದು ರಕ್ಷಣಾ ಇಲಾಖೆಯ ವಕ್ತಾರ ಮೈಕ್ ಹೊವಾರ್ಡ್ ಹೇಳಿಕೆ ಉಲ್ಲೇಖಿಸಿ, ಅಮೆರಿಕ ಈ ರಾಕೆಟ್‌ನ ಚಲನವಲನವನ್ನು ಗಮನಿಸುತ್ತಿದೆ. 22 ಟನ್ ತೂಕದ ರಾಕೆಟ್‌ನ ಕೆಲವು ಭಾಗ ವಾತಾವರಣ ಪ್ರವೇಶಿಸುವಾಗ ಉರಿದು ಹೋಗಬಹುದು, ಆದರೆ ಬಾಕಿ ಉಳಿಯುವ ಅವಶೇಷ ಜನ ವಸತಿ ಪ್ರದೇಶದ ಮೇಲೆ ಬಿದ್ದರೆ ಭಾರಿ ಅಪಾಯ ಎದುರಾಗಬಹುದು ಎಂದು ಹೇಳಲಾಗುತ್ತಿದೆ.

ವಾಟ್ಸ್‌ಆ್ಯಪ್‌ನ ಹೊಸ ನೀತಿ ಪ್ರಶ್ನಿಸಿ ಅರ್ಜಿ

ನವದೆಹಲಿ (ಪಿಟಿಐ): ವಾಟ್ಸ್‌ಆ್ಯಪ್‌ನ ಖಾಸಗಿತನದ ಹೊಸ ನೀತಿಯನ್ನು ಪ್ರಶ್ನಿಸಿ ದೆಹಲಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ. ಈ ಬಗ್ಗೆ ಪ್ರತಿಕ್ರಿಯಿಸುವಂತೆ ಕೇಂದ್ರ ಮತ್ತು ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್ ಹಾಗೂ ವಾಟ್ಸ್‌ಆ್ಯಪ್‌ಗೆ ನ್ಯಾಯಾಲಯವು ಬುಧವಾರ ಸೂಚಿಸಿದೆ.

ಈ ಸಂಬಂಧ ಮುಖ್ಯ ನ್ಯಾಯಮೂರ್ತಿ ಡಿ.ಎನ್ ಪಟೇಲ್, ನ್ಯಾಯಮೂರ್ತಿ ಜಸ್ಮೀತ್ ಸಿಂಗ್ ಅವರ ಪೀಠವು ಕೇಂದ್ರ, ಫೇಸ್‌ಬುಕ್ ಮತ್ತು ವ್ಯಾಟ್ಸ್‌ಆ್ಯಪ್‌ಗೆ ನೋಟಿಸ್ ಜಾರಿ ಮಾಡಿದ್ದು, ಮೇ 13ರೊಳಗೆ ತಮ್ಮ ನಿಲುವನ್ನು ತಿಳಿಸುವಂತೆ ಸೂಚಿಸಿದೆ.

'ಬಳಕೆದಾರರ ಖಾಸಗಿ ಸಂಭಾಷಣೆಗಳು ಸುರಕ್ಷಿತವಾಗಿದ್ದು, ಅವುಗಳನ್ನು ಎಂಡ್–ಟು–ಎಂಡ್ ಎನ್‌ಕ್ರಿಪ್ಷನ್ ಮಾಡಲಾಗಿದೆ' ಎಂದು ವ್ಯಾಟ್ಸ್‌ಆ್ಯಪ್, ಪೀಠಕ್ಕೆ ತಿಳಿಸಿದೆ.

'ವ್ಯಾಟ್ಸ್‌ಆ್ಯಪ್ ಮೇ 15ರಿಂದ ಖಾಸಗಿತನದ ಹೊಸ ನೀತಿಯನ್ನು ಜಾರಿಗೆ ತರಲಿದೆ. ಹಾಗಾಗಿ ನ್ಯಾಯಾಲ ಯವು ಮಧ್ಯಂತರ ಆದೇಶವನ್ನು ಹೊರ ಡಿಸಬೇಕು' ಎಂದು ಅರ್ಜಿದಾರ ಹರ್ಷ ಗುಪ್ತಾ ಅವರು ಮನವಿ ಮಾಡಿದ್ದಾರೆ.

ಈ ಬಗೆಗಿನ ಅರ್ಜಿ ವಿಚಾರಣೆಯನ್ನು ಮೇ 13ಕ್ಕೆ ನಿಗದಿ ಮಾಡಲಾಗಿದೆ.

ಇನ್ನೂ 3 ರಫೇಲ್ ವಿಮಾನ ಭಾರತಕ್ಕೆ

ನವದೆಹಲಿ (ಪಿಟಿಐ): ಮೂರು ರಫೇಲ್ ಯುದ್ಧವಿಮಾನಗಳು ಫ್ರಾನ್ಸ್‌ನಿಂದ ಭಾರತಕ್ಕೆ ಬುಧವಾರ ಹೊರಟಿವೆ ಎಂದು ಫ್ರಾನ್ಸ್‌ನ ಭಾರತೀಯ ರಾಯಭಾರ ಕಚೇರಿ ತಿಳಿಸಿದೆ.

ಒಪ್ಪಂದದಂತೆ ರಫೇಲ್ ಯುದ್ಧ ವಿಮಾನಗಳು ಭಾರತಕ್ಕೆ ಹಸ್ತಾಂತರವಾಗುತ್ತಿದ್ದು, ಇದು ಆರನೇ ಬ್ಯಾಚ್‌ನಲ್ಲಿ ಮೂರು ರಫೇಲ್ ವಿಮಾನಗಳನ್ನು ಒದಗಿಸಿದಂತಾಗಿದೆ. ಈ ಮೂರು ವಿಮಾನಗಳ ಸೇರ್ಪಡೆಯೊಂದಿಗೆ ಭಾರತೀಯ ವಾಯುಸೇನೆಯ ಬಳಿ ರಫೇಲ್ ಯುದ್ಧ ವಿಮಾನಗಳ ಸಂಖ್ಯೆ 21ಕ್ಕೆ ಏರಲಿದೆ. ಈ ಮೂರು ವಿಮಾನಗಳು ಪಶ್ಚಿಮ ಬಂಗಾಳದ ಹಸಿಮಾರ್ ವಾಯುನೆಲೆಗೆ ಬರಲಿವೆ.

ಸಿಂದಗಿ ಕ್ಷೇತ್ರಕ್ಕೆ ಸದ್ಯಕ್ಕಿಲ್ಲ ಉಪ ಚುನಾವಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯದ ಸಿಂದಗಿ ವಿಧಾನಸಭೆ ಕ್ಷೇತ್ರ ಸೇರಿದಂತೆ ದೇಶದಾದ್ಯಂತ ವಿವಿಧ ಕಾರಣಗಳಿಂದ ಖಾಲಿಯಾಗಿರುವ ವಿಧಾನಸಭೆ ಹಾಗೂ ಲೋಕಸಭೆ ಕ್ಷೇತ್ರಗಳಿಗೆ ಸದ್ಯಕ್ಕೆ ಉಪ ಚುನಾವಣೆ ನಡೆಸದಿರಲು ಕೇಂದ್ರ ಚುನಾವಣಾ ಆಯೋಗ ನಿರ್ಧರಿಸಿದೆ.

ಕೋವಿಡ್–19 ದ್ವಿತೀಯ ಅಲೆಯು ಗಂಭೀರ ಪರಿಣಾಮ ಉಂಟು ಮಾಡಿರುವ ಕಾರಣ ಉಪ ಚುನಾವಣೆ ನಡೆಸದಿರಲು ನಿರ್ಧರಿಸಲಾಗಿದೆ. ಪರಿಸ್ಥಿತಿ ಸಾಮಾನ್ಯ ಹಂತಕ್ಕೆ ಬಂದ ನಂತರ ಈ ಸಂಬಂಧ ತೀರ್ಮಾನ ಕೈಗೊಳ್ಳುವುದಾಗಿ ಚುನಾವಣಾ ಆಯೋಗ ಹೇಳಿದೆ.

ದೇಶದ 3 ಲೋಕಸಭೆ ಹಾಗೂ 8 ವಿಧಾನಸಭೆ ಕ್ಷೇತ್ರಗಳು ಖಾಲಿ ಇವೆ. ನಿಯಮಾನುಸಾರ ಖಾಲಿ ಆದ 6 ತಿಂಗಳೊಳಗೆ ಉಪ ಚುನಾವಣೆ ನಡೆಸಬೇಕಿದೆ. ಆದರೆ, ತೀವ್ರವಾಗಿ ಹರಡುತ್ತಿರುವ ಕೋವಿಡ್–19 ಸ್ಥಿತಿ ಸುಧಾರಣೆಯಾದ ನಂತರ ಉಪ ಚುನಾವಣೆ ಹಮ್ಮಿಕೊಳ್ಳುವ ಕುರಿತು ನಿರ್ಧಾರ ಕೈಗೊಳ್ಳಲಾಗುವುದು ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

ಜೆಡಿಎಸ್ ಶಾಸಕ ಎಂ.ಸಿ. ಮನಗೂಳಿ ಅವರ ನಿಧನದಿಂದ ಸಿಂದಗಿ ವಿಧಾನಸಭೆ ಕ್ಷೇತ್ರ ತೆರವಾಗಿದೆ.

ಗುಜರಾತ್: ಮಗನ ಆನುವಂಶಿಕ ಚಿಕಿತ್ಸೆಗಾಗಿ ₹16 ಕೋಟಿ ಸಂಗ್ರಹಿಸಿದ ದಂಪತಿ

ಲುನಾವಾಡಾ (ಗುಜರಾತ್) (ಪಿಟಿಐ): ಬೆನ್ನುಮೂಳೆಯ ಸ್ನಾಯು ಕ್ಷೀಣತೆಯಿಂದ ಬಳಲುತ್ತಿರುವ ತಮ್ಮ 5 ತಿಂಗಳ ಮಗನ ಚಿಕಿತ್ಸೆಗಾಗಿ ಗುಜರಾತ್ ಮೂಲದ ದಂಪತಿಯು ದೇಣಿಗೆ ಮೂಲಕ ₹16 ಕೋಟಿ ಸಂಗ್ರಹಿಸಿದ್ದಾರೆ.

ಗುಜರಾತ್‌ನ ಮಹಿಸಾಗರ್ ಜಿಲ್ಲೆಯ ಲುನಾವಾಡಾ ಪಟ್ಟಣದ ನಿವಾಸಿ ರಾಜ್‌ದೀಪ್ ಸಿನ್ಹಾ ರಾಥೋಡ್ ಮತ್ತು ಅವರ ಪತ್ನಿ ಜಿನಾಲ್ಬಾ ಅವರಿಗೆ ತಮ್ಮ ಮಗ ಧೈರ್ಯರಾಜ್ ಚಿಕಿತ್ಸೆಗೆ ಹಣದ ಅವಶ್ಯಕತೆ ಇತ್ತು.

ಈ ಕಾಯಿಲೆಯ ಚಿಕಿತ್ಸೆಗೆ ಬೇಕಾಗಿರುವ ಜೀನ್ ಥೆರಪಿ ಇಂಜೆಕ್ಷನ್ ಖರೀದಿಸಲು ದಂಪತಿಯು, 42 ದಿನಗಳಲ್ಲಿ ₹16 ಕೋಟಿ ಸಂಗ್ರಹಿಸಿದ್ದಾರೆ. ಈ ಅಭಿಯಾನವನ್ನು ಅವರು ಮಾರ್ಚ್ ತಿಂಗಳಿನಲ್ಲಿ ಆರಂಭಿಸಿದ್ದರು.



ಪ್ರಾತಿನಿಧಿಕ ಚಿತ್ರ

'ಮುಂಬೈನ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ಮಗನಿಗೆ ಜೀನ್ ಥೆರಪಿ ಇಂಜೆಕ್ಷನ್ ನೀಡಲಾಯಿತು' ಎಂದು ರಾಥೋಡ್ ಅವರು ತಿಳಿಸಿದರು.

'ಜೀನ್ ಥೆರಪಿ ಇಂಜೆಕ್ಷನ್ ಅನ್ನು ಸ್ವಿಟ್ಜರ್ಲೆಂಡ್ ನೊವಾರ್ಟಿಸ್ ಸಂಸ್ಥೆಯು ಉತ್ಪಾದಿಸುತ್ತದೆ. ಭಾರತದಲ್ಲಿ ಇದರ ಬೆಲೆ ₹16 ಕೋಟಿ. ಇದರ ಮೇಲಿನ ಕಸ್ಟಮ್ಸ್ ಸುಂಕ ₹6.5 ಕೋಟಿ. ಈ ಸುಂಕವನ್ನು ಮನ್ನಾ ಮಾಡುವ ಮೂಲಕ ಕೇಂದ್ರ ಸರ್ಕಾರವು ನಮಗೆ ಸಹಾಯ ಮಾಡಿದೆ. ಈ ಇಂಜೆಕ್ಷನ್ ವಿಶ್ವದಲೇ ಅತಿ ದುಬಾರಿ ಔಷಧಿ' ಎಂದು ರಾಥೋಡ್ ಹೇಳಿದರು.

ಇದೊಂದು ಅಪರೂಪದ ಆನುವಂಶಿಕ ಕಾಯಿಲೆಯಾಗಿದೆ. ಈ ಕಾಯಿಲೆಗೆ ತುತ್ತಾದ ವ್ಯಕ್ತಿಗೆ ಬೆನ್ನುಹುರಿ ಮತ್ತು ಮೆದುಳಿನ ಕಾಂಡದಲ್ಲಿನ ನರ ಕೋಶಗಳ ನಷ್ಟದಿಂದಾಗಿ ತನ್ನ ದೇಹದ ಸ್ನಾಯುಗಳ ಚಲನೆಯನ್ನು ನಿಯಂತ್ರಿಸಲು ಸಾಧ್ಯವಾಗುವುದಿಲ್ಲ. ಇದು ಸ್ನಾಯುವಿನ ದೌರ್ಬಲ್ಯಕ್ಕೆ ಕಾರಣವಾಗುತ್ತದೆ ಮತ್ತು ಉಸಿರಾಟದ ಜೊತೆಗೆ ಅಂಗಗಳ ಚಲನೆಯ ಮೇಲೂ ಪರಿಣಾಮ ಬೀರುತ್ತದೆ.

ನಿಧನ ವಾರ್ತೆ

ಪ್ರತ್ಯೇಕತಾವಾದಿ ನಾಯಕ ಸೆಹ್ರಾಯ್



ಜಮ್ಮು: ಕಳೆದ ವರ್ಷ ಜುಲೈ ತಿಂಗಳಿನಲ್ಲಿ ಸಾರ್ವಜನಿಕ ಸುರಕ್ಷತಾ ಕಾಯ್ದೆ ಅಡಿ ಬಂಧನಕ್ಕೊಳಗಾಗಿದ್ದ ಪ್ರತ್ಯೇಕತಾವಾದಿ ನಾಯಕ ಮೊಹಮ್ಮದ್ ಅಶ್ರಫ್ ಸೆಹ್ರಾಯ್(77) ಅವರು ಬುಧವಾರ ಇಲ್ಲಿನ ಆಸ್ಪತ್ರೆಯೊಂದರಲ್ಲಿ ನಿಧನರಾದರು.

'ಮಂಗಳವಾರ ಸಂಜೆ ಸೆಹ್ರಾಯ್ ಅವರ ಆರೋಗ್ಯದಲ್ಲಿ ಏರುಪೇರು ಉಂಟಾ ಗಿದ್ದು, ಅವರನ್ನು ತಕ್ಷಣವೇ ಉಧಂಪುರ ಜಿಲ್ಲಾ ಜೈಲಿನಿಂದ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ (ಜಿಎಂಸಿ) ಸ್ಥಳಾಂತರಿಸಲಾಯಿತು' ಎಂದು ಅಧಿಕಾರಿಗಳು ತಿಳಿಸಿದರು.

'ಕೋವಿಡ್–19 ರ್‍ಯಾಪಿಡ್ ಆ್ಯಂಟಿಜನ್ ಪರೀಕ್ಷೆಯಲ್ಲಿ ಮೊಹಮ್ಮದ್ ಅಶ್ರಫ್ ಅವರ ವರದಿ ನೆಗೆಟಿವ್ ಬಂದಿತ್ತು. ಆರ್‌ಟಿಪಿಸಿಆರ್ ವರದಿಗಾಗಿ ಕಾಯುತ್ತಿದ್ದೇವೆ. ಅವರಲ್ಲಿ ಕೋವಿಡ್ ರೋಗಲಕ್ಷಣಗಳಿದ್ದವು. ಅಲ್ಲದೆ ಆಮ್ಲಜನಕ ಪ್ರಮಾಣವು ಕುಸಿದಿತ್ತು' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಗಾಂಧೀಜಿ ಆಪ್ತ ಕಾರ್ಯದರ್ಶಿ ವಿ.ಕಲ್ಯಾಣಂ



ಚೆನ್ನೈ (ಪಿಟಿಐ): 'ಮಹಾತ್ಮ ಗಾಂಧಿ ಅವರ ಆಪ್ತ ಕಾರ್ಯದರ್ಶಿಯಾಗಿದ್ದ ವಿ. ಕಲ್ಯಾಣಂ (99) ಅವರು ವಯೋಸಹಜ ಕಾಯಿಲೆಯಿಂದಾಗಿ ಮಂಗಳವಾರ ನಿಧನರಾದರು ಎಂದು ಅವರ ಪುತ್ರಿ ನಳಿನಿ ಅವರು ತಿಳಿಸಿದ್ದಾರೆ.

ಕಲ್ಯಾಣಂ ಅವರು 1943ರಿಂದ 1948ರವರೆಗೆ ಮಹಾತ್ಮ ಗಾಂಧಿ ಅವರಿಗೆ ಆಪ್ತ ಕಾರ್ಯದರ್ಶಿ ಆಗಿ ಕಾರ್ಯ ನಿರ್ವಹಿಸಿದ್ದರು.

ಬಿಷಪ್ ಡಾ.ಪಿಲಿಪೋಸ್ ಕ್ರಿಸೊಸ್ಟೊಮ್



ತಿರುವಳ್ಳ(ಕೇರಳ) (ಪಿಟಿಐ): ಮಲಂಕರ ಮಾರ್ ಥೋಮಾ ಸಿರಿಯನ್ ಚರ್ಚ್‌ನ ಮಾಜಿ ಮುಖ್ಯಸ್ಥ ಡಾ.ಪಿಲಿಪೋಸ್ ಮಾರ್ ಕ್ರಿಸೊಸ್ಟೊಮ್ (103) ಅವರು ವಯೋಸಹಜ ಕಾಯಿಲೆಯಿಂದಾಗಿ ಬುಧವಾರ ನಿಧನರಾದರು.

'ಭಾರತದಲ್ಲಿ 66 ವರ್ಷಗಳ ಕಾಲ ಬಿಷಪ್ ಆಗಿ ಸೇವೆ ಸಲ್ಲಿಸಿದ ಡಾ.ಪಿಲಿಪೋಸ್ ಅವರು ಬೆಳಿಗ್ಗೆ 1.15ರ ಸುಮಾರಿಗೆ ಕುಂಬನಾಡ್‌ನ ಖಾಸಗಿ ಆಸ್ಪತ್ರೆಯಲ್ಲಿ ಕೊನೆ ಉಸಿರೆಳೆದರು' ಎಂದು ಚರ್ಚ್‌ನ ವಕ್ತಾರರು ತಿಳಿಸಿದರು.

2018ರಲ್ಲಿ ಅವರು ಪದ್ಮ ಭೂಷಣ ಪ್ರಶಸ್ತಿಗೆ ಪಾತ್ರರಾಗಿದ್ದರು.

ಬಡವರು ಮತ್ತು ಸಾಮಾಜಿಕವಾಗಿ ತುಳಿತಕ್ಕೆ ಒಳಗಾದವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದರು.

1944ರಲ್ಲಿ ಚರ್ಚ್‌ನ ಧರ್ಮಾಧಿಕಾರಿಯಾಗಿ ನೇಮಕಗೊಂಡಿದ್ದ ಅವರು, 1953ರಲ್ಲಿ ಚರ್ಚ್‌ನ ಬಿಷಪ್ ಆದರು.

ಇಂಡಿಯನ್ ಪ್ರೀಮಿಯರ್ ಲೀಗ್: ಮಾಲ್ಡೀವ್ಸ್‌ಗೆ ತೆರಳಲು ಕಾಯುತ್ತಿರುವ ಆಸ್ಟ್ರೇಲಿಯಾ ಆಟಗಾರರು

ಸ್ವದೇಶಕ್ಕೆ ಇಂಗ್ಲೆಂಡ್ ಆಟಗಾರರು

ನವದೆಹಲಿ (ಪಿಟಿಐ): ಐಪಿಎಲ್ ಟೂರ್ನಿಯಲ್ಲಿ ಪಾಲ್ಗೊಂಡಿದ್ದ ಇಂಗ್ಲೆಂಡ್‌ನ ಎಂಟು ಮಂದಿ ಆಟಗಾರರು ಬಿಸಿಸಿಐ ನೆರವಿನೊಂದಿಗೆ ಬುಧವಾರ ಸ್ವದೇಶಕ್ಕೆ ಮರಳಿದರು. ಆದರೆ ಪ್ರಯಾಣ ನಿರ್ಬಂಧದ ಕಾರಣ ಆಸ್ಟ್ರೇಲಿಯಾ ಆಟಗಾರರು ಮೊದಲು ಮಾಲ್ಡೀವ್ಸ್‌ಗೆ ತೆರಳಬೇಕಿದ್ದು, ಅಲ್ಲಿಂದ ತವರಿಗೆ ಪ್ರಯಾಣ ಬೆಳೆಸಲಿದ್ದಾರೆ.

ಇಂಗ್ಲೆಂಡ್‌ನ ಜೋಸ್ ಬಟ್ಲರ್, ಜಾನಿ ಬೆಸ್ಟೊ, ಸ್ಯಾಮ್ ಕರನ್, ಟಾಮ್ ಕರನ್, ಸ್ಯಾಮ್ ಬಿಲಿಂಗ್ಸ್, ಕ್ರಿಸ್ ವೋಕ್ಸ್, ಮೋಯಿನ್ ಅಲಿ ಹಾಗೂ ಜೇಸನ್ ರಾಯ್ ಲಂಡನ್ ತಲುಪಿದ್ದು, 10 ದಿನಗಳ ಕ್ವಾರಂಟೈನ್ ಅವಧಿ ಪೂರ್ಣಗೊಳಿಸಿದ ಬಳಿಕ ತಮ್ಮ ಮನೆಗಳಿಗೆ ತೆರಳಲಿದ್ದಾರೆ.

ಏಯಾನ್ ಮಾರ್ಗನ್, ಡೇವಿಡ್ ಮಲಾನ್ ಹಾಗೂ ಕ್ರಿಸ್ ಜೋರ್ಡಾನ್ ಅವರು ಎರಡು ದಿನಗಳ ಬಳಿಕ ಲಂಡನ್ ವಿಮಾನವೇರಲಿದ್ದಾರೆ.

‘ನಮ್ಮ 11 ಆಟಗಾರರ ಪೈಕಿ ಎಂಟು ಮಂದಿ ಮಂಗಳವಾರ ರಾತ್ರಿ ಹೀಥ್ರೊ ವಿಮಾನ ಏರಿ ಬುಧವಾರ ಬೆಳಿಗ್ಗೆ ಇಲ್ಲಿ ತಲುಪಿದ್ದಾರೆ‘ ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿಯ (ಇಸಿಬಿ) ವಕ್ತಾರರೊಬ್ಬರು ಹೇಳಿದ್ದಾರೆ.

ಮಾಲ್ಡೀವ್ಸ್‌ಗೆ ತೆರಳಲು ಕಾಯುತ್ತಿರುವ ಆಸ್ಟ್ರೇಲಿಯಾ ಕ್ರಿಕೆಟಿಗರು: ಆಸ್ಟ್ರೇಲಿಯಾ ಕ್ರಿಕೆಟಿಗರು ಮಾಲ್ಡೀವ್ಸ್‌ಗೆ ತೆರಳಲು ಕಾಯುತ್ತಿದ್ದಾರೆ. ಅಲ್ಲಿಂದ ಅವರು ತಮ್ಮ ದೇಶಕ್ಕೆ ಮರಳಬೇಕಿದೆ.

ಮೇ 15ರವರೆಗೆ ಭಾರತದಿಂದ ಪ್ರಯಾಣಕ್ಕೆ ಆಸ್ಟ್ರೇಲಿಯಾ ನಿರ್ಬಂಧ ಹೇರಿದೆ. ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್ ಹಾಗೂ ಕ್ರಿಕೆಟ್ ಆಸ್ಟ್ರೇಲಿಯಾ (ಸಿಎ) ಕೂಡ ಆಟಗಾರರ ಪ್ರಯಾಣಕ್ಕೆ ವಿನಾಯಿತಿ ನೀಡಲು ನಿರಾಕರಿಸಿದ್ದವು.

‘ಆಸ್ಟ್ರೇಲಿಯಾದ ಎಲ್ಲ ಸದಸ್ಯರು ಬುಧವಾರ ದೆಹಲಿಯಲ್ಲಿ ಸೇರಿದ್ದಾರೆ. ಅಲ್ಲಿಂದ ಅವರು ವಿಶೇಷ ವಿಮಾನದ ಮೂಲಕ ಮಾಲ್ಡೀವ್ಸ್‌ಗೆ ತೆರಳಲಿದ್ದಾರೆ‘ ಎಂದು ಕೋಲ್ಕತ್ತ ನೈಟ್ ರೈಡರ್ಸ್‌ನ ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಭಾರತದಲ್ಲಿರುವ 14 ಆಟಗಾರರು, ಕೋಚಿಂಗ್ ಸಿಬ್ಬಂದಿ ಹಾಗೂ ವೀಕ್ಷಕ ವಿವರಣೆಕಾರರನ್ನು ನಮ್ಮ ದೇಶಕ್ಕೆ ಕಳುಹಿಸಲು ಬಿಸಿಸಿಐ ನೆರವಾಗುತ್ತಿದೆ‘ ಎಂದು ಸಿಎಯ ಹಂಗಾಮಿ ಮುಖ್ಯಸ್ಥ ನಿಕ್ ಹಾಕ್ಲಿ ಹೇಳಿದ್ದಾರೆ.

ಕೋವಿಡ್ ದೃಢಪಟ್ಟಿರುವ ಹಿನ್ನೆಲೆಯಲ್ಲಿ, ಚೆನ್ನೈ ಸೂಪರ್ ಕಿಂಗ್ಸ್ ತಂಡದ ಬ್ಯಾಟಿಂಗ್ ಕೋಚ್ ಮೈಕೆಲ್ ಹಸ್ಸಿ ಮಾತ್ರ ಭಾರತದಲ್ಲೇ ಹತ್ತು ದಿನಗಳ ಕಾಲ ಕ್ವಾರಂಟೈನ್ ಆಗಲಿದ್ದಾರೆ.

ವೀಕ್ಷಕ ವಿವರಣೆಕಾರ ಮೈಕೆಲ್ ಸ್ಲೇಟರ್ ಈಗಾಗಲೇ ಮಾಲ್ಡೀವ್ಸ್ ತಲುಪಿದ್ದಾರೆ.ದಕ್ಷಿಣ ಆಫ್ರಿಕಾದ 11, ನ್ಯೂಜಿಲೆಂಡ್‌ನ 10, ವೆಸ್ಟ್ ಇಂಡೀಸ್‌ನ 9, ಅಫ್ಗಾನಿಸ್ತಾನದ ಮೂರು ಹಾಗೂ ಬಾಂಗ್ಲಾದೇಶದ ಇಬ್ಬರು ಕ್ರಿಕೆಟಿಗರು ಐಪಿಎಲ್ ಟೂರ್ನಿಯಲ್ಲಿದ್ದರು.

ಐಪಿಎಲ್ ಬಯೋಬಬಲ್‌ಅನ್ನು ಬೇಧಿಸಿದ್ದ ಕೊರೊನಾವೈರಸ್ ಆಟಗಾರರಲ್ಲಿ ಕಾಣಿಸಿಕೊಂಡಿತ್ತು. ಇದರ ಬೆನ್ನಲ್ಲೇ ಎಚ್ಚೆತ್ತುಕೊಂಡ ಬಿಸಿಸಿಐ, ಲೀಗ್‌ಅನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಿತ್ತು. ವಿದೇಶಿ ಆಟಗಾರರನ್ನು ಸುರಕ್ಷಿತವಾಗಿ ವಾಪಸ್ ಕಳುಹಿಸಲಾಗುವುದು ಎಂದು ಭರವಸೆ ನೀಡಿತ್ತು.



ಜಾನಿ ಬೆಸ್ಟೊ



ಜೋಸ್ ಬಟ್ಲರ್ –ಪಿಟಿಐ ಚಿತ್ರಗಳು

ಇಂಗ್ಲೆಂಡ್‌ಗೆ ತೆರಳಲಿರುವ ಕೇನ್, ಬೌಲ್ಟ್

‘ಭಾರತದಿಂದ ಬರುವ ವಿಮಾನಗಳಿಗೆ ಹೇರಿರುವ ಪ್ರಯಾಣ ನಿರ್ಬಂಧವನ್ನು ಇಂಗ್ಲೆಂಡ್ ಮರುಪರಿಶೀಲಿಸಿದರೆ, ನಮ್ಮ ಆಟಗಾರರ ಒಂದು ಗುಂಪು ಮೇ 10ರ ನಂತರ ಅಲ್ಲಿಗೆ ಸರಣಿಯನ್ನು ಆಡಲು ತೆರಳಲಿದೆ‘ ಎಂದು ನ್ಯೂಜಿಲೆಂಡ್‌ನ ಆಟಗಾರರ ಸಂಘದ ಮುಖ್ಯಸ್ಥ ಹೀತ್ ಮಿಲ್ಸ್ ಬುಧವಾರ ಹೇಳಿದ್ದಾರೆ.

‘ಇಂಗ್ಲೆಂಡ್ ಹೇರಿರುವ ಪ್ರಯಾಣ ನಿರ್ಬಂಧದ ಕಾರಣ ಆ ಗುಂಪು ಮೇ 11ರವರೆಗೆ ಅಲ್ಲಿಗೆ ತೆರಳಲು ಸಾಧ್ಯವಿಲ್ಲ. ಹೀಗಾಗಿ ಐಪಿಎಲ್‌ನಲ್ಲಿ ಆಡಿರುವ ನಮ್ಮ ಆಟಗಾರರು ಇನ್ನಷ್ಟು ದಿನ ಕಾಯಬೇಕಾಗುವುದು‘ ಎಂದು ಅವರು ಹೇಳಿದರು.

ಇಂಗ್ಲೆಂಡ್‌ಗೆ ತೆರಳಲಿರುವ ನ್ಯೂಜಿಲೆಂಡ್ ಆಟಗಾರರ ಈ ಗುಂಪಿನಲ್ಲಿ ಕೇನ್ ವಿಲಿಯಮ್ಸನ್, ಟ್ರೆಂಟ್ ಬೌಲ್ಟ್ ಹಾಗೂ ಕೈಲ್ ಜೆಮೀಸನ್ ಇದ್ದಾರೆ.

ಸ್ಟೀಫನ್ ಫ್ಲೆಮಿಂಗ್, ಬ್ರೆಂಡನ್ ಮೆಕಲಂ, ಕೈಲ್ ಮಿಲ್ಸ್, ಶೇನ್ ಬಾಂಡ್ ಹಾಗೂ ಮೈಕ್ ಹೆಸನ್ ಸೇರಿದಂತೆ ಕೆಲವರು ನೇರವಾಗಿ ನ್ಯೂಜಿಲೆಂಡ್‌ಗೆ ಪ್ರಯಾಣ ಬೆಳೆಸಲಿದ್ದಾರೆ.

ಹೋಗುವ ಮುನ್ನ ಯೋಚಿಸಿ: ಎಸಿಎ

ಮೆಲ್ಬರ್ನ್: ಕೋವಿಡ್ ಕಾಲದಲ್ಲಿ ವಿದೇಶಗಳಲ್ಲಿ ನಡೆಯುವ ಟಿ20 ಟೂರ್ನಿಗಳಲ್ಲಿ ಪಾಲ್ಗೊಳ್ಳಲು ಒಪ್ಪಿಗೆ ಸೂಚಿಸುವ ಮುನ್ನ ಸಾಕಷ್ಟು ಯೋಚಿಸಬೇಕು ಎಂದು ಆಸ್ಟ್ರೇಲಿಯಾ ಕ್ರಿಕೆಟರ್‌ಗಳ ಸಂಸ್ಥೆ (ಎಸಿಎ) ದೇಶದ ಆಟಗಾರರಿಗೆ ಸೂಚಿಸಿದೆ.

‘ಜಗತ್ತಿನಾದ್ಯಂತ ಕೋವಿಡ್ ಹೆಚ್ಚುತ್ತಿದೆ. ಇಂಥ ಸಂದರ್ಭದಲ್ಲಿ ಸಾಕಷ್ಟು ಹೋಮ್‌ವರ್ಕ್ ಮಾಡಿಯೇ ಯಾವುದೇ ಕೆಲಸಕ್ಕೆ ಕೈಹಾಕಬೇಕು’ ಎಂದು ಎಸಿಎ ಮುಖ್ಯ ಕಾರ್ಯನಿರ್ವಾಹಕ ಟೊಡ್ ಗ್ರೀನ್‌ಬರ್ಗ್ ಹೇಳಿದ್ದಾರೆ.

ಕೋವಿಡ್ ಹೆಚ್ಚುತ್ತಿರುವುದರಿಂದ ಆಸ್ಟ್ರೇಲಿಯಾವು ತನ್ನ ಗಡಿ ಪ್ರದೇಶಗಳನ್ನು ಮೇ 15ರ ವರೆಗೆ ಮುಚ್ಚಿದೆ.

ಐಪಿಎಲ್ ಟೂರ್ನಿ ಆರಂಭವಾಗುವುದಕ್ಕೂ ಮೊದಲು ಬಯೊಬಬಲ್ ಸಂಕಟವನ್ನು ಮನಗಂಡು ಜೋಶ್ ಹ್ಯಾಜಲ್‌ವುಡ್, ಮಿಷೆಲ್ ಮಾರ್ಶ್ ಮತ್ತು ಜೋಶ್ ಫಿಲಿಪ್ ಟೂರ್ನಿಯಲ್ಲಿ ಪಾಲ್ಗೊಳ್ಳದೇ ಇರಲು ನಿರ್ಧರಿಸಿದ್ದರು. ಆ್ಯಡಂ ಜಂಪಾ, ಕೇನ್ ರಿಚರ್ಡ್ಸನ್ ಮತ್ತು ಆ್ಯಂಡ್ರ್ಯೂ ಟೈ ಅವರು ಬಯೊಬಬಲ್‌ನಿಂದ ಹೊರಬಂದು ತವರಿಗೆ ತೆರಳಿದ್ದರು.

ಐಪಿಎಲ್‌ನಲ್ಲಿ ಬೆಟ್ಟಿಂಗ್?

ನವದೆಹಲಿ (ಪಿಟಿಐ): ಈ ಬಾರಿಯ ಐಪಿಎಲ್ ಟೂರ್ನಿಯ ಪಂದ್ಯವೊಂದರ ವೇಳೆ ಬುಕಿಗಳು, ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ವ್ಯಕ್ತಿಯೊಬ್ಬನನ್ನು ‘ಪಿಚ್ ಸೈಡಿಂಗ್‘ಗಾಗಿ ನೇಮಿಸಿದ್ದರು ಎಂದು ಬಿಸಿಸಿಐನ ಭ್ರಷ್ಟಾಚಾರ ತಡೆ ಘಟಕದ ಮುಖ್ಯಸ್ಥ ಶಬ್ಬೀರ್ ಹುಸೇನ್ ಖಂಡ್ವಾವಾಲಾ ಬಹಿರಂಗಪಡಿಸಿದ್ದಾರೆ.

ಸ್ವಚ್ಛತಾ ಸಿಬ್ಬಂದಿ, ಪಂದ್ಯ ನಡೆಯುತ್ತಿರುವ ಮತ್ತು ಟಿವಿಯಲ್ಲಿ ನೇರ ಪ್ರಸಾರವಾಗುತ್ತಿರುವ ಸಮಯದ ನಡುವಿನ ವಿಳಂಬವನ್ನು ‘ಬಾಲ್ ಬೈ ಬಾಲ್‘ ಬೆಟ್ಟಿಂಗ್‌ಗೆ ಬಳಸುತ್ತಿದ್ದ ಎನ್ನಲಾಗಿದೆ. ಇದನ್ನು ಪಿಚ್ ಸೈಡಿಂಗ್ ಎಂದು ಕರೆಯಲಾಗುತ್ತದೆ.

‘ನಮ್ಮ ಎಸಿಯು ಅಧಿಕಾರಿಯೊಬ್ಬರು ಆ ವ್ಯಕ್ತಿಯನ್ನು ಹಿಡಿದು ಆತನ ವಿವರಗಳನ್ನು ದೆಹಲಿ ಪೊಲೀಸರಿಗೆ ಹಸ್ತಾಂತರಿಸಿದ್ದಾರೆ‘ ಎಂದು ಹುಸೇನ್ ತಿಳಿಸಿದ್ದಾರೆ. ಈ ಘಟನೆ ಯಾವ ಪಂದ್ಯದಲ್ಲಿ ನಡೆದಿದೆ ಎಂಬುದನ್ನು ಹುಸೇನ್ ಬಹಿರಂಗಪಡಿಸಿಲ್ಲ.

‘ಪ್ರತ್ಯೇಕ ಘಟನೆಗಳಲ್ಲಿ ಇಬ್ಬರು ವ್ಯಕ್ತಿಗಳನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ‘ ಎಂದೂ ಹುಸೇನ್ ತಿಳಿಸಿದ್ದಾರೆ. ಮೇ 2ರಂದು ನಡೆದ ರಾಜಸ್ಥಾನ ಹಾಗೂ ಸನ್‌ರೈಸರ್ಸ್ ಹೈದರಾಬಾದ್ ತಂಡಗಳ ನಡುವಣ ಪಂದ್ಯದಲ್ಲಿ ಇವರಲ್ಲಿ ನಕಲಿ ಪ್ರವೇಶ ಪತ್ರಗಳು ದೊರೆತ ಕಾರಣ ಬಂಧನವಾಗಿದೆ.

‘ಸ್ವಚ್ಛತಾ ಸಿಬ್ಬಂದಿಯ ಎಲ್ಲ ವಿವರಗಳನ್ನು ಸಂಗ್ರಹಿಸಲಾಗಿದೆ. ಆತನ ಆಧಾರ್ ಕಾರ್ಡ್ ಮಾಹಿತಿಯನ್ನು ದೆಹಲಿ ಪೊಲೀಸರಿಗೆ ನೀಡಲಾಗಿದೆ‘ ಎಂದು ಹುಸೇನ್ ನುಡಿದರು.

‘ವ್ಯಕ್ತಿಯು ಕೇವಲ ನೂರು ಮತ್ತು ಸಾವಿರ ರೂಪಾಯಿಗಾಗಿ ಬೆಟ್ಟಿಂಗ್ ಮಾಡುತ್ತಿದ್ದವನಾಗಿರಬಹುದು. ಆದರೆ ಕೋವಿಡ್ ಹಿನ್ನೆಲೆಯಲ್ಲಿ ಬಯೊಸೆಕ್ಯೂರ್‌ನಲ್ಲಿ ಪ್ರವೇಶ ಇರದ ಕಾರಣ ದೊಡ್ಡ ಜಾಲವೊಂದು ಇಂಥವರನ್ನು ನೇಮಿಸಿರುವ ಸಾಧ್ಯತೆಗಳೂ ಇರುತ್ತವೆ’ ಎಂದೂ ಹುಸೇನ್ ಒಪ್ಪಿಕೊಂಡರು.

ಸ್ಪಿನ್ನರ್ ಮೆಕ್‌ಗಿಲ್ ಅಪಹರಣ?

ಸಿಡ್ನಿ (ಪಿಟಿಐ): ಆಸ್ಟ್ರೇಲಿಯಾದ ಮಾಜಿ ಸ್ಪಿನ್ನರ್ ಸ್ಟುವರ್ಟ್ ಮೆಕ್‌ಗಿಲ್ ಅವರನ್ನು ಅಪಹರಿಸಿಕೊಂಡು ಹೋಗಿ ಕೆಲವು ತಾಸುಗಳ ನಂತರ ಬಿಡುಗಡೆ ಮಾಡಿದ ಘಟನೆ ಕಳೆದ ತಿಂಗಳಲ್ಲಿ ನಡೆದಿದೆ ಎಂದು ನ್ಯೂ ಸೌತ್ ವೇಲ್ಸ್ ಪೊಲೀಸರು ಬುಧವಾರ ತಿಳಿಸಿದ್ದಾರೆ.



ಮೆಕ್‌ಗಿಲ್ – ಎಎಫ್‌ಪಿ ಚಿತ್ರ

ಏಪ್ರಿಲ್ 14ರಂದು ಕಾರಿನಲ್ಲಿ ಅವರನ್ನು ಅಪಹರಿಸಿದ್ದ ಆರೋಪಿಗಳು ನಿರ್ಜನ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಹಲ್ಲೆ ನಡೆಸಿ ಬೆದರಿಕೆ ಹಾಕಿದ್ದಾರೆ. ಕಾರ್ಯಾಚರಣೆ ನಡೆಸಿದ ಪೊಲೀಸರು ನಾಲ್ವರನ್ನು ಬಂಧಿಸಿದ್ದಾರೆ ಎಂದು ಆಸ್ಟ್ರೇಲಿಯಾದ ಮಾಧ್ಯಮಗಳು ವರದಿ ಮಾಡಿವೆ. ಹಣಕ್ಕಾಗಿ ಅಪಹರಣ ಮಾಡಲಾಗಿತ್ತು ಎಂದು ತಿಳಿಸಿರುವುದಾಗಿಯೂ ವರದಿಯಾಗಿದೆ.

ಫುಟ್‌ಬಾಲ್ ಆಟಗಾರ ಮೂರ್ತಿ ನಿಧನ

ಬೆಂಗಳೂರು: ಕರ್ನಾಟಕ ಫುಟ್‌ಬಾಲ್ ತಂಡವನ್ನು ಪ್ರತಿನಿಧಿಸಿದ್ದ ಮೂರ್ತಿ (69) ಅವರು ಬುಧವಾರ ಹೃದಯಾಘಾತದಿಂದ ನಿಧನರಾದರು. ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರರಿದ್ದಾರೆ.

1975–76ನೇ ಸಾಲಿನ ಸಂತೋಷ್ ಟ್ರೋಫಿ ಟೂರ್ನಿಯಲ್ಲಿ ರಾಜ್ಯ ತಂಡದ ಪರ ಅವರು ಉತ್ತಮ ಸಾಮರ್ಥ್ಯ ತೋರಿದ್ದರು. ಅವರು ಗಳಿಸಿದ ಗೋಲಿನ ಬಲದಿಂದ ಕರ್ನಾಟಕ ತಂಡವು ಸೆಮಿಫೈನಲ್‌ನಲ್ಲಿ ಮಹಾರಾಷ್ಟ್ರವನ್ನು ಸೋಲಿಸಿ ಪ್ರಶಸ್ತಿ ಸುತ್ತು ತಲುಪಿತ್ತು. ಫೈನಲ್‌ನಲ್ಲಿ ಬಲಿಷ್ಠ ಬಂಗಾಳ ಎದುರು ಸೋತು ರನ್ನರ್‌ಅಪ್ ಆಗಿತ್ತು.

ಭಾರತ ಜೂನಿಯರ್ ತಂಡದ ಶಿಬಿರಕ್ಕೂ ಮೂರ್ತಿ ಆಯ್ಕೆಯಾಗಿದ್ದರು. ಎಚ್‌ಎಎಲ್ ಎಫ್‌ಸಿ ತಂಡದಲ್ಲಿಯೂ ಆಡಿದ್ದರು.

ಬ್ಯಾಸ್ಕೆಟ್‌ಬಾಲ್ ಆಟಗಾರರಿಗೆ ಬಿಎಫ್‌ಐ ವಿಮೆ ಸೌಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆಯ ಹಿನ್ನೆಲೆಯಲ್ಲಿ ಹಣಕಾಸಿನ ತೊಂದರೆ ಎದುರಿಸುತ್ತಿರುವ ಬ್ಯಾಸ್ಕೆಟ್‌ಬಾಲ್ ಆಟಗಾರರಿಗೆ ನೆರವಾಗಲು ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ (ಬಿಎಫ್‌ಐ) ನಿರ್ಧರಿಸಿದೆ. ರಾಷ್ಟ್ರೀಯ ತರಬೇತಿ ಶಿಬಿರದಲ್ಲಿ ಪಾಲ್ಗೊಂಡಿರುವ ಪುರುಷ ಮತ್ತು ಮಹಿಳೆಯರಿಗೆ ವೈದ್ಯಕೀಯ ಮತ್ತು ಆರೋಗ್ಯ ವಿಮೆ ಒದಗಿಸಲಿದೆ. ಆಟಗಾರರ ಆರೋಗ್ಯ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಈ ಸೌಲಭ್ಯ ನೀಡಲಾಗುತ್ತದೆ ಎಂದು ಬಿಎಫ್‌ಐ ಅಧ್ಯಕ್ಷ ಕೆ.ಗೋವಿಂದರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕೆ.ಗೋವಿಂದರಾಜ್

ಆರ್ಥಿಕ ಉತ್ತೇಜನಾ ಕ್ರಮ: ಸೆನ್ಸೆಕ್ಸ್ ಏರಿಕೆ

ಮುಂಬೈ (ಪಿಟಿಐ): ಮೂರು ದಿನಗಳಿಂದ ಇಳಿಮುಖವಾಗಿದ್ದ ದೇಶದ ಷೇರುಪೇಟೆಗಳು ಬುಧವಾರ ಆರ್‌ಬಿಐನ ಆರ್ಥಿಕ ಉತ್ತೇಜನಾ ಕ್ರಮಗಳಿಂದ ಚೇತರಿಕೆ ಹಾದಿಗೆ ಮರಳಿದವು.

ರೂಪಾಯಿ ಮೌಲ್ಯ ಇಳಿಕೆ ಕಂಡರೂ ಬ್ಯಾಂಕಿಂಗ್, ಔಷಧ ಮತ್ತು ಐ.ಟಿ. ವಲಯದ ಷೇರುಗಳ ಚೇತರಿಕೆಯಿಂದಾಗಿ ಸಕಾರಾತ್ಮಕ ವಹಿವಾಟು ನಡೆಯಿತು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 424 ಅಂಶ ಏರಿಕೆ ಕಂಡು 38,677 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 121 ಅಂಶ ಏರಿಕೆಯಾಗಿ 14,617 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ಹಣಕಾಸು, ಐ.ಟಿ. ಮತ್ತು ಫಾರ್ಮಾ ವಲಯದ ಷೇರುಗಳ ಚೇತರಿಕೆಯಿಂದಾಗಿ ದೇಶಿ ಷೇರುಪೇಟೆಗಳು ಚೇತರಿಕೆ ಕಂಡವು. ಆರ್‌ಬಿಐ ಬುಧವಾರ ಘೋಷಿಸಿದ ಕೆಲವು ಕೊಡುಗೆಗಳು ಸಕಾರಾತ್ಮಕ ವಹಿವಾಟಿಗೆ ಪ್ರಮುಖ ಕಾರಣವಾಯಿತು ಎಂದು ರಿಲಯನ್ಸ್ ಸೆಕ್ಯುರಿಟೀಸ್‌ನ ಯೋಜನಾ ಮುಖ್ಯಸ್ಥ ವಿನೋದ್ ಮೋದಿ ತಿಳಿಸಿದ್ದಾರೆ.

ಬಿಎಸ್‌ಇ ಮಿಡ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಶೇ 1.05ರವರೆಗೂ ಏರಿಕೆ ಕಂಡವು. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ 6 ಪೈಸೆ ಇಳಿಕೆ ಕಂಡು ಒಂದು ಡಾಲರ್‌ಗೆ ₹ 73.91ರಂತೆ ವಿನಿಮಯಗೊಂಡಿತು.



ಚಿನ್ನ ಇಳಿಕೆ, ಬೆಳ್ಳಿ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ದರ 10 ಗ್ರಾಂಗೆ ₹ 317ರಷ್ಟು ಇಳಿಕೆ ಆಗಿ ₹ 46,382ರಂತೆ ಮಾರಾಟವಾಯಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಆಗಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ಅದರ ಪರಿಣಾಮ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ. ಬೆಳ್ಳಿ ಬೆಲೆ ಕೆ.ಜಿಗೆ ₹ 2,328ರಷ್ಟು ಏರಿಕೆ ಕಂಡು ₹ 70,270ಕ್ಕೆ ತಲುಪಿತು.

ಸೇವಾ ವಲಯದ ಚಟುವಟಿಕೆ ಇಳಿಕೆ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆಗಳು ಏಪ್ರಿಲ್‌ನಲ್ಲಿ ಮೂರು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿದಿವೆ. ಕೋವಿಡ್–19 ಸಾಂಕ್ರಾಮಿಕದ ಹೆಚ್ಚಳ ಮತ್ತು ಆರ್ಥಿಕ ಬೆಳವಣಿಗೆ ಬಗೆಗಿನ ಆಶಾವಾದ ತಗ್ಗಿರುವುದರಿಂದ ಚಟುವಟಿಕೆಗಳು ಇಳಿಕೆ ಕಾಣುವಂತಾಗಿದೆ ಎಂದು ಐಎಚ್‌ಎಸ್ ಮರ್ಕಿಟ್ ಹೇಳಿದೆ.

ಸೇವಾ ವಲಯದ ಬೆಳವಣಿಗೆಯನ್ನು ತಿಳಿಸುವ ಸೂಚ್ಯಂಕವು ಮಾರ್ಚ್‌ನಲ್ಲಿ 54.6ರಷ್ಟಿತ್ತು. ಇದು ಏಪ್ರಿಲ್‌ನಲ್ಲಿ 54ಕ್ಕೆ ಇಳಿಕೆ ಆಗಿದೆ. ಭಾರತದಲ್ಲಿ ಕೋವಿಡ್–19 ಬಿಕ್ಕಟ್ಟು ಹೆಚ್ಚುತ್ತಿರುವುದನ್ನು ಗಮನಿಸಿದರೆ ಏಪ್ರಿಲ್ ತಿಂಗಳ ಬೆಳವಣಿಗೆಯು ನಿರೀಕ್ಷೆಗಿಂತಲೂ ಉತ್ತಮವಾಗಿದೆ ಎಂದು ಐಎಚ್‌ಎಸ್ ಮರ್ಕಿಟ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ. ಲಿಮಾ ಹೇಳಿದ್ದಾರೆ. ಮುಂಬರುವ ತಿಂಗಳುಗಳಲ್ಲಿ ಗರಿಷ್ಠ ಮಟ್ಟದ ಚಟುವಟಿಕೆಯನ್ನು ಕಂಪನಿಗಳು ನಿರೀಕ್ಷಿಸುತ್ತಿವೆ. ಆದರೆ, ಕೋವಿಡ್‌ಗೆ ಸಂಬಂಧಿಸಿದ ಆತಂಕವು ವ್ಯಾಪಾರ ನಡೆಸುವ ಮನೋಭಾವವನ್ನು ಕುಗ್ಗಿಸುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಸ್ಪರ್ಧಾತ್ಮಕತೆ ಕಾಯ್ದುಕೊಳ್ಳುವ ಮತ್ತು ಹೊಸ ಯೋಜನೆಗಳನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಶೇಕಡ 98ರಷ್ಟು ಕಂಪನಿಗಳು ವೆಚ್ಚ ಹೆಚ್ಚಳದ ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸಿಲ್ಲ. ಕೆಲವೇ ಕೆಲವು ಕಂಪನಿಗಳು ಮಾತ್ರವೇ ಮಾರಾಟದ ದರದಲ್ಲಿ ಏರಿಕೆ ಮಾಡಿವೆ. ಕೋವಿಡ್–19 ಬಿಕ್ಕಟ್ಟು ಮತ್ತು ಪ್ರಯಾಣ ನಿರ್ಬಂಧಗಳು ಭಾರತದ ಸೇವೆಗಳಿಗೆ ಅಂತರರಾಷ್ಟ್ರೀಯ ಬೇಡಿಕೆಯನ್ನು ತಗ್ಗಿಸುತ್ತಿವೆ. ರಫ್ತು ವಹಿವಾಟು ಸತತ 14ನೇ ತಿಂಗಳಿನಲ್ಲಿಯೂ ಇಳಿಕೆ ಕಂಡಿದೆ ಎಂದು ಸಂಸ್ಥೆಯು ತಿಳಿಸಿದೆ. ತಯಾರಿಕೆ ಮತ್ತು ಸೇವಾ ವಲಯದ ಒಟ್ಟಾರೆ ಚಟುವಟಿಕೆಗಳನ್ನು ಸೂಚಿಸುವ ಕಂಪೋಸಿಟ್ ಪಿಎಂಐ ಔಟ್‌ಪುಟ್ ಸೂಚ್ಯಂಕವು 56 ರಿಂದ 55.4ಕ್ಕೆ ಇಳಿಕೆ ಆಗಿದೆ.

ಸಾಲ ಮರುಹೊಂದಾಣಿಕೆಗೆ ಅವಕಾಶ

ಮುಂಬೈ (ಪಿಟಿಐ): ₹ 25 ಕೋಟಿವರೆಗೆ ಸಾಲ ಪಡೆದಿರುವ ವ್ಯಕ್ತಿಗಳು ಹಾಗೂ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ಯಮಗಳಿಗೆ ಸಾಲದ ಮರುಪಾವತಿಗೆ ಹೆಚ್ಚಿನ ಕಾಲಾವಕಾಶ ಪಡೆದುಕೊಳ್ಳುವ ಸೌಲಭ್ಯವನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಕಲ್ಪಿಸಿದೆ.

2020ರಲ್ಲಿ ಸಾಲದ ಮರುಪಾವತಿ ಅವಧಿ ಮರುಹೊಂದಾಣಿಕೆಯ ಪ್ರಯೋಜನ ಪಡೆದುಕೊಳ್ಳದವರಿಗೆ, ಈ ವರ್ಷದ ಮಾರ್ಚ್ 31ರವರೆಗೆ ತಮ್ಮ ಸಾಲದ ಕಂತುಗಳನ್ನು ಸರಿಯಾಗಿ ಪಾವತಿ ಮಾಡಿದವರಿಗೆ ಈ ಬಾರಿ ಮರುಹೊಂದಾಣಿಕೆ ಮಾಡಿಕೊಳ್ಳುವ ಅವಕಾಶ ನೀಡಲಾಗಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಬುಧವಾರ ತುರ್ತು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಸಾಲದ ಮರುಪಾವತಿಯನ್ನು ಗರಿಷ್ಠ ಎರಡು ವರ್ಷಗಳ ಅವಧಿಗೆ ಮರುಹೊಂದಾಣಿಕೆ ಮಾಡಿಕೊಳ್ಳಬಹುದು.



ಶಕ್ತಿಕಾಂತ ದಾಸ್

ಹಿಂದಿನ ವರ್ಷವೂ ಮರುಹೊಂದಾಣಿಕೆ ಯೋಜನೆ ಪ್ರಕಟಿಸಿದ್ದ ಆರ್‌ಬಿಐ, ಸಣ್ಣ ಪ್ರಮಾಣದ ಸಾಲಗಳ ಮರುಪಾವತಿಯನ್ನು ಗರಿಷ್ಠ 2 ವರ್ಷಗಳವರೆಗೆ ವಿಸ್ತರಿಸಲು ಬ್ಯಾಂಕ್‌ಗಳಿಗೆ ಅವಕಾಶ ನೀಡಿತ್ತು. ಈ ಬಾರಿಯೂ ಸಾಲದ ಮರುಪಾವತಿ ಅವಧಿ ವಿಸ್ತರಣೆ ಅಥವಾ ಬಡ್ಡಿ ದರದ ಮರುಹೊಂದಾಣಿಕೆಯ ಸೌಲಭ್ಯವನ್ನು ಬ್ಯಾಂಕ್‌ಗಳು ಸಾಲಗಾರರಿಗೆ ನೀಡಬಹುದು.

‘ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದ ಅಂತ್ಯದ ವೇಳೆಯಲ್ಲಿ ಭಾರತದ ಅರ್ಥ ವ್ಯವಸ್ಥೆಯು ಬೇರೆ ದೇಶಗಳ ಅರ್ಥ ವ್ಯವಸ್ಥೆಗೆ ಹೋಲಿಸಿದರೆ ಉತ್ತಮ ಸ್ಥಿತಿಯಲ್ಲಿತ್ತು. ದೊಡ್ಡ ಮಟ್ಟದ ಬೆಳವಣಿಗೆ ಕಾಣುವ ಸ್ಥಿತಿಯಲ್ಲಿ ಇತ್ತು. ಆದರೆ, ಕೆಲವು ವಾರಗಳ ಅವಧಿಯಲ್ಲಿ ಪರಿಸ್ಥಿತಿಯು ಬಹಳ ಬದಲಾಗಿದೆ’ ಎಂದು ದಾಸ್ ಅವರು ಹೇಳಿದರು.

ಕೋವಿಡ್ ವಿರುದ್ಧ ಹಣಕಾಸು ವಲಯ ನಡೆಸುತ್ತಿರುವ ಹೋರಾಟಕ್ಕೆ ಆರ್‌ಬಿಐ ನೇರವಾಗಿ ಇಳಿದಿದೆ. ಜೀವ ಮತ್ತು ಜೀವನೋಪಾಯದ ಮೇಲೆ ಸ್ಪಷ್ಟ ಗಮನ ಇಟ್ಟುಕೊಂಡು ಈ ಕೆಲಸ ಮಾಡಿದೆ ಎಂದು ಭಾರತೀಯ ಕೈಗಾರಿಕಾ ಮಹಾಸಂಘದ (ಸಿಐಐ) ಅಧ್ಯಕ್ಷ ಉದಯ್ ಕೋಟಕ್ ಅವರು ಪ್ರತಿಕ್ರಿಯೆ ನೀಡಿದ್ದಾರೆ.

ಆದ್ಯತಾ ವಲಯಗಳಿಗೆ ಸಾಲ

ಲಸಿಕೆ ತಯಾರಕರಿಗೆ, ಲಸಿಕೆಯನ್ನು ಆಮದು ಮಾಡಿಕೊಂಡು ದೇಶದಲ್ಲಿ ಪೂರೈಕೆ ಮಾಡುವವರಿಗೆ, ಕೆಲವು ಆದ್ಯತೆಯ ವೈದ್ಯಕೀಯ ಉಪಕರಣ ಸಿದ್ಧಪಡಿಸುವ ಕಂಪನಿಗಳಿಗೆ ಸಾಲ ಕೊಡಲು ಬ್ಯಾಂಕ್‌ಗಳಿಗೆ ಒಟ್ಟು ₹ 50 ಸಾವಿರ ಕೋಟಿ ಒದಗಿಸುವುದಾಗಿ ಆರ್‌ಬಿಐ ಪ್ರಕಟಿಸಿದೆ.

ಆಸ್ಪತ್ರೆಗಳು, ಆಮ್ಲಜನಕ ತಯಾರಕರು ಮತ್ತು ಪೂರೈಕೆದಾರರು, ವೆಂಟಿಲೇಟರ್ ತಯಾರಕರು ಮತ್ತು ಪೂರೈಕೆದಾರರು, ಕೋವಿಡ್‌ಗೆ ಸಂಬಂಧಿಸಿದ ಔಷಧಗಳನ್ನು ಆಮದು ಮಾಡಿಕೊಳ್ಳುವವರು, ಸರಕು ಸಾಗಣೆ ಕಂಪನಿಗಳಿಗೆ ಕೂಡ ಈ ಮೊತ್ತ ಬಳಸಿ ಸಾಲ ವಿತರಣೆ ಮಾಡಬಹುದು ಎಂದು ಆರ್‌ಬಿಐ ಹೇಳಿದೆ. ಈ ನಿಧಿಯಿಂದ ನೀಡುವ ಸಾಲ ಮೂರು ವರ್ಷಗಳ ಅವಧಿಯದ್ದಾಗಿರಲಿದೆ. 2022ರ ಮಾರ್ಚ್ 31ರವರೆಗೆ ಇದು ಲಭ್ಯವಿರಲಿದೆ.

‘ಕಠಿಣ ಕ್ರಮ ಬೇಡ’

ಕೆವೈಸಿ ನಿಯಮಗಳ ಅಡಿ ಅಗತ್ಯ ದಾಖಲೆಗಳನ್ನು ಸಲ್ಲಿಸಲು ಗ್ರಾಹಕರಿಗೆ ಆಗದಿದ್ದಲ್ಲಿ, ಅಂತಹ ಗ್ರಾಹಕರ ವಿರುದ್ಧ ಡಿಸೆಂಬರ್ ಕೊನೆಯವರೆಗೆ ಕಠಿಣ ಕ್ರಮಗಳನ್ನು ಕೈಗೊಳ್ಳುವುದು ಬೇಡ ಎಂದು ಆರ್‌ಬಿಐ, ಬ್ಯಾಂಕ್‌ಗಳಿಗೆ ಹಾಗೂ ಹಣಕಾಸು ಸಂಸ್ಥೆಗಳಿಗೆ ಸಲಹೆ ನೀಡಿದೆ.

ಮುಂಬೈ ಧಾರಣೆ

ಶೇಂಗಾ

5-5-2021

ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9350-9400
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1592)
ಒಂದು ವಾರದ ಡೆಲಿವರಿ	1585 (1585)
ಸೋಯಾ ಕಚ್ಚಾ	1420 (1400)
ಪಾಮ್ ವಾರದ ಡೆಲಿವರಿ	1343 (1343)
ಸೂರ್ಯಕಾಂತಿ ಎಣ್ಣೆ ಕಚ್ಚಾ	1680 (1680)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)


ಅಪರಂಜಿ ಚಿನ್ನ 10 ಗ್ರಾಂ
46,650 (46,900)
ಬೆಳ್ಳಿ ಕೆ.ಜಿ 69,000 (70,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	22500-40000
ಹಳತು	42500-50000
ಪುತ್ತೂರು	
ಹೊಸತು	28000-39500
ಹಳತು	39500-49500
ಸಿದ್ದಾಪುರ	
ಬಿಳಿಗೋಟು	24119-30669
ಕೋಕ	17089-29299
ಚಾಲಿ	34399-36509
ಕೆಂಪುಗೋಟು	26089-26089
ರಾಶಿ	40139-40209
ತಟ್ಟಿಬೆಟ್ಟೆ	29099-41099
ಶಿರಸಿ	
ಬೆಟ್ಟೆ	30339-37009
ಬಿಳಿಗೋಟು	22029-32662
ಚಾಲಿ	27690-37098
ರಾಶಿ	35389-40699
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	233-340
ದ್ವಿತಳಿ (ಬಿ.ವಿ)	270-398

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,496
ಇಂದಿನ ಅಂತ್ಯ	14,617
▲	121
ದಿನದ ಗರಿಷ್ಠ	14,637

ವಿನಿಮಯ ದರ

$ ಡಾಲರ್	73.91
£ ಪೌಂಡ್	102.71
€ ಯುರೊ	88.73
¥ ಯೆನ್ (100ಕ್ಕೆ)	68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹425
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹427

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1580 (1580)
ಸೋಯಾ (ರಿಫೈನ್ಡ್)	₹1425 (1413)
ಸೂರ್ಯಕಾಂತಿ (ರಿಫೈನ್ಡ್)	₹1730 (1730)
ಪಾಮೋಲಿನ್	₹1345 (1345)

ಮಹಿಳೆಯರೇ ಮುನ್ನಡೆಸುವ ಉದ್ಯಮ...



ಎಂ. ಶ್ರೀನಿವಾಸ ರಾವ್
ಗ್ಲೋಬಲ್ ಅಲಯನ್ಸ್ ಫಾರ್ ಮಾಸ್ ಆಂತ್ರಪ್ರೇನರ್‌ಷಿಪ್‌ನ ಸಿಇಒ

ಸ್ಫೂರ್ತಿಯ ಉದ್ಯಮಿ

‘ಉದ್ಯಮಿಯಾಗಬೇಕೆಂಬುದು ಚಿಕ್ಕಂದಿನಿಂದಲೂ ನನ್ನಲ್ಲಿದ್ದ ಆಸೆ. ಆ ನಿಟ್ಟಿನಲ್ಲಿಯೇ ಕಲಿಕೆ ಮುಂದುವರೆಸಬೇಕು ಎಂದು ಬಯಸಿದ್ದೆ. ನನ್ನ ಕನಸಿನ ಉದ್ಯಮಕ್ಕೆ ಸಂಬಂಧಿಸಿದ ಬ್ರ್ಯಾಂಡ್‌ಗಳನ್ನು ಆಯ್ಕೆ ಮಾಡಿ ಅವುಗಳಲ್ಲಿ ಕೆಲಸ ಮಾಡಿದೆ. ಉದ್ಯಮಿಯಾಗುವ ಮುನ್ನ ಅಲ್ಲಿರುವ ವ್ಯವಸ್ಥೆ, ಪ್ರಕ್ರಿಯೆಗಳನ್ನೆಲ್ಲ ಕಲಿತುಕೊಂಡೆ’.

–ಇದು ಬೆಂಗಳೂರಿನಲ್ಲಿ ಭೋಗರಾಜು ಫುಡ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ ನಡೆಸುತ್ತಿರುವ ವಸುಧಾ ಅವರ ಮಾತುಗಳು. ಅವರ ಸಾಹಸಕ್ಕೆ ತಾಯಿ ಜೊತೆಯಾಗಿದ್ದಾರೆ. ಉದ್ಯಮಕ್ಕೆ ಸರಿಯಾದ ಕೌಶಲವನ್ನು ಗಳಿಸಿಕೊಳ್ಳಲು ವಸುಧಾ ಎಂಬಿಎ ಪದವಿ ಪಡೆದಿದ್ದಲ್ಲದೆ, ಎರಡು ದಶಕಗಳ ಕಾಲ ಐ.ಟಿ., ಬ್ಯಾಂಕಿಂಗ್ ಮತ್ತು ಟೆಲಿಕಾಂ ಕ್ಷೇತ್ರಗಳಲ್ಲಿ ಕೆಲಸ ಮಾಡಿ ಪ್ರಾಯೋಗಿಕ ಅನುಭವ ಗಳಿಸಿದರು. ಅವರ ಪೋಷಕರು 1984ರಿಂದಲೂ ಲಕ್ಷ್ಮಿ ಫುಡ್ ಇಂಡಸ್ಟ್ರೀಸ್ ಕಂಪನಿಯನ್ನು ಯಶಸ್ವಿಯಾಗಿ ನಡೆಸುತ್ತಿದ್ದರು. ಮನೆಯಲ್ಲೇ ತಯಾರಿಸಿದ ಉಪ್ಪಿನಕಾಯಿ, ಮಸಾಲೆ ಪುಡಿಗಳು, ಚಟ್ನಿ ಪುಡಿಗಳನ್ನು ಇದು ಮಾರಾಟ ಮಾಡುತ್ತಿತ್ತು. ವಸುಧಾ ಅವರಿಗೆ ಇದೇ ಪ್ರೇರಣೆ ನೀಡಿತ್ತು.

ತಮ್ಮ ಪಯಣದ ಬಗ್ಗೆ ಮಾತನಾಡುವ ವಸುಧಾ, ಹೊಸ ವಿಷಯ ಕಲಿಯಬೇಕು ಹಾಗೂ ಉದ್ಯಮಿ ಆಗಬೇಕು ಎಂಬ ಬಯಕೆಯೇ ತಮ್ಮ ಕಂಪನಿಗೆ ಪ್ರೇರಣೆ ಎನ್ನುತ್ತಾರೆ. ತಪ್ಪುಗಳು ಹೊಸದನ್ನು ಕಲಿಯುವುದಕ್ಕೆ ಅವಕಾಶ ಎಂದು ಭಾವಿಸುವ ವಸುಧಾ ಅವುಗಳಿಂದಲೇ ಉದ್ಯಮವನ್ನು ಸುಧಾರಿಸಿದರು. 2018ರಲ್ಲಿ ವಸುಧಾ ಉದ್ಯಮ ಆರಂಭಿಸಿದರು. ಇ–ವಾಣಿಜ್ಯ ಕ್ಷೇತ್ರ ಪಡೆದುಕೊಳ್ಳುತ್ತಿದ್ದ ಜನಪ್ರಿಯತೆ ಗಮನಿಸಿ ವೆಬ್‌ತಾಣ ಆರಂಭಿಸಿ ಆದಾಯ ಹೆಚ್ಚಿಸಿಕೊಂಡರು. ಮಾರುಕಟ್ಟೆಯ ಅಧ್ಯಯನ ನಡೆಸಿದರು. ಭೋಗರಾಜು ಪ್ರೈವೇಟ್ ಲಿಮಿಟೆಡ್ ಕಂಪನಿಯನ್ನು ಹುಟ್ಟುಹಾಕಿದರು.

ಕೋವಿಡ್–19 ಸಾಂಕ್ರಾಮಿಕದ ಕಾರಣದಿಂದಾಗಿ ಜಾರಿಗೆ ಬಂದ ಲಾಕ್‌ಡೌನ್ ಕ್ರಮಗಳು ಭೋಗರಾಜು ಕಂಪನಿಯ ಮೇಲೆಯೂ ದುಷ್ಪರಿಣಾಮ ಬೀರಿತು. ಹಲವು ಪಾಲುದಾರರು ವಹಿವಾಟು ಸ್ಥಗಿತಗೊಳಿಸಿದ್ದರಿಂದ ಬೇಡಿಕೆ ಇಳಿಮುಖವಾಯಿತು.

ಆದರೆ, ‘ಭೋಗರಾಜು’ ಅಗತ್ಯ ಸೇವೆಗಳ ವ್ಯಾಪ್ತಿಯಲ್ಲಿ ಇದ್ದುದರಿಂದ ಗ್ರಾಹಕರು ಉತ್ಪನ್ನಗಳ ಸಗಟು ಖರೀದಿಗೆ ಮುಂದಾದರು. ಆನ್‌ಲೈನ್ ಮಾರಾಟದಿಂದ ಬಂದ ಆದಾಯ ಹಿಂದಿನ ಮತ್ತು ಈ ವರ್ಷದ ನಷ್ಟವನ್ನು ಸರಿದೂಗಿಸಿತು. ಅರಿಸಿಣ ಬಳಕೆಯು ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ಎಂದು ನಂಬಲಾಗಿದೆ. ಹಾಗಾಗಿ ಕಂಪನಿಯು ಅರಿಸಿಣದ ಉಪ್ಪಿನಕಾಯಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿತ್ತು.

‘ನನ್ನ ತಾಯಿಯೇ ನನ್ನ ಆಧಾರಸ್ತಂಭ. ಕಂಪನಿಯಲ್ಲಿನ ಶೇಕಡ 95ರಷ್ಟು ಸಿಬ್ಬಂದಿ ಮಹಿಳೆಯರು. ವಿವಿಧ ಕೆಲಸಗಳಿಗೆ ನಾವು ಮಹಿಳೆಯರನ್ನೇ ನೇಮಿಸಿ ಅವರ ಸಬಲೀಕರಣಕ್ಕೆ ಪ್ರಯತ್ನಿಸುತ್ತಿದ್ದೇವೆ. ಉದ್ಯಮಿಯಾಗಿ ಅಗತ್ಯವಿರುವ ಹಣಕಾಸು ಹೊಂದಿಸುವುದು ದೊಡ್ಡ ಸವಾಲು. ಆದರೆ ಕಂಪನಿಯ ವಹಿವಾಟನ್ನು ವೃದ್ಧಿಸಲು ಇದು ಅಡೆತಡೆ ಎನಿಸಲೇ ಇಲ್ಲ. ಸಿಬ್ಬಂದಿಯ ಹಿತ ಕಾಯುವುದು ನಮ್ಮ ಮುಖ್ಯ ಗುರಿ. ಯಾವುದೇ ಪ್ರತಿಕೂಲ ಪರಿಸ್ಥಿತಿಯೂ ಅವರ ವೇತನಕ್ಕೆ ಅಡ್ಡಿಯಾಗದಂತೆ ನೋಡಿಕೊಳ್ಳುತ್ತಿದ್ದೇವೆ’ ಎಂದು ವಸುಧಾ ಹೇಳುತ್ತಾರೆ.

‘ಉದ್ಯಮಿಯಾಗುವ ಬಯಕೆ ಇರುವವರಿಗೆ ನಾನು ಹೇಳುವುದಿಷ್ಟು. ನಿಮ್ಮಲ್ಲಿ ಏನಾದರೂ ಹೊಸ ಆಲೋಚನೆಗಳಿದ್ದರೆ, ಅದರ ಮೇಲೆ ವಿಶ್ವಾಸವಿಟ್ಟು ಮುಂದುವರೆಯಿರಿ. ನಿಮ್ಮ ಬಗ್ಗೆ ನಂಬಿಕೆ ಇರಲಿ. ಉದ್ಯಮದತ್ತ ಮೊದಲ ಹೆಜ್ಜೆ ಇಡಿ. ಉಳಿದಿದ್ದು ತಾನಾಗಿಯೇ ಹಿಂಬಾಲಿಸುತ್ತದೆ’.



ವಸುಧಾ ತಮ್ಮ ತಾಯಿಯ ಜೊತೆ



ಸತತ ಎರಡನೇ ದಿನವೂ ತೈಲ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ದೇಶದಾದ್ಯಂತ ಸತತ ಎರಡನೇ ದಿನವೂ ಪೆಟ್ರೋಲ್, ಡೀಸೆಲ್ ದರ ಹೆಚ್ಚಿಸಿವೆ.

ದೆಹಲಿಯಲ್ಲಿ ಪೆಟ್ರೋಲ್ ದರ ಲೀಟರಿಗೆ 19 ಪೈಸೆ ಹೆಚ್ಚಾಗಿ ₹ 90.74ಕ್ಕೆ ತಲುಪಿದೆ. ಡೀಸೆಲ್ ದರ 21 ಪೈಸೆ ಹೆಚ್ಚಾಗಿ ₹ 81.12ಕ್ಕೆ ತಲುಪಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ದರ 10 ಪೈಸೆ ಮತ್ತು ಡೀಸೆಲ್ ದರ 14 ಪೈಸೆ ಹೆಚ್ಚಾಗಿದ್ದು, ಕ್ರಮವಾಗಿ ₹ 93.77 ಮತ್ತು ₹ 86.01ರಂತೆ ಮಾರಾಟವಾಗಿವೆ.

ಭಾರತದಲ್ಲಿ ಹೆಚ್ಚುತ್ತಿರುವ ಕೋವಿಡ್–19 ಪ್ರಕರಣಗಳು ಇಂಧನ ಬೇಡಿಕೆಯನ್ನು ತಗ್ಗಿಸುತ್ತಿವೆ ಎನ್ನುವ ಆತಂಕದ ಇದ್ದರೂ, ಅಮೆರಿಕದಲ್ಲಿ ತೈಲ ಬೇಡಿಕೆ ಹೆಚ್ಚಳ ಮತ್ತು ಡಾಲರ್ ಮೌಲ್ಯ ಇಳಿಕೆ ಆಗುತ್ತಿರುವ ಕಾರಣಗಳಿಂದಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರಿಕೆ ಆಗಿದೆ. ಏಪ್ರಿಲ್ 27ರ ನಂತರ ಕಚ್ಚಾತೈಲ ದರ ಏರಿಕೆ ಆಗುತ್ತಲೇ ಇದೆ.